ಸಂಚಿಕೆ ೧೦೮



ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ಸಂಚಯ
ಗ್ಯಾ|ಲ|ರಿ|



■ ಸಂಚಿಕೆ: ೧೦೮

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

■ ತ್ರೈಮಾಸಿಕ ■ ಜುಲೈ-ಸೆಪ್ಟೆಂಬರ್ ೨೦೧೫

ಉಸುರು ಇದ್ದದ್ದು ಪ್ರತಿಯೊಂದಕ್ಕೆ ಇತಿಹಾಸ
ಬೇರೆ, ಹಾಸ ಬೇರೆ, ವಿಕಾಸ ವಿಲಾಸ ಬೇರೆ ಗುರಿಪಾಶ
ಬೇರೆ. ನಿನ್ನ ನಕಾಶೆಗೆ ಸಿಕ್ಕದೇ ನುಣುಚಿ, ತನ್ನ ಜೀವ ಪತಾಕೆ
ಎತ್ತಿ ಎತ್ತಿ ಕಾದಾಡುವುದು ಪ್ರತ್ಯೇಕತೆಯ
ಬೆಳಕಿನುಪ್ಪರಿಗೆ ಕಟ್ಟುತ್ತ, ಕಟ್ಟುತ್ತ-ಕೊನೆವರೆಗೆ.

ಗೋಪಾಲಕೃಷ್ಣ ಅಡಿಗ
(ಸಾಮಾನ್ಯನಂತೆ ಈ ನಾನು!)

ಸಂಪಾದಕ :
ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ, ೩ನೇ ಘಟ್ಟ,
ಬನಶಂಕರಿ, ಬೆಂಗಳೂರು - ೫೬೦ ೦೮೫
ಫೋನ್‌ನಂ.:೦೮೦-೨೬೭೯೧೯೨೫
ಮೊಬೈಲ್: ೯೮೪೪೦ ೬೩೫೧೪
email:
sanchaya.sahityapatrike@gmail.com

● ಮುಖಪುಟ ಕೃತಿ: ಜಾಫರ್ ಶೇಖ್, ಪುಟವಿನ್ಯಾಸ: ಎಂ.ಆರ್. ಗುರುಪ್ರಸಾದ್

ಚಂದಾವಿವರ | ● ವಾರ್ಷಿಕ ಚಂದಾ : ರೂ. ೩೦೦/- (ಮುನ್ನೂರು ರೂ.ಗಳು-ನಾಲ್ಕು ಸಂಚಿಕೆಗಳಿಗೆ)

ಚೆಕ್/ಡಿ.ಡಿ. ಮೂಲಕ ಚಂದಾ ಕಳಿಸುವವರು 'ಸಂಚಯ', ಬೆಂಗಳೂರು ಎಂಬ ಹೆಸರಿಗೆ ಕಳುಹಿಸಿ ಅಥವಾ
ಕೆನರಾಬ್ಯಾಂಕ್, ಬೆಂಗಳೂರಿನ ಗಿರಿನಗರ ಶಾಖೆ ಉಳಿತಾಯ ಖಾತೆ ಸಂ.: **1821101004682**ಗೆ
ಐಎಫ್‌ಎಸ್‌ಸಿ ಕೋಡ್: CNRB 0001821 - ಜಮಾ ಮಾಡಬಹುದು.

ಹೊಳೆದದ್ದು ತಾರೆ ಉಳಿದದ್ದು ಆಕಾಶ!

ಪ್ರಿಯ ಒದುಗರೇ

ಚಿತ್ತಾಲ ಸಂಚಿಕೆಯ ನಂತರ ಒಂದು ದೊಡ್ಡ ಕಾಲಾಂತರ. ಎಂ.ಎಂ. ಕಲಬುರ್ಗಿ ಅವರ ಹತ್ಯೆ ನಮ್ಮ ನಾಡಿನಲ್ಲಿ ಘಟಿಸಿದ ಅತ್ಯಂತ ಹೇಯ ಕೃತ್ಯ; ಖಂಡನೀಯ ಹತ್ಯೆ. ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ವಿವಾದಗಳು ಹಾಗೂ ಧ್ರುವೀಕರಣಗಳು ನಮ್ಮ ಕಣ್ಣಳತೆಗೆ ಸಧ್ಯಕ್ಕೆ ದಕ್ಕುತ್ತಿಲ್ಲ. ಯಾರು ಯಾಕಾಗಿ ಈ ಹತ್ಯೆ ನಡೆಸಿದ್ದಾರೆ ಎನ್ನುವ ಬಗೆಗೇ ಸ್ಪಷ್ಟತೆ ದೊರೆಯುತ್ತಿಲ್ಲ. ಇದೊಂದು ವೈಚಾರಿಕ ಭಿನ್ನಾಭಿಪ್ರಾಯಕ್ಕಾಗೇ ನಡೆದ ಹತ್ಯೆ ಅಂತ ಕೆಲವರು ನಿರ್ಣಯಿಸತೊಡಗಿದ್ದಾರೆ. ಹಾಗೆ ನೋಡಿದರೆ ಕಲ್ಬುರ್ಗಿ ಅವರ ಈಚಿನ ಬರಹಗಳು, ಭಾಷಣಗಳು, ಅಭಿಪ್ರಾಯಗಳು ಅವರನ್ನು ಹತ್ಯೆ ಮಾಡುವಷ್ಟು ವಿವಾದ ಹುಟ್ಟಿಸುವ ಸಂಗತಿಗಳನ್ನೇನೂ ಹೊಂದಿರಲಿಲ್ಲ. ವೈಜ್ಞಾನಿಕತೆಯನ್ನು ಬದುಕಿನ ಎಲ್ಲಾ ಹಂತಗಳಲ್ಲೂ ಪ್ರತಿಪಾದಿಸುವ ಲೇಖಕ ಲೋಕ ತನಿಖೆ ಮುಗಿಯುವ ಮುನ್ನವೇ ತನ್ನ ನಿರ್ಣಯಗಳನ್ನು ಪ್ರಕಟಿಸುವುದು ಎಷ್ಟರಮಟ್ಟಿಗೆ ವೈಜ್ಞಾನಿಕ? ಯಾವ ಸರ್ಕಾರವನ್ನು ನಮ್ಮ ಲೇಖಕ ಲೋಕದ ಬಹುಸಂಖ್ಯಾತರು ಮೆಚ್ಚಿ, ಬೆಂಬಲಿಸಿ ಬೆನ್ನಿಗೆ ನಿಂತಿದ್ದರೋ ಅದೇ ಸೆಕ್ಯುಲರ್ ಸರ್ಕಾರ ಈಗ ನಡೆಸುತ್ತಿರುವ ತನಿಖೆಯ ಫಲವನ್ನು ತಾಳ್ಮೆಯಿಂದ ಕಾಯಬೇಕಾಗಿದೆ.

ನನ್ನ ಬಾಲ್ಯ ಕಾಲದ ಒಬ್ಬ ವ್ಯಕ್ತಿಯ ಬಗ್ಗೆ ಇಲ್ಲಿ ಹಂಚಿಕೊಳ್ಳಬೇಕೆನಿಸುತ್ತಿದೆ. ಅವನ ಹೆಸರು ನಾಗ ಅಂತ. ಬೇರೆ ಇದ್ದೀತಾದರೂ ಅವನನ್ನು ನಮ್ಮ ಮಲ್ಲೇಶ್ವರದ ಎಂಟನೇ ಕ್ರಾಸಿನ ಜನ ಗುರುತಿಸುತ್ತಿದ್ದದ್ದು ಹಾಗೆ. ಅದರಲ್ಲೂ 'ಡೋಳ್ ಡೋಳ್ ನಾಗ' ಅವನ ಅಡ್ಡ ಹೆಸರು. ನೋಡಲಿಕ್ಕೆ ಎಲ್ಲ ಹಾಗೆ ಸಾಮಾನ್ಯನಂತಿದ್ದರೂ ಅರೆತಿಕ್ಕಲು ಅವನಿಗೆ. ಅವನು ರಸ್ತೆಯಲ್ಲಿ ಓಡಾಡುವಾಗ ಯಾರಾದರೂ 'ಡೋಳ್ ಡೋಳ್' ಅಂದುಬಿಟ್ಟರೆ, ಅವನ ಪಿತ್ಥ ಕೆರಳುತ್ತಿತ್ತು. ಅವನು ತನ್ನ ಬೈಗುಳದ ಭಂಡಾರವನ್ನೇ ತೆರೆದು ಬಾಯಿಗೆ ಬಂದಂತೆ ಕೂಗಾಡುತ್ತಿದ್ದ. ಬೀದಿ ನಾಯಿಯ ಹಾಗೆ. ಒಂದು ನಾಯಿಯನ್ನು ಕೆರಳಿಸುವಷ್ಟೇ ಸುಲಭಕ್ಕೆ ನಾಗನನ್ನು ಕೆರಳಿಸಬಹುದಾಗಿತ್ತು. ಕೆಲವು ಕಿಡಿಗೇಡಿಗಳು ಗುಂಪಿನಲ್ಲಿ ಅವನಿಗೆ ಗೊತ್ತಾಗದ ಹಾಗೆ, ಆದರೆ ಕೇಳುವ ಹಾಗೆ 'ಡೋಳ್ ಡೋಳ್' ಅಂದುಬಿಟ್ಟರೆ ಆಯ್ತು. ನಾಗ ತನ್ನ ಬೈಗುಳದಲ್ಲಿ ಅಗೋಚರ ಶತ್ರುವಿನ 'ಅಮ್ಮ, ಅಕ್ಕಂದಿರ'ನ್ನೆಲ್ಲಾ ಜಾಲಾಡಿ ಕಿವಿ ಮುಚ್ಚಿಕೊಳ್ಳುವಷ್ಟು ಕೂಗಾಡಿ ಕೊನೆಗೆ ಸುಸ್ತಾಗಿ ತೆಪ್ಪಗಾಗುತ್ತಿದ್ದ. ಕೆಲವರಿಗೆ ಅವನನ್ನು ಹೀಗೆ ಕೆರಳಿಸಿ ಮನರಂಜನೆ ಪಡೆಯುವ ವಿಕೃತಿಯೂ ಇತ್ತು.

ನಮ್ಮ ಸಾರ್ವಜನಿಕ ವಿವಾದಗಳು ಹಾಗೂ ಅವುಗಳನ್ನು ಕುರಿತಾದ ನಮ್ಮ ಧಾಟಿ 'ಡೋಳ್ ಡೋಳ್ ನಾಗ'ನ ಹಾಗೆ ಆಗುತ್ತಿಗೆಯೇ ಅಂತ ಅನುಮಾನ ನನಗೆ. ಇವರು ಅವರನ್ನು, ಅವರು ಇವರನ್ನು ಪರಸ್ಪರ ಕೊಳಕು ಕೊಳಕಾಗಿ ನಿಂದಿಸಿಕೊಳ್ಳುತ್ತಾ ನಮ್ಮ ವಾತಾವರಣವನ್ನು ಇಷ್ಟೊಂದು ಗಲೀಜುಗೊಳಿಸಿಕೊಳ್ಳುತ್ತಾ ಇದ್ದೀವಾ ಅಂತ ಆತಂಕ.

ನಮ್ಮ ಮಾಧ್ಯಮಗಳು ಈ ವರ್ತನೆಯ ಬಹುಮುಖ್ಯವಾದ ವಾಹಕಗಳಾದಂತೆ ತೋರುತ್ತಿದೆ. ಯಾವುದಾದರೂ ಒಂದು ಮಾತು ಹೇಳಿಕೆಯನ್ನು ವೈಭವೀಕರಿಸಿ, ವಿಕೃತಗೊಳಿಸಿ, ಕೆರಳಿಸುವುದಕ್ಕಾಗೇ ಬಳಸುವುದು. ಅಂಥಾ ಕೆರಳುವಿಕೆಯಿಂದ ಹುಟ್ಟುವ ಜಗಳ, ವಿವಾದ ಹೇಳಿಕೆ-ಪ್ರತಿಹೇಳಿಕೆಗಳು ನಮ್ಮ ಇವತ್ತಿನ ಅಭಿರುಚಿಯ ಪ್ರತಿಬಿಂಬವಾಗತೊಡಗಿದೆ. ನಮ್ಮ ಸಾಮಾಜಿಕ ಸಂವಾದಗಳಿಗೆ ಚರ್ಚೆ-ವಿವಾದಗಳಿಗೆ ಒಂದು ಘನತೆ ಮತ್ತು ಸಂಯಮ ಇಲ್ಲವಾಗಿದೆ. ರಾಜಕಾರಣಿಗಳಿಗಷ್ಟೇ ಅಂದುಕೊಂಡಿದ್ದ ಈ ರೋಗ ಸಮುದಾಯದ ಉಳಿದವರಿಗೂ ಹಬ್ಬಿದೆ. ಹಾಗೆ ಇಲ್ಲೇಳುವ ಮತ್ತೊಂದು ಮುಖ್ಯ ಪ್ರಶ್ನೆ; ಈ ಎಲ್ಲಾ ವಾದ-ವಿವಾದ ಯುದ್ಧಗಳು ಮಾಧ್ಯಮಗಳಲ್ಲಷ್ಟೇ ಘಟಿಸುತ್ತಿವೆ. ತಲೆ ಎತ್ತಿದರೆ ಯಾವತ್ತಿನ ಮೋಡ ತುಂಬಿದ ಆಕಾಶ, ಚಳಿ ನಿರುಮ್ಮಳವಾಗಿದೆ ಜಗತ್ತು. ತನ್ನ ಯಾವತ್ತಿನ ದೈನಿಕದ ನೆಮ್ಮದಿಯ ಹೊಡೆದಾಟದಲ್ಲಿ ನಿತ್ಯದಂತೆ ನಿರತವಾಗಿದೆ.

ಕಲ್ಬುರ್ಗಿ ಹತ್ಯೆ ಹುಟ್ಟಿಸಿದ ತಲ್ಲಣದ ಅಲೆ ಬಹಳ ಬಲವಾದದ್ದು. ಸಹಜವಾಗೇ ಅದು ಅನೇಕ ಪ್ರಶ್ನೆಗಳನ್ನು, ಭಾವುಕ ಪ್ರತಿಕ್ರಿಯೆಗಳನ್ನು ಹುಟ್ಟುಹಾಕಿದೆ. ಅನೇಕರು ಪ್ರಶಸ್ತಿಗಳನ್ನು ವಾಪಸ್ಸು ಕೊಡುವ ಮೂಲಕ ತಮ್ಮ ಸಾತ್ತ್ವಿಕ ಪ್ರತಿಭಟನೆ ಸಲ್ಲಿಸಿದ್ದಾರೆ. ಅದು ಗೌರವಾರ್ಹವಾದದ್ದು. ಆದರೆ, ಈ ವಾಪಸಾತಿ ಹುಟ್ಟಿಸಿದ ಪ್ರಶ್ನೆಗಳ ಸರಮಾಲೆಯೂ ಇದೆ. ಆದರೆ, ಅವುಗಳ ಉತ್ತರಗಳು ಮಾತ್ರ ಗೊಂದಲಕಾರಿಯಾಗಿದೆ. ಅಸಹಿಷ್ಣುತೆ ಯಾವ ಕಾಲದಲ್ಲಿ ಇರಲಿಲ್ಲ? ಈಗಷ್ಟೇ ಅದು ಪ್ರಬಲವಾಯ್ತೆ ಎಂಬ ಪ್ರಶ್ನೆಗೆ, ಕೇಂದ್ರ ಸಾಹಿತ್ಯ ಅಕಾಡೆಮಿ ಕಲ್ಬುರ್ಗಿ ಹತ್ಯೆ ಕುರಿತು ಸರ್ಕಾರಕ್ಕೆ ಖಂಡಿಸಿ ಪ್ರತಿಭಟನೆ ಸಲ್ಲಿಸಲಿಲ್ಲ ಎಂಬುದಾಗಲೀ, ಅದಕ್ಕಿರುವ ಒತ್ತಡಗಳನ್ನು ಸಾರ್ವಜನಿಕವಾಗಿ ನಮ್ಮ ಲೇಖಕ ಲೋಕ ಮನವರಿಕೆ ಮಾಡಿಕೊಡಲು ವಿಫಲವಾಯ್ತು. ಸಂಯಮ ಅನ್ನುವುದನ್ನು ನೀಗಿಕೊಂಡಿರುವ ನಮ್ಮ ದೃಶ್ಯಮಾಧ್ಯಮಗಳು, ಫೇಸ್‌ಬುಕ್, ಟ್ವಿಟ್ಟರ್ ಮೊದಲಾದ ಸಾಮಾಜಿಕ ಮಾಧ್ಯಮಗಳು ಅವುಗಳ ಗುಂಪುಗಳು ಪರಸ್ಪರ ಕೆಸರೆರಚಾಟದಲ್ಲಿ ನಿರತವಾಗುತ್ತಿವೆ. ಆಗ ಬೇಡವೆಂದರೂ 'ಡೋಳ್ ಡೋಳ್ ನಾಗ'ನ ನೆನಪಾಗುತ್ತದೆ.

ಬಲಪಂಥೀಯ ಗುಂಪುಗಳ ಮುಖಭಂಗ ಮಾಡಲೆಂದೇ ಅಗೋಚರ ಪ್ರಗತಿಪರ ಗುಂಪಿನ ಕೈವಾಡದ ಫಲವಾಗಿ ಭಗವಾನ್‌ರಂಥಾ ವಿವಾದಿತ ಲೇಖಕರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ನೀಡಲಾಗಿದೆ. ಅವರಷ್ಟೇ ಅಥವಾ ಅವರಿಗಿಂತಲೂ ಕಳಪೆ ಕೆಲಸ ಮಾಡಿದವರಿಗೆ ಈ ಹಿಂದೆ ಪ್ರಶಸ್ತಿಗಳು ದೊರಕಿದೆ. ಈ ಸರ್ಕಾರಿ ವ್ಯವಸ್ಥೆಯಲ್ಲಿ ಅದಕ್ಕಿಂತಲೂ ಬೇರೇನನ್ನು ನಿರೀಕ್ಷಿಸಲು ಸಾಧ್ಯ? ಕಳೆದ ಸಲ ಮಹಿಳೆಯೊಬ್ಬರಿಗೆ ಅವರು ಮತ್ತೆ ಮತ್ತೆ ಕೇಳುತ್ತಿದ್ದರೂ ಅದಕ್ಕೇ ಅವರಿಗೆ ಗೌರವ ಪ್ರಶಸ್ತಿ ಕೊಡಲಾಗಿದೆ ಎಂದರು. ಪ್ರಶಸ್ತಿ ಕೊಡುವುದಕ್ಕೂ ಪಡೆದುಕೊಳ್ಳುವುದಕ್ಕೂ ಯಾವ ನೈತಿಕತೆ ಇಲ್ಲದ ಈ ಸಂದರ್ಭದಲ್ಲಿ ಪಡೆಯುವುದಕ್ಕೂ ವಾಪಸ್ಸು ಕೊಡುವುದಕ್ಕೂ ಎರಡಕ್ಕೂ ಯಾವ ಅರ್ಥಪೂರ್ಣತೆಯೂ ನನಗೆ ಕಾಣುತ್ತಿಲ್ಲ.

ಇನ್ನು ಭಗವಾನರ ಮಾತುಗಳ ಕುರಿತ ವಿವಾದ ಎಬ್ಬಿಸಿದ ಕನ್ನಡ ಸಾಹಿತ್ಯ ಠೇಕೇದಾರರು ಅರ್ಥ ಮಾಡಿಕೊಳ್ಳದ ವಿಷಯ ಎಂದರೆ, ಅಧ್ಯಯನವಿಲ್ಲದ ಆಧಾರವಿಲ್ಲದ ಯಾವ ವಿಗ್ರಹಭಂಜನೆಗಳೂ ನಿಲ್ಲುವುದಿಲ್ಲ. ನಾವು ಅತ್ಯಂತ ಧರ್ಮಿಷ್ಟರು ಅಂತ ಗೌರವಿಸುವ ಮಾಸ್ತಿಯವರು ತಮ್ಮ 'ಶ್ರೀರಾಮ ಪಟ್ಟಾಭಿಷೇಕ'ದ ಮುನ್ನುಡಿಯಲ್ಲಿ ಉತ್ತರ ರಾಮಾಯಣದ ಹಲವು ಭಾಗಗಳು ಅದರಲ್ಲೂ 'ಆದಿತ್ಯ ಹೃದಯಂ'ದಂತಹ ನಿತ್ಯಾಚರಣೆಯ ಭಾಗವಾಗಿರುವ ಸಂಗತಿಗಳು ಪ್ರಕ್ಷಿಪ್ತ, ಮೂಲ ರಾಮಾಣಯದ್ದಲ್ಲ ಅಂದಿದ್ದರು. ಹಾಗೆ ಮಂಡಿಸುವಾಗ ಅವರಿಗೆ ರಾಮಾಯಣದ ಬಗ್ಗೆ ಅಗೌರವವೇನೂ ಇರಲಿಲ್ಲ. ಅದು ಅವರ ಬದುಕಿನಲ್ಲಿ ಹಾಸುಹೊಕ್ಕಾಗಿತ್ತು. ಶ್ರೀಹರಿಯ ಪಾರಮ್ಯದ

ಬಗ್ಗೆ ಭಾವುಕರಾಗಿ ಬರೆದ ಪು.ತಿ.ನ., ದೇವರು ನಮಗೆ ಬೇಕು ಆದರೆ, ಅವನಿಲ್ಲ ಅನ್ನುವ 'ನಾಸ್ತಿಕತೆ' ಪ್ರತಿಪಾದಿಸಿದ ಎ.ಎನ್. ಮೂರ್ತಿರಾವ್ ಇಬ್ಬರೂ ಒಂದೇ ಸಮಾರಂಭದ ವೇದಿಯಲ್ಲಿ ಪಂಪ ಪ್ರಶಸ್ತಿ ಪಡೆದರು. ಇಬ್ಬರೂ ಆಪ್ತ ಸ್ನೇಹಿತರು. ಕನ್ನಡದಲ್ಲಿ ಸ್ವೀಕೃತಿಯ ಪಕ್ಕದಲ್ಲಿ ನಿರಾಕರಣೆಯೂ ಜೊತೆಯಾಗಿ ಬದುಕಿದೆ, ಯಾವ ರಾಜಕೀಯ ಜಗಳಗಳಿಲ್ಲದೆ. ಡಿವಿಜಿ 'ದೇವರು' ಅಂತಲೇ ಒಂದು ಜಿಜ್ಞಾಸೆ ಮಂಡಿಸಿದರು. ಅಷ್ಟೇ ಗೌರವಯುತವಾಗಿ ಮೂರ್ತಿರಾಯರು ತಮ್ಮ ಪುಸ್ತಕದ ಮೂಲಕ ದೇವರ ಇರುವು ನಿರಾಕರಿಸಿದರು. ಆದರೆ, ಯಾವ ನಾಲಿಗೆಗಳೂ ಹೊಲಸಾಗಲಿಲ್ಲ; ಯಾವ ಮನಸ್ಸೂ ಕಹಿಯಾಗಲಿಲ್ಲ. ಯಾವ ಜಗಳವೂ ಸಂಯಮ ಮೀರಲಿಲ್ಲ. ಈಗಿನವರು ಅವರೊಂದಿಗೆ ಹೋಲಿಕೆಗೂ ಅರ್ಹರಲ್ಲ.

ಗೀತ ರಚನಕಾರ ಜಾವೇದ್ ಅಖ್ತರ್ ಅಭಿಪ್ರಾಯ ಪಟ್ಟಂತೆ ; ನಿಜ, ಕೇಂದ್ರ ಸರ್ಕಾರ ಬದಲಾದ ಮೇಲೆ, ಅದರ ಬೆಂಬಲಿತರ ನಾಲಿಗೆಗಳು ಕೊಂಚ ಸಡಿಲವಾಗಿದೆ. ಅಸಹಿಷ್ಣುತೆ ಇದೆ, ಇತ್ತು, ಆವಾಗಲೂ ಇತ್ತು, ಯಾವಾಗಲೂ ಇರುತ್ತದೆ. ಅದು ಇದೆಯಾ, ಇದೆಯಾ ಅಂತ ಕೊರಳ ಪಟ್ಟಿ ಜಗ್ಗಿ ಕೇಳಿದರೆ ಇದೇ ಅಸಹಿಷ್ಣುತೆ ಅನ್ನುವುದರ ಮಾತಿಗೆ ಗುರಿಯಾಗಲೂಬೇಕಿದೆ. ಮುಖ್ಯವಾಗಿ ಹಿಂದೂಗಳು ತಮ್ಮ ಸಂಯಮಕ್ಕೆ ಸಹಿಷ್ಣುತೆಗೆ ಹೆಸರಾದವರು ಅವರು ಸಾಧಿಸಿದ ಪ್ರಬುದ್ಧತೆ ಹಾಗೂ ಇತರ ಧರ್ಮಗಳ ಬಗೆಗಿನ ಗೌರವ ದೊಡ್ಡದು. ತಾಲೀಬಾನಿಗಳು ಹಾಗೆ ಮಾಡಿದರು ಅಂದರೆ ಇತರರು ಯಾಕೆ ಅವರ ಮಟ್ಟಕ್ಕೆ ಇಳಿಯಬೇಕು? ನಿಜವಲ್ಲವೆ? ಈ ಸಹಿಷ್ಣುತೆ, ಅಸಹಿಷ್ಣುತೆಯ ಪ್ರಶ್ನೆಗಿಂತಲೂ ದೊಡ್ಡದಾದ, ಅನ್ನದ, ಸೂರಿನ, ನೆಮ್ಮದಿಯ, ಆತ್ಮಗೌರವದ ಬದುಕಿನ ಪ್ರಶ್ನೆಗಳು ನಮ್ಮೆದುರಿಗಿದೆ, ಅವು ಕಾಡಬೇಕಾಗಿದೆ. ನಮ್ಮ ನಿದ್ದೆಗೆಡಿಸಬೇಕಿದೆ. ಈ ಮಧ್ಯಮಗಳು ಸೃಷ್ಟಿಸುತ್ತಿರುವ ವಿಕೃತಿಗಳಲ್ಲ.

ಹಿಂದೂಗಳೆಲ್ಲ ಕೋಮುವಾದಿಗಳಲ್ಲ, ಮುಸ್ಲಿಮರೆಲ್ಲರೂ ಭಯೋತ್ಪಾದಕರೇನಲ್ಲ. ಇಷ್ಟಾದರೂ, ನಮ್ಮಲ್ಲಿ ಸರ್ಕಾರವೇ ಮುಂದೆ ನಿಂತು ಪೋಷಿಸುತ್ತಿರುವ ಜಾತಿಯ ತಾರತಮ್ಯಗಳು ಪರಸ್ಪರ ಸಂಘರ್ಷಗಳು 'ಕೋಮುವಾದ ಯಾಕಲ್ಲ?' ಅನ್ನುವ ನನ್ನ ಹಳೆಯ ಪ್ರಶ್ನೆ ಇನ್ನೂ ಉತ್ತರ ದೊರಕದೇ ಉಳಿದಿದೆ. ಇವತ್ತಿನ ನಮ್ಮ ವಾತಾವರಣ ಯಾವ ಬಣಕ್ಕೂ ಸೇರ ಬಯಸದವರಿಗೆ ಜಿಗುಪ್ಸೆ ಹುಟ್ಟಿಸುವ ಹಾಗಿದೆ.

ಕೆಲವು ಸಂಗತಿಗಳನ್ನು ಸ್ಪಷ್ಟಗೊಳಿಸಬೇಕಿದೆ; ಈ ಹೊತ್ತಿಗೆ ೧೯ನೇ ಸಂಚಿಕೆ ಪ್ರಕಟಗೊಳ್ಳಬೇಕಿತ್ತು, ತಡವಾಗಿದೆ. ಆದಷ್ಟು ಬೇಗ ಅದನ್ನು ತಲುಪಿಸುವ ಭರವಸೆ ನೀಡುವೆ. ಈ ವರ್ಷ 'ಮೇಷ್ಟ್ರದಿನ', 'ಸಾಹಿತ್ಯಸ್ಪರ್ಧೆ' ಹಾಗೂ 'ಕವಿದಿನ'ಗಳನ್ನು ಕೈಬಿಡಲಾಗಿದೆ. ಒಬ್ಬನ ಹೆಗಲಿಗೇ ಇದು ಅತಿ ವಜ್ಜೆ ಅನ್ನಿಸಿದ್ದರಿಂದ, ಬೆಂಗಳೂರಿನಂಥ ಊರಿನಲ್ಲಿ ಎಷ್ಟೇ ಸರಳವಾಗಿ ಅಂದುಕೊಂಡರೂ ಸಾಹಿತ್ಯದ ಕಾರ್ಯಕ್ರಮ ಶ್ರಮದ ಹಾಗೂ ದೊಡ್ಡ ಖರ್ಚಿನ ಬಾಬ್ತು. ಸದ್ಯಕ್ಕೆ ಅದನ್ನು ನಿರ್ವಹಿಸಲಾಗುತ್ತಿಲ್ಲ. ಪತ್ರಿಕೆ ಮಾತ್ರ ತನ್ನ ಯಾವತ್ತಿನ ನಿರಂತರತೆ, ಗುಣಮಟ್ಟ ಕಾಪಾಡಿಕೊಂಡು ಮುಂದೆ ಸಾಗಲಿದೆ.

ಮತ್ತೆ ಮುಂದಿನ ಸಂಚಿಕೆಗೆ–


ನಿಮ್ಮ

ಸಂಪಾದಕ



ಈ ಸಂಚಿಕೆಯಲ್ಲಿ....

ಬುಲ್ಹೆಶಾ ಪಂಜಾಬಿನ ಸೂಫಿಕವಿ, ಒಳ್ಳೆಯ ಮನುಷ್ಯ ಮತ್ತು ತತ್ವಜ್ಞಾನಿ. ಆತನ ಹೆಸರು ಸೈಯದ್ ಅಬ್ದುಲ್ಲಾ ಶಾ ಖಾದ್ರಿ. ಪ್ರಾಯಶಃ ೧೬೮೦ರಲ್ಲಿ ಉಛ್ ಎಂಬಲ್ಲಿ ಹುಟ್ಟಿದ ಆತ ೧೭೫೭ರಲ್ಲಿ ಪಂಜಾಬಿನ ಕಸುರ್ ಎಂಬಲ್ಲಿ ತೀರಿಕೊಂಡ. ಇವನನ್ನು ಬಲುದೊಡ್ಡ ಪಂಜಾಬಿ ಅನುಭಾವಿ ಕವಿಯೆಂದು ಪರಿಗಣಿಸಲಾಗಿದೆ. ಈತನ ಗೀತೆಗಳನ್ನು ನಸ್ರತ್ ಫತೇ ಅಲಿ ಖಾನ್ ಮೊದಲಾಗಿ ಹೆಸರಾಂತ ಸೂಫಿ ಗಾಯಕ/ ಗಾಯಕಿಯರು ಹಾಡಿ ಜನಪ್ರಿಯಗೊಳಿಸಿದ್ದಾರೆ. ಅವನಿಗೆ ಇಟ್ಟ ಹೆಸರು ಅಬ್ದುಲ್ಲಾ. ಅದರಿಂದ ಬಂದ ಅಡ್ಡ ಹೆಸರು ಬುಲ್ಹ. ಆ ಕಾಲದ ದೊಡ್ಡ ವಿದ್ವಾಂಸರ ಬಳಿ ಕಲಿತು ಅನುಭಾವದ ಕಡೆಗೆ ಆಕರ್ಷಿತನಾದ ಬುಲ್ಹ ಕೊನೆಯವರೆಗೂ ಅವಿವಾಹಿತನಾಗಿಯೇ ಉಳಿದ. ಹಾಗಾಗಿ ಅವನ ಮುಂದುವರಿಯಲಿಲ್ಲ.



ಸೂಫಿ ಪಂಜಾಬೀ ಕವಿ ಬುಲ್ಲೆಶಾ ಕಾವ್ಯ

■ ಅನುವಾದ: **ವಿಜಯರಾಘವನ್**

ಬುಲ್ಲೆಶಾರ ಗೀತೆಗಳು ನೇರವಾಗಿವೆ ಮತ್ತು ಸರಳ ಶೈಲಿಯಲ್ಲಿವೆ. ಅವರ ವಿಸ್ತಾರ ಆಲೋಚನೆಯ ಭಾಗವಾಗಿ ಬಂದ ಈ ಕವಿತೆಗಳು ಸಾಮಾನ್ಯರ ಮನಸ್ಸಿನೊಳಕ್ಕೆ ಸುಲಭ ಪ್ರವೇಶ ಪಡೆಯುವಂಥವು. ಪಂಜಾಬ್‌ನಷ್ಟು ಧಾರ್ಮಿಕ ನಂಬಿಕೆಗಳ ಆಧಾರದಲ್ಲಿ ವಿಚ್ಛಿದ್ರಗೊಂಡ ಪ್ರದೇಶಗಳು ದಕ್ಷಿಣ ಏಶಿಯಾದಲ್ಲೇ ಕಡಿಮೆ. ಸಿಖ್ ಮುಸ್ಲಿಂ ಹಿಂದೂ, ಕ್ರಿಶ್ಚಿಯನ್ ಇಲ್ಲಿ ಎಲ್ಲರೂ ಇದ್ದಾರೆ. ಇವುಗಳ ನಡುವಿನ ಛಿದ್ರತೆಗೆ ಉದಾಹರಣೆಯಾಗಿ ದೇಶವಿಭಜನೆಯ ದುರಂತವನ್ನು ಗಮನಿಸಬಹುದು.

ಪಂಜಾಬಿಯನ್ನು ಪಾಕಿಸ್ತಾನದಲ್ಲಿ ಎಡದಿಂದ ಬಲಕ್ಕೆ ಪರ್ಷಿಯನ್ ಲಿಪಿಯಲ್ಲೂ, ಭಾರತದಲ್ಲಿ ಬಲದಿಂದ ಎಡಕ್ಕೆ ಗುರುಮುಖಿ ಲಿಪಿಯಲ್ಲೂ ಬರೆಯುತ್ತಾರೆ. ಇಬ್ಬರೂ ಸಿಖ್ ಮತ್ತು ಮುಸ್ಲಿಂ ಸೂಫಿ ಗಾಯಕರಲ್ಲಿ ಹಾಗೂ ಭಾರತ ಮತ್ತು ಪಾಕಿಸ್ತಾನೀ ಭಾಷಾ ಲೇಖಕ ಪ್ರಕಾಶಕರಲ್ಲಿ ಬುಲ್ಲೆ ಖಾನ್ ಹಾಡಿಸಿಕೊಳ್ಳುತ್ತಿದ್ದಾನೆ ಮತ್ತು ಬರೆಸಿಕೊಳ್ಳುತ್ತಿದ್ದಾನೆ. ಅವನ ವಿಷಯದಲ್ಲಿ ಭಾಷಾತೀತ, ಧರ್ಮಾತೀತ, ಸೀಮಾತೀತ ಸಾಹಮತ್ಯ ಸಾಧ್ಯವಾಗಿದೆ ಎನ್ನುವುದು ಬಹಳ ಮೆಚ್ಚುಗೆಯ, ಅಭಿಮಾನದ ಸಂಗತಿಯಾಗಿದೆ. ಮತ್ತು ಅದೇ ಕಾರಣದಿಂದಾಗಿ ಈ ಕಾವ್ಯವು ವಿಶ್ವಮಾನವ ಕಾವ್ಯವಾಗಿದೆ, ಜಗದ್ವಂದ್ಯಂ ಎಂಬಂತೆ.

ಸಣ್ಣ ಸಣ್ಣ ಆದರೆ ತೈಲಧಾರೆಯಂತೆ ಈಶ್ವರನಲ್ಲಿ ಮನನೆಟ್ಟ ಬುಲ್ಲೆ ಶಾ ಕವಿತೆಗಳು/ಗೀತೆಗಳು ಪ್ರಿಯಕರ ಮತ್ತು ಪ್ರೇಯಸಿಯ ನಡುವಿನ ಮಧುರ ಸಂಬಂಧದ ಇರುವಿಕೆಯನ್ನು ಹಾಡುತ್ತವೆ. ಆ ಸಂಬಂಧ ಏರ್ಪಡುವುದು ವಾಸ್ತವ ಜಗತ್ತಿನ ಕೃತ್ರಿಮಗಳ ತೆರೆಯಾಚೆ ಇರುವ ನಿಜಬದುಕಿನ ಸೆಳಕುಗಳಲ್ಲಿ, ಬೇರೆ ಬೇರೆ ಸ್ತರದ ಜೀವಿಗಳಿಗೆ ಅವರವರ ಸ್ತರದಲ್ಲಿ ಅರ್ಥವಾಗುವ ಈ ಗೀತೆಗಳು ಆಳದ ಮಾನವ ತಹತಹಿಕೆಗೆ ಮಾತುಕೊಡುತ್ತವೆ. ಆ ಮೂಲಕ ವಿಶ್ವಮಾನವನ ದೈವಿಕ ಅನುಭೂತಿಯ ಅಸ್ತಿತ್ವವನ್ನು ಹಾಡುತ್ತವೆ. ಶಾ ವೈವಿಧ್ಯಮಯವಾದ ಅನುಭವಗಳನ್ನು ತನ್ನ ಕಾವ್ಯಕ್ಕೆ ವಸ್ತುವಾಗಿ ಮಾಡಿಕೊಂಡಿದ್ದಾನೆ. ಅವುಗಳಲ್ಲಿ ಹಲವು ಪರ್ಷಿಯನ್ ಸೂಫಿ ಕಾವ್ಯಕ್ಕೆ, ಲಲ್ಲಾಳ ಮಾರ್ಗಕ್ಕೆ ಸನಿಹವಿದ್ದರೂ ಅನುಭೂತಿಯಲ್ಲಿ ಸಾಕಷ್ಟು ಭಿನ್ನವಾಗಿವೆ. ಅದರಿಂದಲೇ ವಿಶಿಷ್ಟವಾಗಿವೆ.


ಈ ಹಾಡುಗಳಲ್ಲಿ ನನಗೆ ನಮ್ಮ ಅನುಭಾವೀ ಸಂತರಾದ ಶರೀಫರ, ಆಂಜನಪ್ಪ ಸ್ವಾಮಿಗಳ ಗೀತೆಗಳ ಗಾಯನ ಮತ್ತು ಗ್ರಹಿಕೆಯ ಲಯಗಳು ಸ್ಪಷ್ಟವಾದಾವು. ಕೆಲವು ಗೀತೆಗಳ ಅನುವಾದ ಲಯವನ್ನಿಲ್ಲಿ ಗಮನಿಸಬಹುದು. ಶಾ ಪಂಜಾಬಿ ಅಥವಾ ಮುಸ್ಲಿಂ ಅಲ್ಲ, ಅವನೊಬ್ಬ ವಿಶ್ವಮಾನವ. ಶಾ ಗೀತೆಗಳ ಕುರಿತು ಕ್ಲಿಷ್ಟ ವಿವರಣೆಗಳನ್ನು ಕೊಡಬಹುದು. ಆದರೆ ಅವುಗಳ ಸರಳತೆಯೇ ಆ ಪರಿಕಲ್ಪನೆಗಳನ್ನು ನಿರಾಕರಿಸುತ್ತದೆ.

ಈ ಅನುವಾದ ಪ್ರಾತಿನಿಧಿಕ. ಸಂಕಲನದ ಭಾಗಗಳಲ್ಲಿ ಆಯ್ದ ಕವಿತೆಗಳಿವು. ಇದನ್ನು ಓದುವವರೆಲ್ಲರನ್ನು ಬುಲ್ಲನ ರಚನೆಗಳನ್ನು ಓದಲು ಪ್ರೇರೇಪಿಸುವ ಉದ್ದೇಶ ಈ ಕೆಲಸದ್ದು.

■

ಇನ್ಫೋಸಿಸ್‌ನ ಹಣಕಾಸಿನ ನೆರವಿನಿಂದ ಅಸ್ತಿತ್ವಕ್ಕೆ ಬಂದಿರುವ ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯಾ ಎಂಬ ಗ್ರಂಥಮಾಲೆಯ ಅಡಿಯಲ್ಲಿ ಭಾರತದ ವಿವಿಧ ಭಾಷೆಗಳಲ್ಲಿ ಕಳೆದೆರಡು ಸಹಸ್ರಮಾನದಲ್ಲಿ ರಚಿಸಲಾದ ಕ್ಲಾಸಿಕ್ ಗ್ರಂಥಗಳ ಇಂಗ್ಲಿಷ್ ಅನುವಾದ ಮತ್ತು ಮೂಲ ಲಿಪಿಯಲ್ಲಿ ಮೂಲಗ್ರಂಥದ ಪ್ರಕಟಣೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಮೊದಲ ಕಂತಿನಲ್ಲಿ ಐದು ಗ್ರಂಥಗಳು ಪ್ರಕಟವಾಗಿದ್ದು ಸುಂದರ ಮುದ್ರಣ, ಕಡಿಮೆ ಬೆಲೆ, ವ್ಯಾಸಂಗಕ್ಕೆ ಅನುಕೂಲಕರವಾದ ಮುನ್ನುಡಿ, ಟಿಪ್ಪಣಿಗಳಿಂದ ಕೂಡಿವೆ. ಮಹಾನ್ ಭಾರತ ಪಂಡಿತ ಶೆಲ್ಡನ್ ಪೊಲ್ಲಾಕ್ ರವರ ಸಂಪಾದಕತ್ವದಲ್ಲಿ ಹಾರ್ವರ್ಡ್ ಯೂನಿವರ್ಸಿಟಿ ಪ್ರೆಸ್‌ನಿಂದ ಪ್ರಕಟವಾಗಿರುವ ಈ ಪುಸ್ತಕಗಳು ಅಮೆಜಾನ್‌ನಲ್ಲಿ ರಿಯಾಯಿತಿ ದರದಲ್ಲಿ ದೊರೆಯುತ್ತವೆ. ಬುಲ್ಲೆ ಶಾರವರ ಕೃತಿಗಳ ಸಂಗ್ರಹ ಆ ಐದು ಕೃತಿಗಳಲ್ಲಿ ಒಂದು. ಆಯ್ದ ಕೆಲವು ಗೀತೆಗಳ ಅನುವಾದ ಈ ಕೆಳಗಿದೆ. ಇಡೀ ಕೃತಿಗಳ ಕನ್ನಡ ಅನುವಾದವನ್ನು ಕೈಗೆತ್ತಿಕೊಳ್ಳುವ ಅಗತ್ಯ ಕಂಡುಬರುತ್ತದೆ. ಗೀತೆಗಳ ಸಂಖ್ಯೆ ಗ್ರಂಥದಿಂದ. ಕನ್ನಡದ ಜನಕ್ಕೆ ಇದನ್ನು ಓದುವ ಅನಿವಾರ್ಯತೆ ಉಂಟೆಂದು ನಾನು ಭಾವಿಸುತ್ತೇನೆ.

ಬುಲ್ಹೆ ಶಾ
ಸೂಫಿ ಗೀತೆಗಳು



೧

ಅಭೋಜ್ಯವಾದದ್ದನು ಬುಲ್ಹ ಉಣ್ಣು
ಉಂಡು ಪಠಿಸು ಸ್ತುತಿಗೀತೆಗಳನ್ನು

ಅದಕಾಗಿ ಮರುಗು ಮತ್ತು ಮರೆತುಬಿಡು
ನಿನ್ನ ಸ್ತುತ್ಯಾರ್ಹವೆನಿಸುವ ಕಾರ್ಯಗಳನ್ನು
ಮಸೀದಿಯನ್ನು ತೊರೆ
ಆಲಂಗಿಸು ಏಕಾಕಿತನವನ್ನು

ಹಿಂಸೆಯಿಂದ ಪಾರಾಗುವುದು
ಆಗ ನಿನ್ನಾತ್ಮವು ಬುಲ್ಹ

ಆ ಒಂದಕ್ಷರವನ್ನು ಉಚ್ಚರಿಸದಿರು
ಬುಲ್ಹ, ನಿನ್ನಲಿ ಉತ್ತರವಿರದಿರಲು

ಹೋಗಿಬಿಡೋಣ ಬಾರೋ ಬುಲ್ಹ
ಮದಿರೆ ತ್ಯಾಜ್ಯವಾದ ಎಡೆಗೆ

ಗೀತೆ ೪೩

ಕಳ್ಳರು ವಾಸ ಮಾಡುವರು ದೇಗುಲಗಳಲ್ಲಿ
ಕೊಲೆಪಾತಕರಿರುವರು ಮಸೀದಿ ಬಾಗಿಲಿನಲ್ಲಿ
ಫಕೀರರಿರುವರು ಭಗವಂತನ ಬಾಗಿಲಿನಲ್ಲಿ
ಬುಲ್ಲ ಹೇಳುವನಿದನು ತನ್ನ ನಂಬಿಕೆಯಲ್ಲಿ

ಗೀತೆ ೪೪

ಏ ಬುಲ್ಲೇ ಶಾ ನಡಿ ಹೋಗೋಣು
ನಾವು ಆ ಅಂಧರ ನಾಡಿಗೆ
ನಮ್ಮ ಜಾತಿಯನ್ನರಿಯರು ಯಾರೂ
ಕೇಳು ಆ ಅಂಧರ ಊರಿನಲಿ
ಪೂಜಿಸಲು ಬಾರರು ಯಾರೂ
ನಮ್ಮನು ಕೇಳಾ ಆ ಊರಿನಲಿ

ಗೀತೆ ೪೫

ಬುಲ್ಹಾ – ಅವನು ಈ ಮನೆಯೊಳಗಿಲ್ಲ
ಬಗೆ ಬಗೆ ಭಕ್ಷ್ಯ ಭೋಜ್ಯಗಳಿಟ್ಟಿರುವಂಥ
ಈ ಬಿಡದಿ ಮನೆಯೊಳಿಲ್ಲ

ತಳ್ಳಾಡುತ್ತಿದೆ ಜನಸಂದಣಿ ಮಸೀದಿಯಲ್ಲಿ
ಕುದಿಯುತ್ತಿದ್ದಾನೆ ಮುಲ್ಲ ಕಡು ಕೋಪದಲ್ಲಿ
ಭಟರನು ನಿಲಿಸಿದ್ದಾರೆ ಸಿರಿವಂತರು ಗೇಟಲ್ಲಿ

ನಿಜದೇವನ ಆಲಯದ ಬಾಗಿಲನ್ನು ಹಿಡಿ
ಹೃದಯದಲ್ಲಿರೋ ಯಾತನೆಯನ್ನವ
ಪರಿಹರಿಸುವ ಹೊರದೂಡಿ



ಗೀತೆ ೪೭

ಎಂದಾದರೂ ಕರೆಯುವೆಯೇನು ನೀನು ನನ್ನನ್ನು ನಿನ್ನವನೆಂದು
ನಾನು ಗುಣಹೀನ. ಏನು ಮಾಡಿರುವೆ ನಾನಂತಹ ಘನಕಾರ್ಯವನ್ನು
ನನ್ನ ದೇಹ ಪ್ರೀತಿಸುತ್ತಿದೆ, ನನ್ನ ಹೃದಯವೂ ಪ್ರೀತಿಸುತ್ತಿದೆ
ನನ್ನ ಬದುಕೇ ನಾನು ಪ್ರೀತಿಸುವ ಅವನಾಗಿದೆ
ಬರುವೆಯೇನು ನೀನು ನನ್ನ ಪ್ರಿಯನ ಪ್ರಿಯನಾಗಿ

ಸಂಚಾರಿ – ನಾನು ದೂರಹೋಗುತ್ತೇನೆ
ತಾಳಿಕೊಳ್ಳುವನಾಗಿ – ಸದಾ ಕಾಲ ಸಂಗಾತಿಯಾಗಿರುತ್ತೇನೆ
ಬಂಧಿಸಿ ಸೆರೆಗಟ್ಟಿಬಿಡುವೆಯೇನು ನಾನು ಮನ್ಸೂರನಂತೆ
ಎಲ್ಲವನ್ನೂ ತಿಳಿಗೊಳಿಸಿ ಇರಿಸುತ್ತೇನೆ ಎನ್ನುವುದಕ್ಕೆ

ನಾನು ಎಚ್ಚರವಿದ್ದೇನೆ, ಆದರೆ ಈ ಲೋಕ ನಿದ್ದೆಹೋಗಿಬಿಟ್ಟಿದೆ
ಎಚ್ಚರವಾಗಿ ಕಣ್ತೆರೆದೊಡನೆ ಲೋಕ ಎದ್ದು ಕೂರುವುದು ಅಳುತ್ತ
ಅಮಲೊಂದೇ ಉಪಯೋಗಕ್ಕೆ ಬರುವುದು
ನಾನಲ್ಲವೇ ಎಂಬುವುದನ್ನು ಕುಡಿವಂತೆ ಮಾಡಲಾರೆಯಾ ಎಂದಾದರೂ

ಅನಾದ ತಾಗಿದಾಗ ನೀನು ನಿನ್ನೆರಡೂ ಕಂಗಳ ದೃಷ್ಟಿಯನ್ನು
ಅವುಗಳ ಮೇಲೆ ಕೀಲಿಸುವೆ. ನೂರು ಸಾವಿರ ಮಂದಿ ನಿನ್ನ ಪಾದಕ್ಕೆ
ತರಿದಿಟ್ಟರು ಅವರ ಶಿರವ
ಸಾಗರವು ಸಂತಸ – ದಿಗ್ಭ್ರಮೆಗೊಂಡಿತು ಸಂತಸದ ಅಲೆಗಳುಬ್ಬಿ
ನನ್ನ ನೇತ್ರದ ನದಿಯು ಹರಿವಂತೆ ಮಾಡುವೆಯಾ?

ಯಾವ ಪ್ರೇಮಿಯಾದರೂ ನಿಶ್ಚಿಂತೆಯಲ್ಲಿ ನಿದ್ರಿಸುವನೇ?
ನಾವು ರೋಧಿಸಿದ್ದೇವೆ, ಮಿತಿಯಿಲ್ಲದೆ,
ತೊಳೆದುಕೊಂಡಿದ್ದೇವೆ ಮುಖಗಳನ್ನು ಕಣ್ಣೀರಿನಿಂದ
ಈ ದುಃಖವ ಪಡುವುದನ್ನು, ಅನುಭವಿಸುವುದನ್ನು ಆನಂದವಾಗಿ ಬದಲಿಸಲು
ನೀನು ಮಾಡುವುದೇನು ಮಾಯಾಜಾಲವೋ ಅಥವಾ ವಶೀಕರಣವೋ

ಹೇಳು ಯಾವ ಗುಟ್ಟನು ಕುರಿತು ಪ್ರೀತಿ ಯೋಚಿಸುತಿಹುದು
ಅದು ನಿರ್ಣಯಿಸಿದರೆ ತಕ್ಷಣದಲಿ ಸಂಭವಿಸುವುದೇನು
ತಲೆಯನ್ನಿಟ್ಟಾಗಿದೆ ಬಲಿಕಂಬದ ಮೇಲೆ, ನಿರ್ಣಯವನರಿತು
ಇನ್ನು ನೀ ನಗಾರಿ ಬಾರಿಸುವುದೇನು?

ನನ್ನ ಹೃದಯವನ್ನು ಕಬಾಬು ಮಾಡಿಬಿಟ್ಟಿದ್ದೇನೆ
ನನ್ನ ಕಣ್ಣಿನೊಳಗಣ ಜಲವ ಮಧುವಾಗಿಸಿದ್ದೇನೆ
ನನ್ನ ನರಗಳ ತಂತಿಗಳನ್ನಾಗಿಸಿದ್ದೇನೆ
ನನ್ನ ಎಲುವುಗಳನ್ನು ಪಿಟೀಲಿನ ದಂಡವಾಗಿಸಿದ್ದೇನೆ
ಈ ಧರ್ಮವನ್ನೆಂತು ಕರೆಯುವೆಯೋ

ದುಃಖಕ್ಕೆ ಮತ್ತದರ ಹಿಂಸೆಗೆ ಇನ್ನೇನಿಹುದು
ನಡೆಸಿಬಿಡು ಮನದಿಚ್ಛೆಯಿರುವಂತೆ
ಕೊಡುವವನಾರು ಈ ಬದುಕ, ಮತ್ತೆ ಮುಂದಿನದನ್ನು
ನಿನ್ನ ಕಾಣ್ಕೆಯದೇನು, ತಿಳಿಸುವೆಯೇನು ನೀನು?

ನಿನ್ನ ಕಾಣ್ಕೆಯದು ಬಂದೆನ್ನ ತಲುಪಿ
ನನ್ನ ತನುಮನಗಳಿಗೆ ಕಿಚ್ಚನಿಕ್ಕಿಹುದು.
ನನ್ನೆರಡು ಕಂಗಳೂ ಮುಸಲಧಾರೆಯ ಸುರಿಸುತ್ತಲಿವೆ
ದಿನವೂ ಬಂದು ಹೋಗುತ್ತಿರುವೆ ಇನಾಯತ್‌ನಂತೆ
ನಿನ್ನಿರುವನಿಂತೇನು ನೀನು ತೋರುವುದು?

ಬುಲ್ಲಾ ನೀನು ಒಡೆಯನನು ನೋಡಲು ಹೋದಾಗ
ನೀನೀ ಕಂಗಳಿಗೆ ನೇರ ನೋಡಲು ಕಲಿಸುವೆ
ಆಗಷ್ಟೇ ನಿನಗವನ ನಿಜರೂಪ ದೊರಕುವುದು
ಮರಳಿ ಬರುವೆಯೇನು ಶಾ ನೀನಿನಾಯತನಾಗಿ

ಗೀತ ೪೯

ಎಂದಾದರೂ ಬಾ ಗೆಳೆಯನೇ ಬಂದೆನ್ನ ಕೂಡು
ನೀನು ನಡೆದಾಡುವ ರಸ್ತೆಗೆ ಬಲಿಯಾಗಿದೆ ನನ್ನ ಬುದ್ಧಿ
ಕೋಗಿಲೆ ಹಾರುತ್ತಿದೆ ತೋಟಗಳಲ್ಲಿ ಕೂಗಿಕೊಂಡು
ತನ್ನ ಉರಿವ ವೇದನೆಯ ದಗೆಯುಸಿರನ್ನು ಹೊರಹಾಕುತ್ತ.
ನಾನು ಹತಭಾಗ್ಯ ನನ್ನ ಕಪ್ಪು ಗೆಳತಿ ನನ್ನ ಮರೆತುಬಿಟ್ಟಿದ್ದಾಳೆ

ಬುಲ್ಲಾ ಒಂದು ದಿನ ಭಗವಂತೆ ಬರುತ್ತಾನೆ ನನ್ನ ಮನೆಗೆ
ಬಂದು ನಂದಿಸುತ್ತಾನೆ ನನ್ನೆದೆಯಲ್ಲಿ ಉರಿಯುತ್ತಿರುವ
ಬೆಂಕಿಯ ಬೇಗೆಯನ್ನು.
ಅವನು ನಡೆದಾಡುವ ರಸ್ತೆಗೆ ಬಲಿಯಾಗಿದೆ ನನ್ನ ಬುದ್ಧಿ

ಗೀತೆ ೫೧

ಎದ್ದಿರುತ್ತಿ ಇರುಳಿನಲ್ಲಿ ಪೂಜೆ ಮಾಡತಿ
ನಾಯಿ ಕೂಡ ಎದ್ದಿರುತ್ತವೆ ನಿನಗಿಂತಲು ವಾಸಿ
ಬೊಗಳುತಾವೆ ಬೊಗಳುತಾವೆ ನಿಲುಗಡೆಯೇ ಇರದೆ
ಮಲಗುತಾವೆ ತಿಪ್ಪೆ ಮೇಲೆ ನಿನಗಿಂತಲು ವಾಸಿ

ದೊರೆಯ ಕದವ ತೊರೆಯವವು ಎಕ್ಕಡದಲಿ ಬಡಿದರೂ
ನಿನಗಿಂತಲು ನಾಯಿ ವಾಸಿ, ನಾಯಿಗಳೇ ವಾಸಿ

ಬುಲ್ಲೆ ಶಾ ಕೊಂಡುಕೊಳ್ಳೊ ಒಂದಿಷ್ಟನು ದಾರಿಗೆ
ಇಲ್ಲವೇ, ಗೆದ್ದಾವು ನಾಯಿ ಆಟ, ಅವೆ ನಿನಗಿಂತಲು ವಾಸಿ

ಗೀತೆ ೫೨

ಮಕ್ಕಾಗೆ ಹೋಗಿಬಂದೆ ಎಲ್ಲ ಮುಗಿಯಿತೇ
ಎದೆಗೂಡಿನ ಆತ್ಮ ತೆರದೆ ಮುಗಿದುಹೋಯಿತೇ

ಗಂಗೆಯಲ್ಲಿ ಮುಳುಗಿ ಎದ್ದೆ ಪಾಪ ಕಳೆಯಿತೇ
ನೂರು ಬಾರಿ ಮುಳುಗಿ ಎದ್ದೆ ಕಳೆದೆ ಹೋಯಿತೇ

ಗಯಾಕ್ಕೆ ಹೋಗಿ ಬಂದೆ ಎಲ್ಲ ಮುಗಿಯಿತೇ
ಸತ್ತವರಿಗೆ ಕೊಟ್ಟುದೆಲ್ಲ ಕೊಳೆಯ ಕಳೆಯಿತೇ

ಬುಲ್ಲೇ ಶಾ ಅಹಂಕಾರ ಕಳೆದ
ಬಳಿಕ ಎಲ್ಲ ಮುಗಿಯಿತು

ಗೀತೆ ೫೩

ಹುಡುಕುತೀನಿ ನಾನು ನಿನ್ನ ನನ್ನೊಳಗೆ
ಅಂದುಕೊಂಡೆ ನೀನು ಬಂಧಿ ನನ್ನೊಳಗೆ
ಹುಡುಕಿದೆ ಅನ್ನು ನಿನ್ನ, ನಾನೆಲ್ಲೋ ಹೊರಗೆ
ಯಾರು ಬಂಧಿ ಹೇಳು ನೀನು, ನನ್ನೊಳಗೆ

ಎಲ್ಲ ನೀನೆ, ಎಲ್ಲ ನೀನೆ, ಎಲ್ಲೆಲ್ಲೂ ನೀನೆ
ಎಲ್ಲದರಿಂದಲು ಮುಕ್ತನಾದ ನೀನು ನೀನೆ ನೀನೆ

ನಾನು ನೀನೆ ನೀನು ನಾನೆ ನಾವು ನಾವೆ ನಾವೆ
ಬಡಪಾಯಿ ಬುಲ್ಲನ್ಯಾರು ಈ ನಮ್ಮೊಳಗೆ

೧೩೫

ನಿರ್ಬಂಧವಿಲ್ಲವೋ ನನಗೆ, ಗಡಿಗಳೂ ಇಲ್ಲ
ರೋಗಿಯಲ್ಲವೋ ನಾನು, ವೈದ್ಯನೂ ಅಲ್ಲ
ನಂಬುವವನಲ್ಲವೋ ನಾನು, ನಂಬದವನೂ ಅಲ್ಲ
ಬೇಟೆಗಾರನಲ್ಲವೋ ನಾನು, ಮಿಕವೂ ಅಲ್ಲ

ಈ ವಿಶ್ವದ ಹದಿನಾಲ್ಕು ಗೋಳಗಳಲ್ಲು ಸಂಚರಿಸುವೆನೋ ನಾನು
ನನಗಾವ ಮಿತಿ ನಿರ್ಬಂಧಗಳಿಲ್ಲವೋ ಗೋಳಗಳನು ಸುತ್ತಲು

ನನ್ನ ಬದುಕು ಕಳೆದಿದೆ ಮಧುಶಾಲೆಯಲ್ಲಿ
ನನ್ನ ಸತ್ಕರಿಸಿದವರಿಲ್ಲ, ಅವಹೇಳನ ಮಾಡಿದವರೂ ಇಲ್ಲ

ಅವನು ಸೃಷ್ಟಿಸಲಿಲ್ಲ, ಅವನ ಸೃಷ್ಟಿಸಲೂ ಇಲ್ಲವಾದರೂ
ಬುಲ್ಲ ಎಂತಿರುವನೆಂದು ಏಕೆ ಕೇಳುತಿ ನೀನು?

೧೩೬

ಬೇಗಬೇಗನೆ ಪಯಣಿಗನೆ ಹರುಷದ ಸುದ್ದಿಯ ತಾರೋ
ಗೂನು ಬಗ್ಗಿದೆ ಮುದಿಯಾಗಿ ಹೋದೆನೋ
ನನ್ನೆಲ್ಲ ಬವಣೆಯನು ಅವನಿಗರುಹೋ
ಮುಡಿಯು ಜೋತಿದೆ ಕೆದರಿ ಕಟ್ಟದ ಸಿರಿಮುಡಿಯಂತೆ
ಅದ ಬಿಗಿವ ನೂಲೆನ್ನ ಕೈಯಲ್ಲಿ ಇಹುದೋ
ಇದನ್ನು ಪಯಣಿಗನೆ ನೀನವನಿಗರುಹೋ
ಲಕ್ಷ ಕೊಡುವೆನು ನಿನಗೆ ಇನ್ನೊಂದು ಲಕ್ಷವನೂ
ನೀ ಪ್ರಿಯತಮನ ಕರೆತಾರೋ ನನ್ನ ಬಳಿಗೆ
ಈಗಾಗಲೇ ಬರೆದಿರುವೆ ಒಕ್ಕಣೆಯನ್ನವನಿಗೆ
ಅದನು ನಾನವಗೆ ಕಳಿಸಿರುವೆನೋ
ಏಕಾಂತದೆಡೆಯಲ್ಲಿ ಅವನೊಂದಿಗೆ ಕೂತು
ಅದನೊಮ್ಮೆ ಓದೊ ಅವನ ಜೊತೆಗೇ

ಬುಲ್ಲಾ, ದೇವನವನು ನನಗೆ ತಿರುವಲಿ ಬಿಡು ಬೆನ್ನು
ಆಗುಮಾಡು ನಾ ಬರೆದ ಪತ್ರಗಳ ನೀ ತಡಮಾಡದೋಮುವುದನ್ನು

೧೪೦

ನನಗೇನಾಯಿತೋ ಕಾಣೆ
ನನ್ನಲ್ಲಿದ್ದ ನಾನೆಂಬ ಅದು ಕಳೆದು ಹೋಗಿಯೇಬಿಟ್ಟಿತು
ನನಗೇನಾಯಿತೋ?
ಅವರೇಕೆ ನನ್ನನ್ನು ಹುಚ್ಚನೆನ್ನುತ್ತಾರೆ

ನನ್ನೊಳಕ್ಕೇ ನಾ ನೋಡಕೊಳ್ಳಲು
ಕಾಣುತ್ತಿರುವುದು ನಾನಲ್ಲವು, ನೀನೋ
ತಲೆಯಿಂದ ಅಡಿವರೆಗೂ, ಒಳಗೂ ಹೊರಗೂ
ನೀ ಮಾತ್ರವೇ ಇಹುದೋ

ಆ ದಡದಿಂದ ಈ ದಡದವರೆಗೂ
ಮುಕ್ತನೋ ನಾ ಮುಕ್ತ
ದೋಣಿಯಿಲ್ಲ ನದಿಯೂ ಇಲ್ಲ ಇಲ್ಲ ಏನೊಂದೂ

ಮನ್ಸೂರನು ಹೇಳುತಾನೆ ನಾನೇ ದೇವನು
ಅವನು ಹಾಗೆ ನುಡಿವಂತೆ ಮಾಡಿದವನು ಯಾರೋ

ಬುಲ್ಹ, ಆ ದೇವನು ತಮ್ಮ ಆತ್ಮಗಳನ್ನು
ನಾಶಮಾಡಿಕೊಂಡವರ ಸಖನೋ



೧೪೧

ಗಂಟು ಮೂಟೆ ಕಟ್ಟಕೊಂಡು ಓಡಿಹೋದನೋ
ಹೇಳು ಇದರಲ್ಲಿ ನನ್ನ ತಪ್ಪೇನಿಹುದೋ
ರಾತ್ರಿ ಇಡೀ ನಿದ್ದೆ ಇಲ್ಲ, ಹಗಲಲಿ ವಿಶ್ರಾಂತಿಯಿಲ್ಲ
ಕಣ್ಣಿನಿಂದ ಒಂದೆ ಸಮನೆ ಕಣ್ಣೀರು ಹರಿದವೋ

ಪ್ರೀತಿಯ ಕೂರಂಬುಗಳು
ಕತ್ತಿಗಿಂತ ಕೊಡಲಿಗಿಂತ ಚೂಪಾಗಿವೆಯೋ
ಪ್ರೀತಿಗಿಂತ ಕ್ರೂರ ಯಾವ ಕ್ರೂರಿಯೂ ಅಲ್ಲ ಕಾಣೋ
ಬಹಳ ಕೆಟ್ಟದಿದು ಘಾತಕಪಿದರ ಸುಳಿಗೆ ಸಿಕ್ಕುವುದು
ಒಂದು ಕ್ಷಣವೂ, ಒಂದರೆಕ್ಷಣವೂ ನನಗೆ ಆತಂಕವಿಲ್ಲದಿಲ್ಲ
ಅಗಲಿಕೆಯ ನೋವು ಸಹಿಸಲು ಸಾಮಾನ್ಯವಲ್ಲ

ಬುಲ್ಹಾ ಅವನು ಕರುಣಾಳುವಾದರೆ ಮಾತ್ರ
ನನ್ನ ನೋವುಗಳು ಮರೆಯಾದಾವು, ಇಲ್ಲದಿರೆ ಇಲ್ಲ

೧೪೭

ಅಮ್ಮಾ ಉಪವಾಸ, ತೀರ್ಥಯಾತ್ರೆ, ಪ್ರಾರ್ಥನೆಗಳೆಲ್ಲವೂ
ಮರೆತುಹೋಗುತ್ತವೆ, ನನ್ನ ಪ್ರಿಯತಮನವನು ಬಂದಾಗ
ನನ್ನ ಪ್ರಿಯತಮನ ಸುದ್ದಿ ಬಂದಿತೆಂದರೆ ನಾನು
ಮರೆತೇ ಹೋಗುತ್ತೇನೆ ವ್ಯಾಕರಣ ಭಾಷಾಪ್ರಯೋಗಗಳನ್ನೆಲ್ಲ
ಅವನು ಸಂಗೀತ ನುಡಿಸುತ್ತಾನೆ, ಆ ತಾಕದ ವಾದ್ಯದ ತಂತಿಯ ಮೇಲೆ

ಪ್ರಿಯತಮನು ಬಂದಾಗ ನನ್ನ ಮನೆಗೆ ನಾನು ಮರೆತೇಬಿಟ್ಟೆ
ಶಾರ್ ವಿಖಾಯದ* ಮೇಲಿನ ಟೀಕುಗಳನ್ನೆಲ್ಲ. ಪ್ರತಿ ದೃಶ್ಯದಲ್ಲೂ
ಅವನೊಬ್ಬನೇ ಕಾಣುತ್ತಾನೆ, ಅವನೇ ಒಳಹೊರಗುಗಳಲ್ಲೆಲ್ಲ
ತನ್ನ ವೈಭೋಗವನ್ನು ನಿಕ್ಷೇಪಿಸಿಕೊಂಡವನು ಅವನು
ಜನರು ಅರಿತಿರುವುದೇನೂ ಇಲ್ಲ.

ಎ೧ ಶನಿವಾರ

ಈ ಭಾಗದ ಕವಿತೆಗಳು ಏಳುದಿನಗಳಲ್ಲಿ ನಲ್ಲನ ಕುರಿತು

ಶನಿವಾರದಂದು ನಾನು ಅಸಹನೆಯಿಂದ
ಕಾಯುತ್ತಿರುವೆ ನಲ್ಲನವನ ಸುದ್ದಿಗಾಗಿ
ಮರಳಿ ಬಾರೆನು ಮನೆಗೆ, ಏನಾದರೂ ಸರಿಯೆ,
ಅವನ ಕಾಣದೆ

ಆಹ್ ಆಹ್ ಶನಿವಾರವೆಲ್ಲ ಕ್ಲೇಶಕಾರಿ ನನ್ನಿನಿಯನೆ
ತುಳಿವನೆನ್ನ ಅದೆ ಕ್ಲೇಶವು ನನಗೆ
ಹುಡುಕುವೆ ನಾನಡವಿಗಳ ಹೊಕ್ಕು ಕಾಡು ಪೊದೆ
ಹಗಲು ನಟ್ಟಿರುಳು ಅಪವೇಳೆಯಲ್ಲು
ವಿರಹದ ಬೇನೆಯಿಂದ ನವೆದು ಹೋಗಿರುವೆನು

ನಿನಗಾಗಿ ನಾನು ಕಾಯುವುದು, ಇರುಳು
ನಿದ್ರಿಸಿದ ಹುಲಿಗಳ ಮೇಲೆ ಹಾರಿದಂತೆ
ಹತ್ತಿಹೋಗಿದ್ದೇನೆ ಮೇಲಕ್ಕೆ, ಕಿರುಚುತ್ತಿದ್ದೇನೆ
ಅರಚುತ್ತಿದ್ದೇನೆ, ನಿನ್ನಿಂದಲೇ ಒಲವೇ
ನನ್ನ ಎದೆಯಲ್ಲಿ ಕೂರಂಬು ತಿರುಗುತ್ತಿದೆ.

---

* ಉಬೇದುಲ್ಲಾ ಮಸೂದಿ ಅರಬಿಕ್‌ನಲ್ಲಿ ಬರೆದ ಇಸ್ಲಾಂ ಕುರಿತ ಪತ್ರ

ಬಿಗಿ ಸಾವನ್

ಈ ಭಾಗದ ಕವಿತೆಗಳು ಹನ್ನೆರಡು
ತಿಂಗಳುಗಳಲ್ಲಿ ನಲ್ಲನ ಅನುಸಂಧಾನ

ಶ್ರಾವಣದ ಮೇಘಗಳು ರಮಣೀಯವಾಗಿವೆ
ಸೃಷ್ಟಿಯ ಹೃದಯದಲ್ಲಿ ಸೃಷ್ಟಿಕರ್ತ
ಅತಿ ಸುಂದರನಾಗಿ ತೋರುತ್ತಾನೆ
ಎಲ್ಲಿದೆ ಈ ಇನಾಯತ್ ಇರುತ್ತಾನೆ
ಎಂದು ಪಪೀಹ ಹಕ್ಕಿ ಹಾಡುತ್ತದೆ

ಮಳೆಗಾಲದ ಹಾಡುಗಳು ಶ್ರಾವಣದುದ್ದಕ್ಕೂ
ಮಧುರವಾಗಿ, ಕರ್ಣಾನಂದಕರವಾಗಿ ಕೇಳಬರುತ್ತವೆ
ನನ್ನ ಶತ್ರುಗಳು ನೋವು, ಅಗಲಿಕೆಯ ಬೇಗೆಯಿಂದ ಬಳಲುತ್ತಾರೆ
ಬಾಲಕರು ಆಡುತ್ತಾರೆ, ಬಾಲಕಿಯರು ಹಾಡುತ್ತಾರೆ
ನನ್ನ ಮನೆತುಂಬ ಈಗ ಸಂತೋಷ ಸಂಭ್ರಮಗಳಿವೆ
ನನ್ನೆಲ್ಲ ಭರವಸೆಗಳೂ ಈಡೇರಿವೆ

ನನ್ನ ದೊರೆ ನನ್ನೆಲ್ಲ ಭರವಸೆಗಳನ್ನೂ ಈಡೇರಿಸಿದ್ದಾನೆ
ಬಲವುದುಂಬಿ ನಾನು ಅವನನ್ನೇ ನಿರುಕಿಸಿ ನೋಡಿದ್ದೇನೆ
ನನ್ನ ಗೆಳತಿಯರೆಲ್ಲ ಬಂದಿದ್ದಾರೆ ಅಭಿನಂದಿಸಲು ನನ್ನ
ಶಾಹ್ ಇನಾಯತ್‌ನಿಗೆ ನಾನು ಹೇಳುತ್ತೇನೆ
ಒಡೆಯಾ ನನ್ನೆಲ್ಲ ಭರವಸೆಗಳೂ ಈಡೇರಿಸಲ್ಪಟ್ಟಿವೆ.





ಬಿ ೧೨ ಭಾದೋಂ (ಅಗಸ್ಟ್‌ಸೆಪ್ಟಂಬರ್ ಸಮಯ - ಭಾದ್ರಪದ)

ಭಾದ್ರಪದ ಆನಂದದಾಯಕವಾಗಿದೆ, ಪ್ರಿಯ ಗೆಳತಿ
ನಾವೀ ಸಮಯ ಸದಾ ಜೊತೆಯಲ್ಲಿದ್ದೇವೆ
ನಾನು ತೆರೆದು ನೋಡಿದ ಹೃದಯಗಳಲ್ಲಿ
ಎಲ್ಲಕಡೆ ಅವನಿದ್ದಾನೆ ಅಂತರ್ಯಾಮಿ

ಬಾ ಈಗ, ಭಾದ್ರಪದವು ನನ್ನ ಭಾಗ್ಯವನ್ನು ಬೆಳಗಿಸಿದೆ
ದಿವ್ಯಶಕ್ತಿಯಿಂದವನು ದೇವ ಬಂದುಬಿಟ್ಟಿದ್ದಾನೆ
ಎಲ್ಲದರಲ್ಲು ಅವನಿದ್ದಾನೆ, ತುಂಬಿಕೊಂಡು
ಅವನು ತೋರಿಬಂದಾಗ ಸ್ವಯಂ ನಾನು
ಆ ಶಾಹ್ ಇನಾಯತ್‌ನನ್ನು ಗಟ್ಟಿ ಹಿಡಿದುಕೊಳ್ಳುತ್ತೇನೆ

ಕೊನೆಗಲ್ಲಿ ಸಮಾಧಾನವಾವರಿಸುತ್ತದೆ, ಸಾಂತ್ವನದಿಂದ
ಪ್ರತಿಕ್ಷಣವೂ ಕಂಗಳು ಅವನ ವೈಭೋಗವನ್ನು
ಮನ ತುಂಬಿಸಿಕೊಳ್ಳಲು ಕಾತರಿಸುತ್ತವೆ; ನಡೆವುದೆಲ್ಲವೂ ಅವನಿಚ್ಛೆ

ಬುಲ್ಲಾ, ದೇವನಿಲ್ಲದಿರೆ ಯಾವುದರಲಿ ಸೊಗಸು?
ನಾನು ಆ ಪ್ರೀತಿಯ ಸವಿಯನ್ನುಂಡಿದ್ದೇನೆ


೫೧

ಮದುವೆಯ ಸಂಪ್ರದಾಯಗಳ ಕುರಿತು ಹೇಳೆನಗೆ
ನಿನಗೆಷ್ಟೊಂದು ಗೊತ್ತು. ಎಷ್ಟು ಗಂಟುಗಳ ಹಾಕಬೇಕು
ನಿಶ್ಚಿತ ದಿನ ವರನ ಕಡೆಯವರು ಬರುತ್ತಾರೆ,
ನಲವತ್ತು ಗಂಟು ಹಾಕಲಿದೆ ನನಗೆ
ಅಪ್ಪ ಬಂದು ಹೇಳಿದ ನೀನು
ನಿನ್ನ ಅತ್ತೆಯ ಮನೆಗೆ ಹೋಗಬೇಕಿದೆ
ಅಲ್ಲಿ ಆಚಾರ ಬೇರೆ ವಿಚಾರ ಬೇರೆ
ಇಲ್ಲಿ ನೀನು ನಿನ್ನ ಪಾದವನೆಂದೂ ಊರಲಾರೆ

ನಾನು ಮೊದಲ ಗಂಟನ್ನು ಬಿಚ್ಚುತ್ತೇನೆ
ಕೆರಳಿ ಕೂಗಿಕೊಳ್ಳುತ್ತೇನೆ ಗಂಟಲು ಹರಿವ ಹಾಗೆ
ನಾನು ಹೋಗಲೇ ಬೇಕು, ಹೋಗುವವಳಿದ್ದೇನೆ.
ನಾನು ಈ ವರೋಪಚಾರದ ಉಡುಗೆಗಳಿಗೆಲ್ಲ
ಬಣ್ಣ ಹಾಕಿಸುತ್ತೇನೆ. ನಾನು ಬಜಾರಿನತ್ತ ನೋಡುತ್ತೇನೆ
ಎಲ್ಲರೂ ಹೊರಟಿದ್ದಾರೆ, ನನ್ನ ಬಳಿ ದಮ್ಮಿಡಿಯಿಲ್ಲ
ಯಾರೂ ನನ್ನ ಬಳಿ ಸುಳಿಯುವುದಿಲ್ಲ

೫೪೦

ಬಿಸ್ಮಿಲ್ಲಾ ಎನ್ನುತ್ತಾ ನಾನು ಹಾಕಿದೆಲ್ಲ ನಲವತ್ತು ಗಂಟುಗಳನ್ನು ಬಿಚ್ಚಿದ್ದೇನೆ
ತನ್ನ ತಾ ಕಳೆದುಕೊಳ್ಳುವವಳು ದೇವನಿಗೆ ಅವನವಳಾಗುತ್ತಾಳೆ
ಕೈ ಬೀಸಿಕೊಂಡು ಮದುಮಗ ಬರುತ್ತಾನೆ.
ಅವನ ಸುಂದರ ಬಾಜಾ ಬಜಂತ್ರಿ ನನಗೆ ತುಂಬಾ ಇಷ್ಟವಾಗುತ್ತದೆ
ಪ್ರಿಯಕರನ ಪ್ರೀತಿಯನ್ನು ಯಾವಳು ಅನುಭವಿಸುವಳೋ
ಅವಳು ತಾನೇ ಪ್ರಿಯಕರನಾಗಿ ಹೋಗುವಳು
ನಾನು ಎಲ್ಲ ವಿಚಾರದ ರಿವಾಜುಗಳನ್ನು ಬಿಟ್ಟುಕೊಟ್ಟಿದ್ದೇನೆ
ಮತ್ತು ಒಡೆಯನ ಜೊತೆ ಹೋಗಿಬಿಟ್ಟಿದ್ದೇನೆ
ನನ್ನ ವರನ ಹೊರತು ನನಗೆ ಯಾರ ನೆನಪೂ ಇಲ್ಲ
ಯಾವುದರದೂ. ಈಗ ನಾನು ಹೇಳುತ್ತೇನೆ,
ನಾವು ದೇವನಿಗೆ ಸಂದಿದ್ದೇವೆ ಎಂದು. ಪ್ರಾರ್ಥಿಸುತ್ತೇವೆ
ನನ್ನ ಎಲ್ಲವೂ ದೇವನದಾಗಿ ಹೋಗಿದೆ. ಅಬ್ದುಲ್ಲಾ ಇಲ್ಲ.



ಪು ೩.೨೧ ಇದು ಮೂವತ್ತು ಅಕ್ಷರಗಳು ಎಂಬ ಭಾಗದಿಂದ


ಬೇಯುತ್ತಿದ್ದೇನೆ ಪ್ರೀತಿಯ ಬೇಗೆಯಲಿ ಹೊತ್ತಿ ಉರಿದು
ಒಡಲಲ್ಲಿ ಬೆಂಕಿ ತೋಡಿಸಿ ಹೊರಗೆ ಬೆಂಕಿಯ ಹೊತ್ತಿಸಿಕೊಂಡು
ಉರಿಯುತ್ತಿರುವ ಅವಳ ಉರಿಯ ನಂದಿಸುವವರು ಯಾರು?

ಎಸ್ ೧ ಅಲೀಫ್

ದೇವನ ಪ್ರಿಯತಮೆಯಾಗಿರುವವಳು ಬಿಳಿಚಿಕೊಂಡಿರುತ್ತಾಳೆ
ಅವಳು ಅಳುತ್ತಾಳೆ ಕಣ್ಣೀರಲ್ಲ, ನೆತ್ತರನ್ನು ಸುರಿಸಿ
ವಿರಹದ ಅಗ್ನಿಯಲಿ ಉರಿವವಳು
ತನ್ನ ಬದುಕಿನ ಕೈಗಳನ್ನು ತೊಳೆದುಕೊಳ್ಳುತ್ತಾಳೆ

ಎಸ್ ೨೭ ಹೆ

ಮೆಲ್ಲಗೆ ಮಾತಾಡು ಇಲ್ಲಿ ಸೋದರ
ಯಾರಾದರೂ ಕೇಳಿ ದೂರಿತ್ತಾರು ನಿನಗೆ
ಗೋರಿಯ ಕ್ಲೇಶ ದೊಡ್ಡದೆಂಬಂತೆ ತೋರುವುದು
ಯಾರಾದರೂ ಮುಕ್ತಿಯ ಹಾದಿ ತೋರಬಹುದಾದರೂ
ಸಿರಾತ್ ಸೇತುವೆಯ ದಾಟುವುದು ಕಷ್ಟ
ಅದರ ಭಯವೇ ಭಯಂಕರವಾಗಿಹುದು
ದೇವನ ಪರವಿರಲಿ ನಿನ್ನ ನಂಬಿಕೆ ಬುಲ್ಹ
ಅವನೊಬ್ಬನೇ ನಮ್ಮನ್ನು ಕಾಯುವವನು.



ಗೀತೆ ೫೦

ನನಗೀಗ ಅರ್ಥವಾಗಿಹೋಗಿದೆ
ಆದ್ದರಿಂದ ಯಾಕೀ ಗೊಂದಲ
ಇದೇನಿದು ರಾಮ, ರಹೀಮ,
ಇದೇನಿದು ದೇವ ಭಗವಂತ


೫೧

ಹಾಜಿಗಳು ಮಕ್ಕಾಗೆ ಹೋಗುತ್ತಾರೆ.
ನಾವು ತಖ್ತ್ ಹಜಾರಾಗೆ ಹೋಗುತ್ತೇವೆ
ನೀನೆಷ್ಟೇ ಆ ನಾಲ್ಕು ಗ್ರಂಥಗಳ ಪುಸ್ತಕಗಳ ಪುಟ ತಿರುವು
ಕಾಬಾ ಇರುತ್ತದೆ ಎಲ್ಲೆಲ್ಲಿ ಭಕ್ತ ಕೈದೋರುವನೋ ಅಲ್ಲೆಲ್ಲಿ

೫೨

ನಿನ್ನ ನಾ ಹುಡುಕಿದರೆ ನನ್ನಲ್ಲಿ
ನನಗನ್ನಿಸುತ್ತದೆ ನೀನು ಬಂಧಿ
ನಿನ್ನ ನಾ ಹುಡುಕಿದರೆ ಹೊರಗೆ
ನನಗನ್ನಿಸುತ್ತದೆ ನನ್ನ ಒಳಗಿರುವುದು ಯಾರು
ನೀನೇ ಸರ್ವಸ್ವ, ಸರ್ವಾಂತರ್ಯಾಮಿ, ಸಕಲ
ಅನಿರ್ಬಂಧಿತನು ನೀನು. ನೀನು ನಾನು
ನಾನು ನೀನು. ಆದರೆ
ಈ ಬಡ ಅಮಾಯಕ ಬುಲ್ಲ ಯಾರು

ಮುಖ್ಯವ್ಯವಸ್ಥಾಪಕ, ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್
ಚಿಕ್ಕಬಳ್ಳಾಪುರ - ೫೬೨೧೦೧. ಮೊಬೈಲ್ : ೯೯೦೦೨೬೩೧೭೮



ಚಿತ್ರ : ಗಣೇಶ್ ಯಾಜಿ

ಸಾಮಾನ್ಯನಂತೆ ಈ ನಾನು!

■ ಗೋಪಾಲಕೃಷ್ಣ ಅಡಿಗ

ಸಾಮಾನ್ಯನಂತೆ ಈ ನಾನು! ನಿಮ್ಮಪ್ಪ
ಸಾಮಾನ್ಯ: ನಮ್ಮಪ್ಪ, ನಮ್ಮಜ್ಜ ಆ ಎಲ್ಲ
ಸತ್ತವರ ಹಂತೀಲಿ. ಎಲೆಲೇ ನನ್ನ
ಹೆಸರೇನು ಹೇಳು, ನೋಡೋವ. ಈ ಚಹರೆ, ಈ ನಿಲುವು, ಈ ಮನಸ್ಸಿನ ರೆಪ್ಪೆ

ಯಿರದ ದೇವದ ಕಣ್ಣು ನಿಮ್ಮಪ್ಪಂದೆ? ದೂರವಲ್ಲಿ ಸಮಶೀತೋಷ್ಣ
ಕೋಣೆಯೊಳಗಡೆ ಹೆಸರು ಕುಲ ಗೋತ್ರ ತಿಳಿಯದೆ ಸಲೀಸು
ಸಾಧಾರಣೀಕರಣ ಕ್ರಿಯಾಕರ್ಮ ಮುಗಿಸಿ ಕುಂತಲ್ಲಿಯೇ
ಬೊಜ್ಜದೊಡೆ ಮೆಲ್ಲುತ್ತ ಕವಳ ಜಗಿಯುವ ಮಹಾ
ಧಮ್ಮಸ್ಸಿನವನೆ, ಹುಮ್ಮಸ್ಸಿದೆಯೆ, ಬಾ ಈಚೆಕಡೆ
ತೋರಿಸುತ್ತೇನೊಂದು ಕೈಯ, ಈ ಸಾಮುದ್ರಿಕವ, ಮುದ್ರಿಕೆಯ,
ಉರಿನ ದೀಪದ ಕಾವ.

ಹೂಹಣ್ಣು ತಳೆದ ಮರ ಮರೆತು ಸೆಟೆದು ನಿಂತಿರುವ ಕೊಡಲಿಯ ಕಾವೆ.
ನಿನಗೆಲ್ಲ ಒಂದೆ: ಮಂದಿ ಎಂದರೆ ಮಂದೆ, ಮಂದೆ ಎಂದರೆ ಕುರಿ. ಕುರಿ ಎಂದರೆ
ತರಕಾರಿ. ಹೆಸರು ಹಿಡಿದು ಕೂಗಿ ಹಿಡಿಹುಲ್ಲು
ನೀಡಿ ಮೈಸವರಿ ಸರಿನುಡಿಯುವ ಕ್ರಿಯಾವಂತಿಕೆ
ನಿನಗೆಲ್ಲಿ? ನಂಬರು ಹಾಕಿ ಟ್ರಕ್ಕಿಗೆ ತುಂಬಿ
ಕಸಾಯಿಖಾನೆ ಡಬ್ಬಿಗೆಲ್ಲ ಒಂದೇ ಹೆಸರು
ಪಟ್ಟಿಯಂಟಿಸುವ, ಟಿನ್ನುಗಳಲ್ಲಿ ಮಾತ್ರವೆ ನನ್ನ
ರುಚಿ ನೋಡುವ ಪ್ರವೇಶವುಳ್ಳ ಸಮವಸ್ತ್ರಪ್ರವಾದಿಯೇ ನಿನ್ನ
ಮುಖವೆಲ್ಲಿ? ರೊಟ್ಟಿ ತುಣುಕಿಗೆ ಮುಖ ಮೂಗು

ಕೆತ್ತಿಸಿಕೊಂಡ ಬೇವಾರ್ಸಿ, ಬಾಲ ಕಳೆದುಕೊಂಡ ನರಿಯೇ, ನಿನಗೆ
ವೈವಿಧ್ಯವೇ ಹುಳಿ. ಇಂಚು ಪಟ್ಟಿ ಹತ್ತರ ಹಿಡಿದು
ಸಾಮಾನ್ಯಕ್ಕೆ ಹತ್ತ ಕೆತ್ತುವಾಚಾರಿ, ಸಲ್ಲುವ ಕಾಳ
ದಕ್ಷಿಣೆ ಹಣದ ಝುಣತ್ಕಾರದ ನಿರಾಕಾರ ಪೂಜಕನೆ, ನಿನ್ನ ಎದೆಗೂಡಲ್ಲಿ
ಇಟ್ಟ ಯಂತ್ರಕ್ಕೇನು ಹೆಸರು? ಉಸುರೋ ಉಸುರು.

ಉಸುರು ಇದ್ದದ್ದು ಪ್ರತಿಯೊಂದಕ್ಕೆ ಇತಿಹಾಸ
ಬೇರೆ, ಹಾಸ ಬೇರೆ, ವಿಕಾಸ ವಿಲಾಸ ಬೇರೆ, ಗುರಿಪಾಶ
ಬೇರೆ. ನಿನ್ನ ನಕಾಶೆಗೆ ಸಿಕ್ಕದೇ ನುಣುಚಿ, ತನ್ನ ಜೀವಪತಾಕೆ
ಎತ್ತಿ ಎತ್ತಿ ಕಾದಾಡುವುದು ಪ್ರತ್ಯೇಕತೆಯ
ಬೆಳಕಿನುಪ್ಪರಿಗೆ ಕಟ್ಟುತ್ತ, ಕಟ್ಟುತ್ತ– ಕೊನೆವರೆಗೆ.
ನಾನಿದ್ದೇನು ತುರಿ ಕಜ್ಜಿ ಮೈಯ ಹರಕಂಗಿ ರೈತ ಭಾಗವತ;
ಅಥವಾ ಮಸಿ ಹತ್ತಿ ಮೆತ್ತಿ ಕುಸಿಯುತ್ತಿರುವ ಕಾರ್ಖಾನೆಯವಧೂತ;
ಅಥವಾ ಒಗ್ಗಾಲಿನಲ್ಲಿ ನುಗ್ಗಿ ಬಗ್ಗಿ ನೆಗ್ಗಿ ಕುಂಟುತ್ತ ಮುಂದೊತ್ತಿ ಬರುವ ಬೀದಿ ಭಿಕಾರಿ.

ಸಾಮಾನ್ಯನೆಂದೆಯ? ತಪ್ಪು, ತಿಳಿಯದಿರು ಜೋಕೆ;
ಬೇಡಿಗೆ ಕೈಯೊಡ್ಡದವ, ಕತ್ತಿಗೆ ಇಕ್ಕಿದುರುಳನ್ನೆ
ಕಚ್ಚುತ್ತ ಕಡಿಯುತ್ತ ಸಿಗಿಯುತ್ತ ಅಗೆಯುತ್ತ
ಬಗೆಯುತ್ತಲೇ ಕಣ್ಣು ಮುಚ್ಚುವವ, 'ತಾಳಕ್ಕೆ ಸರಿ ಹೆಜ್ಜೆ'
ಹೂಂಕರಿಸುತ್ತಲಿದ್ದರೂ ನಿನ್ನ ಪಿಸ್ತೂಲು
ಮನಸ್ಸಿನಲ್ಲೇ ಬೇರೆ ತಾಳ ಲಯ ನಿಭಾಯಿಸುವ
ಹುಟ್ಟಾ ಸ್ವತಂತ್ರ ಪರಮಾಣುದೇಹಿ.

ಮುಖ ಕೆತ್ತಿಸಿಕೊಂಡ ಸಾಮಾನ್ಯದ ಪೂಜಾರಿಯೇ,
ನೀ ತೊಟ್ಟ ಮುಖವಾಡ ಹಿರಣ್ಯಾಕ್ಷನದು. ಚಾಪೆ ಸುತ್ತಿ ನೆಲ
ಕಂಕುಳಲ್ಲಿಟ್ಟು ಕುರ್ಚಿಯ ಕಚ್ಚಿ ಅಂಟಿಕೊಳ್ಳುವ ಹುನಾರು
ನಿನಗೆ–ಮುಖವುಳ್ಳವರ ಮೂತಿ ಕೆತ್ತಿ ಅಥವಾ ದೊಡ್ಡಿಯಲ್ಲಿಟ್ಟು.
ಆಗಲೂ, ದಾಡಿ ಮಸೆವ ವರಾಹ ಕಣ್ಣು ಮಿಟುಕದೆ ದಿಟ್ಟಿ
ಸುತ್ತ ಇದೆ ಗಡಿಯಾರ ಮುಖವ. ಕಂಭದೊಳಕ್ಕೆ
ಸಿಕ್ಕಿಬಿದ್ದಣು ನಾನು ನರಸಿಂಹ. ಕಾಯುತ್ತೇನೆ
ನಾನು ಕೂಡ.

ಮೇ ೧೯೭೬

'ಹುಟ್ಟು ಸ್ವತಂತ್ರ ಪರಮಾಣು ದೇಹಿ'

ಗೋಪಾಲಕೃಷ್ಣ ಅಡಿಗರ 'ಸಾಮಾನ್ಯನಂತೆ ಈ ನಾನು!'

■ ಸುಂಕಂ ಗೋವರ್ಧನ

ಜಗತ್ತಿನ ಅತ್ಯಂತ ದೊಡ್ಡ ಕವಿಗಳಲ್ಲಿ ಒಬ್ಬರಾದ ಗೋಪಾಲಕೃಷ್ಣ ಅಡಿಗರು ಕನ್ನಡದ ಆಲೋಚನಾ ಪ್ರಪಂಚವನ್ನು ಆದ್ಯಂತಿಕವಾಗಿ ವಿಸ್ತರಿಸಿದವರು. ತಮ್ಮ ಸಂವೇದನಾಶೀಲವೂ ಸಂಕೀರ್ಣವೂ ಆದ ಕಾವ್ಯ ನಿರ್ಮಿತಿಯ ಜೊತೆಗೆ ಅತ್ಯುತ್ತಮವಾದ ಸಮಕಾಲೀನ ಲೇಖನಗಳನ್ನು ಕೂಡ ಬರೆದು ತಮ್ಮ ಕಾಲಕ್ಕೆ ಸ್ಪಂದಿಸಿದವರು. ಗಾಂಧಿಯುಗದಲ್ಲಿ ಹುಟ್ಟಿ (ಜನನ ೧೮.೨.೧೯೧೮), ನೆಹರೂ ಯುಗದಲ್ಲಿ ತಮ್ಮ ಗಾಢವಾದ ಚಿಂತನೆಗಳಿಂದ ಯುವಕರನ್ನು ಪ್ರಭಾವಿಸಿದ ಅಡಿಗರು 'ಇಂದಿರಾ ಯುಗ'ದಲ್ಲಿ ರಾಜಕೀಯದ ವಿರುದ್ಧ ದೊಡ್ಡ ಸಮರ ಸಾರಬೇಕಾಯಿತು.

ಮೊದಲಿಗೆ ನನ್ನ ಗ್ರಹಿಕೆಯಲ್ಲಿ ಗಾಂಧಿ ಯುಗ, ನೆಹರೂ ಯುಗ ಹಾಗೂ ಇಂದಿರಾ ಯುಗ ಎಂಬ ಪರಿಕಲ್ಪನೆಗಳಿಗೆ ಇರುವ ಅರ್ಥವನ್ನು ವಿವರಿಸಬೇಕಾದ ಅಗತ್ಯವಿದೆ ಎಂದುಕೊಂಡಿದ್ದೇನೆ. 'ಗಾಂಧಿ ಯುಗ' ಎನ್ನುವುದು ತನ್ನಿಂದ ತಾನೇ ರೂಪಿಸಿಕೊಂಡ ಒಂದು ಯುಗವಾಗಿತ್ತು. ತನ್ನ ವಿಸ್ತಾರವಾದ ರಾಜಕೀಯವೂ ಹಾಗೂ ಸಾಮಾಜಿಕವೂ ಆದ ನಡೆಯಿಂದ ಭಾರತದ ಎಲ್ಲ ಮನಸ್ಸುಗಳಲ್ಲಿಯೂ ಮಿಂಚಿನ ಸಂಚಾರ ಉಂಟು ಮಾಡಿದ್ದು ಗಾಂಧೀಜಿಯವರ ನಡೆ. 'ನುಡಿದಂತೆ ನಡೆ' ಈ ಯುಗದ ಪ್ರಮುಖ ಧೋರಣೆ. ಇಡೀ ಮನುಕುಲದ ಒಳಿತನ್ನು ಮಾತ್ರ ಬಯಸಿದ ಗಾಂಧಿಯವರು ಅದಕ್ಕಾಗಿ ಎಂತಹ ತ್ಯಾಗಗಳಿಗೂ ಬದ್ಧರಾಗಿದ್ದ ವಿಷಯ ಹೊಸದೇನಲ್ಲ.

ಈ ಯುಗದಲ್ಲಿ ಹುಟ್ಟಿ ತಮ್ಮ ವಿದ್ಯಾಭ್ಯಾಸವನ್ನು ಪಡೆದ ಅಡಿಗರು ಈ ಯುಗದಾದ್ಯಂತ ಶಿಕ್ಷಣವನ್ನು 'ಕೇಳುವುದಕ್ಕೆ ಮಾತ್ರ' ಸೀಮಿತಗೊಳಿಸಿಕೊಂಡಿದ್ದರು. ಈ ಯುಗದಲ್ಲಿ ಪಡೆದ ಶಿಕ್ಷಣವನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕೆಂಬ ಅರಿವನ್ನು ತಕ್ಕಮಟ್ಟಿಗೆ ಚಿಂತಿಸುವುದು ಮಾತ್ರ ಅಡಿಗರಿಗೆ ಸಾಧ್ಯವಾಯಿತು.

ಎರಡನೆಯ ಕಾಲಘಟ್ಟವೆಂದರೆ ಅದು 'ನೆಹರು ಯುಗ'. ಈ ಯುಗ ಅಡಿಗರ ಪಾಲಿಗೆ ತಾವು ಸಂಪಾದಿಸಿಕೊಂಡ ಶಿಕ್ಷಣವನ್ನು ಸರಿಯಾಗಿ ಬಳಸಿಕೊಳ್ಳಲು ತಮ್ಮ ಅಧ್ಯಾಪಕ ವೃತ್ತಿಯನ್ನು ಕೈಗೊಂಡು, 'ನಡೆದದ್ದು ನುಡಿದ' ಕಾಲಘಟ್ಟವದು. ಈ ಯುಗ ಅಡಿಗರಿಗೆ 'ಹೇಳುವುದಕ್ಕೆ ಮಾತ್ರ' ಅವಕಾಶವನ್ನು ಕಲ್ಪಿಸಿಕೊಟ್ಟಿತು. ಗಾಂಧಿಯುಗದ ಆದರ್ಶಗಳನ್ನು ಶಿಕ್ಷಣದಲ್ಲಿ ಕಲಿತ ವ್ಯಕ್ತಿಯೊಬ್ಬ ಆದರ್ಶಗಳೆಲ್ಲ ಕಣ್ಣಮುಂದೆಯೇ ಕುಸಿಯುತ್ತಿರುವ ನವ ಆರ್ಥಿಕ ಪ್ರಪಂಚದ ತವಕ-ತಲ್ಲಣಗಳೆದುರು ನೆಹರು ಯುಗದ ಆತಂಕಗಳ ಮುಂದೆ ಪಾಠ ಮಾಡಬೇಕಾದ ಅನಿವಾರ್ಯತೆಯನ್ನು ಉಂಟುಮಾಡಿತು. ಗಾಂಧಿಯುಗ ತನ್ನಷ್ಟಕ್ಕೆ ತಾನೇ ಪ್ರಕೃತಿಯಂತೆ ರೂಪುಗೊಂಡ ಯುಗವಾದರೆ ನೆಹರೂ ಯುಗ ಗಾಂಧಿಯುಗದ ಪ್ರವರ್ತಕರಿಂದ ದತ್ತವಾದ ಯುಗವಾಗಿತ್ತು. ಬಹುಶಃ ಈ ಯುಗದಲ್ಲಿ ಗಾಂಧಿಯವರ ಆಶೋತ್ತರಗಳನ್ನು ಸಮರ್ಥವಾಗಿ ನಡೆಸಬಲ್ಲ ವ್ಯಕ್ತಿ ನೆಹರೂ ಎಂದು ಬಹುಜನರಿಂದ ತೀರ್ಮಾನಿತವಾಗಿ ನೆಹರೂ ದೇಶದ ಗದ್ದುಗೆ ಏರಿದ ಸಂಗತಿ ನಮಗೆ ತಿಳಿದೇ ಇದೆ. ಹಾಗೆ ನೋಡಿದರೆ ಗಾಂಧಿ ನಂತರ ಯಾರು ಎಂಬ ಪ್ರಶ್ನೆಗೆ ಗಾಂಧಿಯವರೇ ಸೂಚಿಸಿದ ಹೆಸರೆಂದರೆ ನೆಹರೂ ಆಗಿತ್ತು. ಕಾರಣವನ್ನು ನೀಡುತ್ತಾ ಗಾಂಧೀಜಿಯವರೇ, ''ನನ್ನ ನಂತರ ಅವರು ನನ್ನ ಭಾಷೆಯಲ್ಲಿ ಮಾತನಾಡುತ್ತಾರೆ'' ಎಂಬುದು ನೆಹರೂರವರ ಬಗೆಗಿನ ಧೋರಣೆಯಾಗಿತ್ತು. ಆದರೆ ನೆಹರೂ ಗಾಂಧಿಯವರ ಪರಿಭಾಷೆಯಲ್ಲಿ ಮಾತನಾಡಿದರೇ? ತಮ್ಮ ಕೆಲಸ ಮುಗಿದ ನಂತರ ಗಾಂಧಿ ತಾವು ನಿವೃತ್ತರಾದಂತೆ ನೆಹರೂ ನಿವೃತ್ತರಾದರೇ?

ಇನ್ನು ಮೂರನೆಯ ಕಾಲಘಟ್ಟ 'ಇಂದಿರಾ ಯುಗ'. ಇದು ರಾಜಕೀಯದ ಉಸಿರು ಕಟ್ಟಿಸಿದ ತುರ್ತು ಕಾಲವನ್ನು ಎದುರಿಸಿದ ಯುಗವಾಗಿತ್ತು. ಈ ಯುಗ ಅಡಿಗರ ಪಾಲಿನ ನಿವೃತ್ತ ದಿನಗಳ ಯುಗವಾಗಿತ್ತು. ಯಾವ ಯುಗಗಳೂ ಕಂಡರಿಯದಷ್ಟು ಭಾರತ ಭ್ರಷ್ಟತರವಾಗಿತ್ತು. ಗಾಂಧಿಯುಗದಲ್ಲಿ ಶಿಕ್ಷಣ ಪಡೆದು ನೆಹರೂ ಯುಗದಲ್ಲಿ ಶಿಕ್ಷಣ ನೀಡಿದ ಮಹಾನ್ ಪ್ರತಿಭೆಯಾದ ಅಡಿಗರಿಗೆ ಶಿಕ್ಷಣವನ್ನು ಕುರಿತು, ಬದುಕನ್ನು ಕುರಿತು ಮುಖ್ಯವಾಗಿ ಸ್ವಾತಂತ್ರ್ಯವನ್ನು ಕುರಿತು ಮಹಾನ್ ದರ್ಶನ ಪ್ರತಿಪಾದಿಸಿದ ಯುಗವಾಯಿತು. ನೆಹರೂ ಯುಗ ತಮ್ಮ ಕಾಲದ ಪ್ರತಿಭೆಗಳಿಂದ ದತ್ತ ಯುಗವಾಗಿದ್ದರೆ ಇಂದಿರಾ ಯುಗ 'ನಾನೇ ಯುಗಪ್ರವರ್ತಕ' ಎಂಬ ಅಹಂಕಾರದಿಂದ ಬಲವಂತವಾಗಿ ''ಅಪಹರಿಸಿದ ಯುಗವಾಗಿತ್ತು''. ಒಂದು ಕಾಲಘಟ್ಟ ನನ್ನ ನೇರವಾದ ಅಂಕುಶಕ್ಕೆ ಈಡಾಗಿದೆ. ಈ ಕಾಲದ ಎಲ್ಲ ಆನೆಗಳನ್ನ ಆಟವಾಡಿಸಬಲ್ಲ ದಂಡ ನನ್ನ ಬಳಿ ಇದೆ ಎಂದು ಬೀಗಿದ ಕಾಲವದು. ಎಲ್ಲ ಅತಿರಥ ಮಹಾರಥರನ್ನು ಸಾಮಾನ್ಯನಂತೆ ಕಂಡು ಉಡಾಫೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಅಪಹರಿಸಿದ ಕಾಲಘಟ್ಟವಿದು. ವೃತ್ತಿಯಿಂದಷ್ಟೆ ನಿವೃತ್ತರಾಗಿದ್ದ ಅಡಿಗರು ಈ ರೀತಿಯ ನಾನು ಪ್ರವೃತ್ತಿಗೆ ಸೆಡ್ಡು ಹೊಡೆದು ನಿಂತ ಯುಗ ಇದಾಗಿತ್ತು. ಯಾವ ಸಂವೇದನಾಶೀಲ ನಾಗರಿಕನಾದರೂ ಇಷ್ಟು ಮಟ್ಟಿಗೆ ಸಾತ್ವಿಕ ಸಿಟ್ಟನ್ನು ಪ್ರತಿಪಾದಿಸದೆ ಹೋದರೆ ಆತ ನಾಗರಿಕನೇ ಅಲ್ಲ ಎಂಬ ಎಚ್ಚರ ಇವರನ್ನು ಬಡಿದೆಬ್ಬಿಸುತ್ತಿತ್ತು.

ಕೇವಲ ಇವಿಷ್ಟೇ ಈ ಯುಗದ ಆಶಯಗಳು ಎಂಬ ಸೀಮಿತ ದೃಷ್ಟಿಕೋನವನ್ನು ಈ ಲೇಖನ ಪ್ರತಿಪಾದಿಸುತ್ತಿಲ್ಲ, ಬದಲಿಗೆ ಅಡಿಗರ ಕವಿತೆಯೊಂದನ್ನು ಹೊಸರೀತಿಯಲ್ಲಿ ಪರಿಭಾವಿಸುವ ದೃಷ್ಟಿಯಿಂದ ಈ ಹಿನ್ನೆಲೆಯನ್ನು ಸ್ಥೂಲವಾಗಿ ಈ ಲೇಖನ ವಿವರಿಸುತ್ತಿದೆಯಷ್ಟೆ. ನನ್ನೊಳಗೆ ನಾನು ಎಂಬ ಲೇಖನದಲ್ಲಿ ಅಡಿಗರು, ''ನನ್ನನ್ನೇ ನಾನು ಮುಖಾಮುಖಿ ಸಂಧಿಸುವುದೇ ಅಂತರಂಗದಲ್ಲಿ, ನನ್ನ ಒಳದಲ್ಲಿ, ಇಲ್ಲಿ ಮುಖ್ಯವಾದ ಎರಡರ ಸಮ್ಮಿಳನ ಆಗುತ್ತದೆ. ಕಳೆದುದರ ನೆನಪು, ಬರುವುದರ ಕನಸು ಅಥವಾ ಹೊಸ ಸೃಷ್ಟಿಯ ಹೊಂಗನಸು, ಭೂತಕಾಲದ ನೆನಪುಗಳು, ಭವಿಷ್ಯತ್ತಿನ ಕನಸುಗಳು ಒಂದರೊಡನೊಂದು ಸೇರಿ ಬೆಳೆಯುವ, ಎಲ್ಲೂ ಇಲ್ಲದ ಹೊಸತನ್ನು ಆಗಮಾಡುವ ಆ ವಿದ್ಯುತ್ ಬಿಂದುವಾಗುತ್ತದೆ'' ಎಂದಿದ್ದಾರೆ. ಹಾಗಾಗಿ ಅಡಿಗರ ತುಡಿತ ಸದಾ ಯಾವುದೆಂದರೆ, 'ಎಲ್ಲೂ ಇಲ್ಲದ ಹೊಸತನ.'

ರಾಜಕೀಯ ಹಾಗೂ ನಾವು ಎಂಬ ಲೇಖನವನ್ನು ಏಪ್ರಿಲ್ ೧೯೭೩ರಲ್ಲಿ ಬರೆಯುತ್ತಾ ಅಡಿಗರು ''ನಾವು ರಾಜಕೀಯವನ್ನು ಅಲಕ್ಷಿಸಿ ನಮ್ಮ ದೇಶದಲ್ಲಿ ಸರ್ವಾಧಿಕಾರ ಬೆಳೆಯಲು ಅವಕಾಶ ಕೊಟ್ಟರೆ ಆಗ ನಮ್ಮಲ್ಲಿ ಇರಬೇಕಾಗುವ ಒಂದೇ ಒಂದು ಗುಣ; ತಲೆ ಬಾಗುವ ವಿಧೇಯತೆ; ಬಲಿಷ್ಠರ ಮುಂದೆ ಬಾಲವಾಡಿಸುವುದು, ಸ್ವಂತ ಅಭಿಪ್ರಾಯವನ್ನು ಹತ್ತಿಕ್ಕಿಸಿಕೊಂಡು ಯಾವ ಅಭಿಪ್ರಾಯ ಅಧಿಕಾರಿಗಳಿಗೆ ಪ್ರಿಯವಾದದ್ದೋ ಅದನ್ನೇ ವ್ಯಕ್ತಪಡಿಸುವುದು, ಯಾವ ಕೆಲಸದಿಂದ ಮಹಾನಾಯಕನಿಗೆ ತೃಪ್ತಿ ಆಗುವುದೋ ಅದನ್ನ ಮಾಡುವುದು, ಎಂದೋ ಭವಿಷ್ಯದಲ್ಲಿ ಬರುವ ಸರಕಾರ ಹೇಳುವ ಸುಖ ಸಮೃದ್ಧಿಗಾಗಿ ಇಂದು ಗಾಣದೆತ್ತಿನಂತೆ ದುಡಿದು ಸಾಯುವುದು, ಅರೆಹೊಟ್ಟೆಯಲ್ಲಿ ಇರಲಿ ಅನ್ಯಾಯಕ್ಕೆ ಗುರಿಯಾಗಿರಲಿ, ಮಾನಸಿಕ-ದೈಹಿಕ ಚಿತ್ರಹಿಂಸೆಗೆ ಗುರಿಯಾಗಿ ನರಳುತ್ತಿರಲಿ, ಸ್ವಂತ ಅನುಭವಕ್ಕೆ ಅಭಿವ್ಯಕ್ತಿಯನ್ನು ಬಯಸದೆ ಬಾಯಿ ಮುಚ್ಚಿಕೊಂಡು ನೊಗಕ್ಕೆ ಹೆಗಲು ಕೊಡುವುದು, ಏಕನಾಯಕ, ಏಕಪಕ್ಷಗಳ ಸರ್ವಾಧಿಕಾರದಿಂದ ಬರುವ ಸಂಪತ್ತು ಇದು ಎಂದು ನಾವು ಮನವರಿಕೆ ಮಾಡಿಕೊಳ್ಳಬೇಕು'' ಎಂದಿದ್ದರು.

ಈ ವಿಷಯವನ್ನೇ ಅತ್ಯಂತ ಸಂಕೀರ್ಣ ನೆಲೆಯಲ್ಲಿ ಅಡಿಗರ ಸಾಮಾನ್ಯನಂತೆ ಈ ನಾನು! ಪದ್ಯ ಪ್ರತಿಪಾದಿಸುತ್ತದೆ. ತಮಾಷೆಯ ಸಂಗತಿಯೆಂದರೆ ಇಂತಹ ಕಾಲಘಟ್ಟವನ್ನು ೧೯೭೩ರಷ್ಟು ಹಿಂದೆಯೇ ಸಕಾರಣವಾಗಿ ಊಹಿಸಿದ ಅಡಿಗರು ಈ ಪದ್ಯವನ್ನು ಬರೆದದ್ದು ೧೯೭೭ರಲ್ಲಿ ಇಂದಿನ ಒಬ್ಬ ವ್ಯಕ್ತಿಗಾಗಲೀ, ಒಂದು ಗುಂಪಿಗಾಗಲೀ ರಾಜಕೀಯ, ಆರ್ಥಿಕ, ಶೈಕ್ಷಣಿಕ ಮತ್ತು ನ್ಯಾಯವಿತರಣೆಯ ಸರ್ವ ಸ್ವಾತಂತ್ರ್ಯವನ್ನು ನಾವು ಕೊಟ್ಟುಬಿಟ್ಟ ಪಕ್ಷದಲ್ಲಿ ನಾವೆಲ್ಲರೂ ಗುಲಾಮರಾಗದೆ ಬೇರೆ ದಾರಿ ಇಲ್ಲ, ಎಂದು ಎಚ್ಚರಿಸಿದ್ದರೂ ನಾವು ಎಚ್ಚೆತ್ತುಕೊಳ್ಳಲಿಲ್ಲ ಎನ್ನುವುದು ಕಾಲದ ತೀವ್ರವಾದ ವ್ಯಂಗ್ಯವಾಗಿದೆ.

ಕನ್ನಡ ಕಾವ್ಯಕ್ರಿಯೆಗೆ ಅತ್ಯಗತ್ಯವಾದ 'ಮೂರ್ತಭಾಷೆ'ಯನ್ನು ಸಿದ್ಧಿಸಿಕೊಂಡ ಅಪರೂಪದ ಕಾವ್ಯಪ್ರತಿಭೆ ಗೋಪಾಲಕೃಷ್ಣ ಅಡಿಗರು. ಕಾವ್ಯದ ಧ್ವನಿಶಕ್ತಿಯನ್ನು ಅಡಿಗರಷ್ಟು ಪ್ರಖರವಾಗಿ ಉಪಯೋಗಿಸಿಕೊಂಡವರು ಕಡಿಮೆ. ''ಬದುಕಿನ ಅನಂತ ವೈವಿಧ್ಯವನ್ನು ಗುರುತಿಸಿ ಮನ್ನಿಸುವುದು ಸಾಹಿತ್ಯ ಪ್ರಜ್ಞೆಯ ಮೂಲ ಲಕ್ಷಣ'' ಎಂದು ಗಾಢವಾಗಿ ನಂಬಿದ್ದವರು ಅಡಿಗರು. ಹಾಗಾಗಿಯೇ ಅಂತರ್ಭಾಷೆಗೂ ಎಲ್ಲರೂ ಉಪಯೋಗಿಸುವ ಸಿದ್ಧಭಾಷೆಗೂ ಸಾಂಗತ್ಯ ತಂದು ಸಫಲತೆ ಕಂಡರು.

ಅಡಿಗರು ೧೯೫೦ರಲ್ಲಿ ಪ್ರಕಟಿಸಿದ ತಮ್ಮ ಕವನ ಸಂಕಲನ ''ಮೂಲಕ ಮಹಾಶಯರು''

ಕೃತಿಗೆ ಕನ್ನಡ ಕಾವ್ಯ ಪ್ರಪಂಚದಲ್ಲಿ ವಿಶಿಷ್ಟವಾದ ಐತಿಹಾಸಿಕ ಮಹತ್ವವಿದೆ. ಕಾರಣ ಅತ್ಯಂತ ಸಂಕೀರ್ಣವಾದ ದೃಷ್ಟಿಕೋನದಲ್ಲಿ ಪ್ರಜಾಪ್ರಭುತ್ವದ ಪರವಾಗಿದ್ದ ಸಮಕಾಲೀನ ಪ್ರತಿಭೆಯೊಂದು ಸರ್ವಾಧಿಕಾರಿ ಧೋರಣೆಯಾದ ತುರ್ತು ಪರಿಸ್ಥಿತಿಯನ್ನು ಅತ್ಯಂತ ಉಗ್ರವಾಗಿ ಧಿಕ್ಕರಿಸಿದ್ದು. ಬಾಯಿಬಿಟ್ಟರೆ ಹುರಿದು ತಿಂದುಹಾಕುತ್ತಿದ್ದ ಕಾಲದಲ್ಲಿ ಅತ್ಯಂತ ಅಬ್ಬರದ ದನಿಯಲ್ಲಿ ಸಿಡಿದೆದ್ದದ್ದು ಈ ಕವನ ಸಂಕಲನದ ವಿಶೇಷತೆಯಾಗಿದೆ.

ತುರ್ತು ಪರಿಸ್ಥಿತಿಯ ನಂತರ ಪ್ರಕಟವಾದ ಅಡಿಗರ ಮೊದಲ ಕವನ ಸಂಕಲನವಾದ 'ಮೂಲಕ ಮಹಾಶಯರು' ಕೃತಿಯಲ್ಲಿ ಒಟ್ಟು ಇಪ್ಪತ್ತು ಕವಿತೆಗಳಿವೆ. ಅಡಿಗರು ಈ ಇಪ್ಪತ್ತು ಕವಿತೆಗಳಲ್ಲಿ ಹತ್ತು ಕವನಗಳನ್ನು ತುರ್ತು ಪರಿಸ್ಥಿತಿಯ ಅವಧಿಯಲ್ಲಿಯೇ ಬರೆದಿದ್ದಾರೆ. ಅಂದರೆ ೧೯೭೫ರ ಜೂನ್‌ನಿಂದ ೧೯೭೭ರ ಮಾರ್ಚಿಯವರೆಗೆ. ನನಗೆ ತಿಳಿದಿರುವ ಮಟ್ಟಿಗೆ ಯಾವ ಐತಿಹಾಸಿಕ ಕಾಲಘಟ್ಟದಲ್ಲೂ ಅಡಿಗರು ಇಷ್ಟೊಂದು ಕವಿತೆಗಳನ್ನು ರಚಿಸಿರುವ ಉದಾಹರಣೆ ಇಲ್ಲ.

ಈ ಶೃಂಖಲೆಯ ಮೊದಲನೆಯ ಕವಿತೆ ''ಪಟ್ಟಭದ್ರರ ಅಭದ್ರ ಸಿಂಹಾಸನದ ಮೇಲೆ'' ಜೂನ್ ೧೯೭೫ರಲ್ಲಿಯೇ ಬರೆದದ್ದು. ಅಂದರೆ ತುರ್ತು ಪರಿಸ್ಥಿತಿ ಘೋಷಣೆಯಾದ ತಿಂಗಳಿನಲ್ಲಿಯೇ ಬರೆದದ್ದು. ಇದಾದ ನಂತರ ತುರ್ತು ಪರಿಸ್ಥಿತಿಯನ್ನು ಹಿಂಪಡೆದುಕೊಂಡ ಮುಂದಿನ ತಿಂಗಳು ಎಂದರೆ ೧೯೭೭ರ ಏಪ್ರಿಲ್‌ನಲ್ಲಿ ಬರೆದ ''ಸ್ವಾತಂತ್ರ್ಯೋತ್ಸವ-೧೯೭೭'' ಕವಿತೆ ತುರ್ತು ಪರಿಸ್ಥಿತಿಯ ಶಾಪ ವಿಮೋಚನೆಯನ್ನು ಅತ್ಯಂತ ಸಂತಸದಿಂದ ಸ್ವಾಗತಿಸಿತು.

ಗಾಂಧಿಯುಗದಲ್ಲಿ ಪಡೆದುಕೊಂಡ ಸ್ವಾತಂತ್ರ್ಯಕ್ಕಿಂತ ಇಂದಿರಾಯುಗದಲ್ಲಿ ಪಡೆದುಕೊಂಡ ಈ ಸ್ವಾತಂತ್ರ್ಯಕ್ಕೆ ಅಡಿಗರ ಪಾಲಿಗೆ ವಿಶೇಷವಾದ ಸಾರ್ಥಕತೆಯಿದೆ. ಅಡಿಗರ ಲೇಖನ ಪ್ರಪಂಚದಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುವ ಮಾತೆಂದರೆ ಈ ಸ್ವಾತಂತ್ರ್ಯವೇ. ''ಸ್ವಾತಂತ್ರ್ಯದ ಹಸಿವು'' ಎಂಬ ತಮ್ಮ ಲೇಖನದಲ್ಲಿ ಅಡಿಗರು- ''ಈ ಸ್ವಾತಂತ್ರ್ಯವೂ ಎರಡೂ ಬಗೆಯದು; ಒಂದು ಬಾಹ್ಯ ಸ್ವಾತಂತ್ರ್ಯ; ಇನ್ನೊಂದು ಅಂತಃಸ್ವಾತಂತ್ರ್ಯ. ಇನ್ನು ಯಾರಿಗೂ ದಾಸರಾಗದೆ, ಯಾರ ತೊತ್ತೂ ಆಗದೆ ಸ್ವಾವಲಂಬಿಯಾಗಿ ತನ್ನ ಕಾಲ ಮೇಲೆ ತಾನು ಎದೆ ಸೆಟೆದು ನಿಂತು ಯಾರಿಗೂ ತಲೆಬಾಗದೆ ಮರ್ಯಾದೆಯಿಂದ ಬದುಕಲು ಬೇಕಾದ ಸಾಮಾಜಿಕ ರಾಜಕೀಯ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ನಿಯಮಗಳು ರೂಢವಾದರೆ ಆಗ ಈ ಬಾಹ್ಯ ಸ್ವಾತಂತ್ರ್ಯ ಸಿದ್ಧಿಸುತ್ತದೆ. ಇಂಥ ಸ್ವತಂತ್ರವಾದ ಸಮಾಜ ವ್ಯವಸ್ಥೆಯನ್ನೇ ನಮ್ಮ ಪ್ರಜಾತಂತ್ರ ರಾಜ್ಯಸೂತ್ರಗಳಲ್ಲಿ ಸೂಚಿಸಲಾಗಿದೆ. ಈ ದೇಶದಲ್ಲಿ ಯಾರು ಯಾರಿಗೂ ಕಡಿಮೆಯಲ್ಲ, ಹೆಚ್ಚೂ ಅಲ್ಲ ಎಂಬ ಸಮಾನತೆಯ ಸೂತ್ರ, ಸೂತ್ರವಾಗಿಯೇ ಉಳಿದಿದ್ದರೆ ಅದಕ್ಕೆ ತಕ್ಕ ವಾತಾವರಣವನ್ನು ಸೃಷ್ಟಿಸಲು ನಮ್ಮ ರಾಜಕಾರಣಿಗಳು ಆಸಕ್ತಿ ಹೊಂದಿಲ್ಲದುದೇ ಕಾರಣ'' ಎಂದಿದ್ದಾರೆ.

ಅಡಿಗರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಬರೆದ ಪದ್ಯಗಳೆಂದರೆ:

೧. ಪಟ್ಟಭದ್ರರ ಅಭದ್ರ ಸಿಂಹಾಸನದ ಮೇಲೆ- ಜೂನ್ ೧೯೭೫

೨. ಅರ್ಥವಾಗುವ ಹಾಗೆ ಬರೆಯಬೇಕು-ಸೆಪ್ಟೆಂಬರ್ ೧೯೭೫

೩. ಯುಗಾದಿಯ ಅಸ್ತಿಸಿಕೆಗಳು-ಮಾರ್ಚಿ ೧೯೭೬

೪. ನಿನ್ನ ಗದ್ದೆಗೆ ನೀರು- ಮಾರ್ಚಿ ೧೯೭೬

೫. ಸಾಮಾನ್ಯನಂತೆ ಈ ನಾನು-ಮೇ ೧೯೭೬

೬. ಮೂಲಕ ಮಹಾಶಯರು-ಜೂನ್ ೧೯೭೯

೭. ಪರಲೋಕದಲ್ಲಿರುವ ಓ ನನ್ನ ತಂದೆಯೇ-ಅಕ್ಟೋಬರ್ ೧೯೭೯

೮. ಅಜ್ಞಾತವಾಸ-ನವೆಂಬರ್ ೧೯೭೯

೯. ಆ ವಾದ ಈ ವಾದ-ನವೆಂಬರ್ ೧೯೭೯

೧೦. ಪೌರುಷದ ಪರಿಪಾಕ-ಡಿಸೆಂಬರ್ ೧೯೭೯

ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ನಾವು ಗಮನಿಸಬೇಕಾದ ಇನ್ನೊಂದು ಪ್ರಮುಖ ಕವಿತೆ ಈಗಾಗಲೇ ತಿಳಿಸಿರುವಂತೆ ೧೯೭೯ರ ಏಪ್ರಿಲ್‌ನಲ್ಲಿ ತುರ್ತುಪರಿಸ್ಥಿತಿ ಹಿಂಪಡೆದುಕೊಂಡ ಮಾರನೆಯ ತಿಂಗಳು ಬರೆದ 'ಸ್ವಾತಂತ್ರ್ಯೋತ್ಸವ ೧೯೭೭'. ಸಾಮಾನ್ಯವಾಗಿ ಶ್ರೇಷ್ಠ ಸಾಹಿತಿಯೊಬ್ಬರ ಬಿಡಿ ಕವಿತೆಯೊಂದನ್ನು ಚರ್ಚೆಗೆ ಎತ್ತಿಕೊಂಡಾಗಲೂ ನಾವು ಅವರ ಸಮಗ್ರ ಕಾವ್ಯವನ್ನು ಹಿನ್ನೆಲೆಗೆ ಇಟ್ಟುಕೊಳ್ಳದಿದ್ದರೆ ನಾವು ಆ ಕವಿತೆಗೂ, ಕವಿಗೂ ಸರಿಯಾಗಿ ಮುಖಾಮುಖಿ ಆಗಲಾರೆವು ಎಂಬುದೇ ನನ್ನ ನಂಬುಗೆ. ಬಿಡಿ ಕವಿತೆಯನ್ನು ಓದುವಾಗ ದೊರೆಯುವ ಅನುಭವ ವಿಶೇಷವು ವಿಸ್ತಾರವಾಗಬೇಕಾದರೆ ಅವರ ಒಟ್ಟು ಓದೊಂದೇ ಸರಿಯಾದ ದಾರಿ. ಹಾಗಾಗಿ ಸಾಮಾನ್ಯನಂತೆ ಈ ನಾನು! ಕವಿತೆಯ ಬಗ್ಗೆ ಮಾತನಾಡುತ್ತಲೇ ತತ್ಸಂಬಂಧಿ ಧೋರಣೆ ಹೊಂದಿರುವ ಅವರ ಇನ್ನಿತರ ರಚನೆಗಳತ್ತ ಒಂದು ಕಿರುನೋಟ ನೋಡುವುದು ತಪ್ಪಲ್ಲ ಎಂದೇ ಭಾವಿಸುತ್ತೇನೆ. ಈ ಮೇಲಿನ ಎಲ್ಲ ಕವಿತೆಗಳನ್ನು ಒಂದು ಸೂತ್ರದಲ್ಲಿ ಬಂಧಿಸಲು ಸಾಧ್ಯವಿಲ್ಲದಿದ್ದರೆ ಅದರ ಹಿನ್ನೆಲೆಯಲ್ಲಿ ಯೋಚಿಸುವ ಸಾಧ್ಯತೆ ಇದ್ದೇ ಇದೆ.

ಇನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡಿರುವ ಸಾಮಾನ್ಯನಂತೆ ಈ ನಾನು! ಕವಿತೆಗೆ ನೇರವಾಗಿ ಬರುವುದಾದರೆ; ಈ ಕವಿತೆಯ ಮುಖ್ಯ ಧ್ವನಿಯೇ ನಾನು ಸಾಮಾನ್ಯನಲ್ಲ ಎಂಬುದಾಗಿದೆ. ಸಾಮಾನ್ಯತೆ ಎನ್ನುವುದು ಈ ಕವಿತೆಯಲ್ಲಿ ಮುಗ್ಧತೆಯ ಸ್ಥಾನವನ್ನು ಪಡೆಯದೆ ಮೌಢ್ಯತೆಯ ಸ್ಥಾನಕ್ಕೆ ತಳ್ಳಲ್ಪಟ್ಟಿರುವುದನ್ನು ಕವಿ ವಿರೋಧಿಸುತ್ತಿದ್ದಾರೆ. ವ್ಯಕ್ತಿಯನ್ನು ಅತ್ಯಂತ ಸಾಮಾನ್ಯ ಪ್ರಾಣಿಗಳ ರೀತಿ ಕಡೆಗಣಿಸಿ ವ್ಯಕ್ತಿ ಸ್ವಾತಂತ್ರ್ಯವನ್ನು ಕೊಂದು ಅವನನ್ನು ತಮ್ಮ ತೊತ್ತಾಗಿಸಿಕೊಳ್ಳುವ ದುಷ್ಟ ರಾಜಕಾರಣ ವ್ಯವಸ್ಥೆಗೆ ಈ ಕವಿತೆ ಒಂದು ಸವಾಲಾಗಿದೆ. 'ನಾನು' ಎನ್ನುವ ಅಹಂಕಾರದಿಂದ ಇಂದಿರಾ ಯುಗವು ಈ ಹಿಂದಿನ ನೆಹರು ಯುಗ, ಅದಕ್ಕಿಂತ ಮುಂಚಿನ ಗಾಂಧಿ ಯುಗವನ್ನು ಅದರ ಆಶೋತ್ತರಗಳನ್ನು ಧ್ವಂಸ ಮಾಡಿ ಕುಟಿಲತೆಯಿಂದ ಮೆರೆಯುತ್ತಿರುವುದನ್ನು ಅತ್ಯಂತ ಸಾತ್ವಿಕವಾದ ಸಿಟ್ಟಿನ ಮೂಲಕ ವಿರೋಧಿಸುತ್ತಾರೆ.

ಈ ಕವಿತೆ ಅಪಾರವಾದ ಸಿಟ್ಟಿನಿಂದ ಪ್ರಾರಂಭವಾಗುತ್ತದೆ. ಆರಂಭದಲ್ಲಿಯೇ ನೇರವಾಗಿ ಜಗಳಕ್ಕೆ ನಿಂತಂತೆಯೇ ವಿರೋಧಿಯನ್ನು ನಿಸ್ತಂತುಗೊಳಿಸುವ ಆಶಯ ಹೊಂದಿದೆ. ಹಾಗಾಗಿಯೇ ಅತ್ಯಂತ ಅಬ್ಬರದ ದನಿಯಲ್ಲಿಯೇ ಕವಿತೆಯನ್ನು ಆರಂಭಿಸಿದ್ದಾರೆ. ಇಲ್ಲಿ ಕೆ.ಎಸ್. ನರಸಿಂಹಸ್ವಾಮಿಯವರು ತಮ್ಮ 'ಸಂಜೆ ಹಾಡು'(೨೦೦೦) ಕವನ ಸಂಕಲನದ ಅಡಿಗರ ಮಾತು ಕವನದಲ್ಲಿ ಅಡಿಗರ ಮಾತನ್ನು ಕುರಿತು ಅವರ ''ದನಿ ಯಕ್ಷಗಾನದ ರೀತಿ'' ಎಂದದ್ದು ನೆನಪಿಗೆ ಬರುತ್ತದೆ. ತುರ್ತು ಪರಿಸ್ಥಿತಿಯನ್ನು ಘೋಷಿಸಿದವರ ವಿರುದ್ಧ ಏಕಾಏಕಿ ಜಗಳಕ್ಕೆ ನಿಲ್ಲುತ್ತಲೇ ಈ ಕಾಲಘಟ್ಟದ ಪ್ರಶ್ನಿಸಬಾರದು ಎಂಬ ಹುಂಬತನಕ್ಕೆ ಸವಾಲೆಸೆದಿದ್ದಾರೆ. ಆಡಳಿತ ಯಂತ್ರ, ಯಾವ ಮನಸ್ಸುಗಳಿಗೂ

ಬೆಲೆ ಕೊಡದೆ ಜನಪ್ರತಿನಿಧಿಗಳೆಂಬ ವಿನಯ ತೋರೆದು ಜನಭಕ್ಷಕರಾಗಿ, ಜನರ ಹಣ ಕೊಳ್ಳೆಹೊಡೆದು ಅವರನ್ನು ತುಚ್ಛವಾಗಿ ಕಾಣುವ ಮನಸ್ಥಿತಿಗೆ ಸೆಡ್ಡು ಹೊಡೆದದ್ದು ಈ ಕವಿತೆಯ ವಿಶೇಷವಾಗಿದೆ.

ಈ ಕವಿತೆಯಲ್ಲಿ ಏಕಕಾಲಕ್ಕೆ ಎರಡು 'ನಾನು'ಗಳಿವೆ. ಈ ಎರಡೂ 'ನಾನು'ಗಳು ಎರಡು ವಿಭಿನ್ನವೂ ಪರಸ್ಪರ ವಿರೋಧಿಗಳೂ ಆದ ನೆಲೆಗಟ್ಟಿನಲ್ಲಿವೆ. ಮೊದಲನೆಯ 'ನಾನು'- ಅಹಂಕಾರದಿಂದ ಕೂಡಿದ ಸರ್ವಾಧಿಕಾರತ್ವದ ಧೋರಣೆಯಲ್ಲಿರುವ ಮನಃಸ್ಥಿತಿ ಹೊಂದಿದ್ದರೆ ಎರಡನೆಯ 'ನಾನು'- ಜನಸಾಮಾನ್ಯರ ಅಸ್ಮಿತೆಯ ದನಿಯಾಗಿದೆ. ಮೊದಲನೆಯ 'ನಾನು' ಮುಖವಾಡವಾದರೆ; ಎರಡನೆಯ 'ನಾನು' ಮುಖವಾಗಿದೆ. ಮೊದಲನೆಯ ನಾನುವಿನಲ್ಲಿ ಅಧಿಕಾರವಿದೆ. ಹಾಗಾಗಿಯೇ ಅಪರಿಮಿತವಾದ ಜನಬಲವಿದೆ. ಎರಡನೆಯ ನಾನುವಿನಲ್ಲಿ ಆತ್ಮವಿಶ್ವಾಸವಿದೆ. ಹಾಗಾಗಿಯೇ ಸವಾಲುಗಳನ್ನು ಎಸೆಯಬಲ್ಲ ಎದೆಗಾರಿಕೆಯಿದೆ. ಮೊದಲನೆಯ ನಾನುವಿನಲ್ಲಿ ಮಂದಿಯನ್ನು ಕುರಿ ಎಂದು ತಿಳಿದುಕೊಳ್ಳುವ ಕುತ್ಸಿತ ಬುದ್ಧಿ ಇದ್ದರೆ, ಎರಡನೆಯ ನಾನುವಿನಲ್ಲಿ ಪ್ರತ್ಯೇಕತೆಯ ಬೆಳಕಿನುಪ್ಪರಿಗೆ ಕಟ್ಟುತ್ತಾ ಕೊನೆಯವರೆಗೆ ಉಳಿದುಕೊಳ್ಳುವ ಜೀವಂತಿಕೆಯಿದೆ.

ಅಹಂಕಾರದ ನಾನುವಿನ ಲಕ್ಷಣಗಳು

1. 'ದೂರದಲ್ಲಿ ಸಮಶೀತೋಷ್ಣ ಕೋಣೆಯೊಳಗಡೆ ಹೆಸರು ಕುಲಗೋತ್ರ ತಿಳಿಯದೆ ಸಲೀಸು ಸಾಧಾರಣೀಕರಣ ಕ್ರಿಯಾಕರ್ಮ ಮುಗಿಸಿ ಕುಂತಲ್ಲಿಯೇ ಬೊಜ್ಜದೂಡೆ ಮೆಲ್ಲುತ್ತ ಕವಳ ಜಗಿಯುವ ಮಹಾ ಧಮ್ಮಸ್ಸಿನವನು.'
2. 'ಹೂ ಹಣ್ಣು ತಳೆದ ಮರ ಮರೆದು ಸೆಟೆದು ನಿಂತಿರುವ ಕೊಡಲಿಯ ಕಾವು'
3. 'ಮಂದಿ ಎಂದರೆ ಮಂದೆ ಮಂದೆ ಎಂದರೆ ಕುರಿ, ಕುರಿ ಎಂದರೆ ತರಕಾರಿ ಎಂದು ತಿಳಿದು ಕತ್ತರಿಸುವ ಜನ.'
4. 'ನಂಬರು ಹಾಕಿ ಟ್ರಕ್ಕಿಗೆ ತುಂಬಿ ಕಸಾಯಿಖಾನೆ ಡಬ್ಬಿಗೆಲ್ಲ ಒಂದೇ ಹೆಸರು ಪಟ್ಟಿಯಂಟಿಸುವ, ಟಿನ್ನುಗಳಲ್ಲಿ ಮಾತ್ರವೆ ನನ್ನ ರುಚಿ ನೋಡುವುದ್ದೇಶವುಳ್ಳ ಸಮವಸ್ತ್ರ ಪ್ರವಾದಿ.'
5. 'ಬಾಲ ಕಳೆದುಕೊಂಡ ನರಿ'
6. 'ರೊಟ್ಟಿ ತುಣುಕಿಗೆ ಮುಖ ಮೂಗು ಕೆತ್ತಿಸಿಕೊಂಡ ಬೇವಾರ್ಸಿ'
7. 'ಇಂಚುಪಟ್ಟಿ ಹತ್ತರಿ ಒಡಿದು ಸಾಮಾನ್ಯಕ್ಕೆ ಹತ್ತ ಕೆತ್ತುವಾಚಾರಿ'
8. 'ಸಲ್ಲುವ ಕಾಳದಕ್ಷಿಣೆ ಹಣದ ಜಣಾತ್ಕಾರಕ್ಕೆ ನಿರಾಕಾರ ಪೂಜಕ'

ಈ ಮಾತುಗಳಲ್ಲಿ ಅಡಿಗರು ಸಾಮಾನ್ಯನಂತೆ ನನ್ನನ್ನು ಕಾಣುವ ಸರ್ವಾಧಿಕಾರದ ಧೋರಣೆಯಿರುವ ಮಹಾಧಮ್ಮಸ್ಸಿನ, ಕೊಡಲಿಯ ಕಾವಿನ, ಕತ್ತರಿಸುವ ಜನ; ಸಮವಸ್ತ್ರ ಪ್ರವಾದಿ, ಬಾಲ ಕಳೆದುಕೊಂಡ ನರಿಯ ಬೇವಾರ್ಸಿಯ, ಸಾಮಾನ್ಯಕ್ಕೆ ಹತ್ತ ಕೆತ್ತುವಾಚಾರಿಯ, ಹಣದ ಜಣಾತ್ಕಾರಕ್ಕೆ ನಿರಾಕರ ಪೂಜಕನಾದ ಅಹಂಕಾರಿಯನ್ನು ಚಿತ್ರಿಸುತ್ತಾರೆ. ಸಾಮಾನ್ಯರ ಹೆಸರು, ಕುಲ, ಗೋತ್ರ ಒಂದನ್ನೂ ಅರಿಯದೆ ಅವರ ಜೀವಕ್ಕೆ ಒಂದು ಬೆಲೆಯಿದೆ ಎಂಬ ಕಿಂಚಿತ್ ಗುಣವೂ ಇಲ್ಲದೆ ಕೇವಲ ಸಮಶೀತೋಷ್ಣ ಕೋಣೆಯಲ್ಲಿ ಕೂತು ಈ ಜನರ ಭವಿಷ್ಯತ್ತನ್ನು ನಿಯಂತ್ರಿಸುತ್ತಾ ಇರುವವರನ್ನು ಕವಿ ಧಿಕ್ಕರಿಸುತ್ತಾರೆ. ಅಂತಹ ಮಹಾ ಧಮ್ಮಸ್ಸಿನ ಜನ ಇಂತಹ ಜನರ ಶ್ರಾದ್ಧ

ಮಾಡುತ್ತಾ ಕೂರುತ್ತಾರೆ. ಹೂವು, ಹಣ್ಣು ತಳೆದ ಮರವನ್ನು ಕೊಡಲಿಯ ಕಾವು ತೋರಿಸಿಯೇ ಒಣಗಿಸುತ್ತಾ ಬೆದರಿಸುವ ಮನಸ್ಥಿತಿ ಇವರಲ್ಲಿದೆ. ಯಾವ ಆಯಕಟ್ಟಿನ ಜಾಗದಲ್ಲಿ ಸರಕಾರದ ಬೊಕ್ಕಸದಿಂದ ತೆಗೆಯುವ ಇಡಿಗಂಟನ್ನು ಜನೋಪಯೋಗಿ ಕೆಲಸಗಳಿಗೆ ವಿನಿಯೋಗಿಸುವ ಸಂದರ್ಭದಲ್ಲಿ ಇಂಚುಪಟ್ಟಿ ಇಟ್ಟುಕೊಂಡು ಹತ್ತರಿ ಹೊಡೆಯುತ್ತ ಮುಕ್ಕಾಲು ಭಾಗ ಕಿಸೆ ತುಂಬಿಸಿಕೊಳ್ಳುವ ನಿರಾಕಾರ ಪೂಜಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಲಜ್ಜೆಗೆಟ್ಟ ಜನ ಅಧಿಕಾರದ ಮದದಿಂದ ಪ್ರಜಾಪ್ರಭುತ್ವಕ್ಕೆ ನೀಡುತ್ತಿರುವ ಕೊಡಲಿಯ ಏಟನ್ನು ಸಹಿಸಿಕೊಳ್ಳುವ ಮುಗ್ಧ ಜನರ ಮೇಲೆ ಕವಿ ಮರುಗುತ್ತಾರೆ.

ಆತ್ಮವಿಶ್ವಾಸದ ನಾನುವಿನ ಲಕ್ಷಣಗಳು

ಈ ಅಹಂಕಾರದ ಸರ್ವಾಧಿಕಾರದ ವೈವಿಧ್ಯವೇ ಹುಳಿಯಾದ, ಬಾಲ ಕಳೆದುಕೊಂಡ ನರಿಯಂತಿರುವ, ಮುಖವಾಡ ತೊಟ್ಟ ಜನಪ್ರತಿನಿಧಿಯ ಎದುರು ಬಂಡಾಯದ ಬಾವುಟ ಹಾರಿಸಿ ತನ್ನ ಅಸ್ಮಿತೆ ಎತ್ತಿ ಹಿಡಿಯುವ ಈ ನಾನು ಸಾಮಾನ್ಯನೇ. ಖಂಡಿಯಾ ಅಲ್ಲ, ಈ ನಾನು ಯಾರು?

- ‘ನನಗೊಂದು ಐಡೆಂಟಿಟಿ ಇದೆ. ‘ಈ ಚಹರೆ, ಈ ನಿಲುವು, ಈ ಮನಸ್ಸಿನ ರೆಪ್ಪೆಯಿರದ ದೇವದ ಕಣ್ಣು ಇರುವವನು.’
- ‘ಒಡಕು ಲಾಟೀನೊಳಗೆ ಕರಕು ಬತ್ತಿಯನೆತ್ತಿ ಹೊತ್ತಿ ಉರಿವ ದೀಪದ ಕಾವು’
- ‘ಹೆಸರು ಹಿಡಿದು ಕೂಗಿ ಹಿಡಿಹುಲ್ಲು ನೀಡಿ ಮೈಸವರಿ ಸರಿ ನುಡಿಯುವ ಕ್ರಿಯಾವಂತಿಕೆ ಇರುವ ಜನ.’
- ‘ನಿನ್ನ (ನಾನು ಎಂಬ ಅಹಂಕಾರಕ್ಕೆ) ನಕಾಶೆಗೆ ಸಿಕ್ಕದೆ ನುಣುಚಿ ತನ್ನ ಜೀವಪತಾಕೆ ಎತ್ತಿ ಎತ್ತಿ ಕಾದಾಡುವುದು ಪ್ರತ್ಯೇಕತೆಯ ಬೆಳಕಿನುಪ್ಪರಿಗೆ ಕಟ್ಟುತ್ತ ಕಟ್ಟುತ್ತ ಕೊನೆವರೆಗೆ ಮುಟ್ಟುವ ಜನ.’
- ‘ಬೇಡಿಗೆ ಕೈಯೊಡ್ಡದವ ಕತ್ತಿಗೆ ಇಕ್ಕಿದುರಳನ್ನೆ ಕಚ್ಚುತ್ತ ಕಡಿಯುತ್ತ ಸಿಗಿಯುತ್ತ ಅಗೆಯುತ್ತ ಬಗೆಯುತ್ತಲೇ ಕಣ್ಣಮುಚ್ಚುವವ’
- ‘ತಾಳಕ್ಕೆ ಸರಿ ಹೆಜ್ಜೆ ಹಾಕೆಂದು ಹೂಂಕರಿಸುತ್ತಲಿದ್ದರೂ ನಿನ್ನ ಪಿಸ್ತೂಲು ಮನಸ್ಸಿನಲ್ಲೇ ಬೇರೆ ತಾಳ ಲಯ ನಿಭಾಯಿಸುವ ಹುಟ್ಟಾ ಸ್ವತಂತ್ರ ಪರಮಾಣು ದೇಹಿ.’

ಈ ಆತ್ಮವಿಶ್ವಾಸದ ನಾನುವಿನಲ್ಲಿ ಎಷ್ಟೊಂದು ಕೆಚ್ಚಿದೆ ನೋಡಿ. ಅಸ್ಮಿತೆಯಿದೆ. ಬಡತನವನ್ನು ಮೀರಿ ನಿಲ್ಲುವ ತಹತಹಿಕೆಯಿದೆ. ಕ್ರಿಯಾವಂತಿಕೆಯಿದೆ. ಸ್ವತಂತ್ರದ ಹಂಬಲವಿದೆ. ಎದೆಗಾರಿಕೆಯಿದೆ. ತನ್ನದೇ ಆದ ಚಹರೆಯಿದೆ, ನಿಲುವಿದೆ, ದೈವದ ಕಣ್ಣಿದೆ. ತಾಳಕ್ಕೆ ತಕ್ಕಹಾಗೆ ಕುಣಿಯುವ ಮನಸ್ಸಿಲ್ಲ. ಬದಲಿಗೆ ಆ ತಾಳವನ್ನೇ ತುಳಿದುಹಾಕುವ, ಬೇಡಿಗೆ ಕೈಯೊಡ್ಡದವ ಕತ್ತಿಗೆ ಬಿಗಿದ ನೇಣನ್ನೆ ಕಡಿದು, ಸಿಗಿದು, ಅಗೆದು ಅದನ್ನು ಬಗೆದಾದರೂ ಸರಿ ತನ್ನ ಸ್ವತಂತ್ರವನ್ನೆ ಘೋಷಿಸಿಕೊಳ್ಳುವ ಹಂಬಲವಿದೆ.

ಆದರೆ ಅಡಿಗರು ಈ ಸಾಮಾನ್ಯನಲ್ಲಿನ ಅಸ್ಮಿತೆಯನ್ನು ಸ್ಥಾಪಿಸಿಕೊಂಡ ಮನುಷ್ಯನನ್ನು ಸಾಮಾನ್ಯತೆಯ ಮಟ್ಟಕ್ಕೆ ಇಳಿದುಹೋಗುವ ಸ್ಥಿತಿ ಯಾವುದೆಂದು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಅದೆಂದರೆ ಮನುಷ್ಯನಲ್ಲಿರುವ ದ್ವಂದ್ವ. ಅತಿ ಸಣ್ಣ ಪ್ರಮಾಣದ ದೈನಂದಿನ ಹೊಟ್ಟೆಪಾಡಿಗಾಗಿ ಆತ

ಯಾರ ಮುಂದಾದರೂ ಕೈಚಾಚಿ ನಿಲ್ಲಬಲ್ಲ. ಯಾವ ನಿಕೃಷ್ಟವಾದ ಕೆಲಸವನ್ನು ಕೂಡ ಮಾಡಬಲ್ಲ. ಈ ದ್ವಂದ್ವವನ್ನು ಅಡಿಗರು ಈ ರೀತಿ ಇಟ್ಟಿದ್ದಾರೆ.

'ತುರಿ ಕಜ್ಜಿ ಮೈಯ ಹರಕಂಗಿ ರೈತ' – ಭಾಗವತ

'ಮಸಿ ಹತ್ತಿ ಕುಸಿಯುತ್ತಿರುವ ಕಾರ್ಖಾನೆ' – ಅವಧೂತ

'ಬಗ್ಗಾಲಿನಲ್ಲಿ ನುಗ್ಗಿ ಬಗ್ಗಿ ಕುಂಟುತ್ತ ಮುಂದೊತ್ತಿಬರುವ' – ಜೀದಿ ಭಿಕಾರಿ

ಈ ಹರಕಂಗಿ ರೈತನಲ್ಲಿ ಕೂಡ ಒಬ್ಬ ಭಾಗವತ ಕೂತಿದ್ದಾನೆ. ಮಸಿ ಹತ್ತಿ ಕುಸಿಯುತ್ತಿರುವ ಕಾರ್ಖಾನೆಯೊಳಗಡೆ ಒಬ್ಬ ಅವಧೂತನಿದ್ದಾನೆ. ಬಗ್ಗಾಲಿನಲ್ಲಿ ನುಗ್ಗಿ ಬಗ್ಗಿ ಕುಂಟುತ್ತ ಮುಂದೊತ್ತಿ ಬರುವವನಲ್ಲೂ ಒಬ್ಬ ಜೀದಿ ಭಿಕಾರಿಯಿದ್ದಾನೆ. ಹಾಗಾಗಿ ಈ ದ್ವಂದ್ವವನ್ನು ಮೀರದೆ ತಮ್ಮದೇ ಆದ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಹರಕಂಗಿ ರೈತ, ಕಾರ್ಖಾನೆ, ಮುನ್ನುಗ್ಗಿ ಬರುವ ಎಂಬ ಕ್ರಿಯಾಶೀಲತೆಯ ಸಂಕೇತಗಳಿಗೆ ಭಾಗವತ, ಅವಧೂತ ಮತ್ತು ಜೀದಿ ಭಿಕಾರಿಯೆಂಬ ಸ್ಥಾವರ ಮೂರ್ತಿಗಳನ್ನು ಪ್ರತಿಸ್ಪರ್ಧಿಗಳನ್ನಾಗಿ ಮಾಡಿ ಕ್ರಿಯಾಶೀಲತೆಯ ಜೊತೆಗೆ ಭಾಗವತದ ಪಾಂಡಿತ್ಯ, ಅವಧೂತ ತತ್ತ್ವದ ಅನುಭವ ಪ್ರಜ್ಞೆ ಹಾಗೂ ಜೀದಿ ಭಿಕಾರಿಯ ಇರುವಿಕೆಯನ್ನು ಮುಖಾಮುಖಿಗೊಳಿಸಿ ಅವರನ್ನು ಅಸ್ಮಿತೆಯ ಸ್ಥಿತಿಯಲ್ಲಿ ತಂದು ನಿಲ್ಲಿಸುತ್ತಾರೆ. ತನ್ಮೂಲಕ ಆ ದ್ವಂದ್ವವನ್ನು ಅಸಾಮಾನ್ಯವಾದ ರೀತಿಯಲ್ಲಿ ಸಮಾನವಾಗಿಸಿದ್ದಾರೆ.

ಈ ದ್ವಂದ್ವವನ್ನು ನೀಗಿಸಿಕೊಂಡ ನಂತರ ಕವಿತೆಯ ಓಟದಲ್ಲಿ ಒಂದು ತೀವ್ರತೆ ಕಾಣಿಸಿಕೊಳ್ಳುತ್ತದೆ. ಅಪಾರವಾದ ಸಿಟ್ಟಿನಿಂದ ಈಗಾಗಲೇ ಆರಂಭಗೊಂಡ ಕವಿತೆ ಅಪರಿಮಿತವಾದ ಭರವಸೆಯ ಹಂತದಲ್ಲಿ ಬಂದು ನಿಂತಿರುತ್ತದೆ. ಇಲ್ಲಿ ನೇರವಾಗಿ ನನ್ನದು ಮುಖ ನಿನ್ನದು ಮುಖವಾಡ 'ನೀನು ಮುಖ ಕೆತ್ತಿಸಿಕೊಂಡ ಪೂಜಾರಿ' ಎಂದರೆ ಮುಖವಾಡ ತೊಟ್ಟವನು. 'ನೀ ತೊಟ್ಟ ಮುಖವಾಡ ಹಿರಣ್ಯಾಕ್ಷನದು. ಈ ಹಿರಣ್ಯಾಕ್ಷ ನೆಲವನ್ನೇ ಚಾಪೆಸುತ್ತಿ ತನ್ನ ಕಂಕಳಲ್ಲಿಟ್ಟು ಈ ನೆಲವನ್ನೇ ಬಗೆಯಬೇಕೆಂಬ ಮನಃಸ್ಥಿತಿಯವನು.' ಅಂದರೆ ಹಿರಣ್ಯಾಕ್ಷನಂತೆ ಈ ಭೂಮಿಯ ಆಳ್ವಿಕೆ ಕೇವಲ ತನಗೆ ಮಾತ್ರ ಸೇರಿರಬೇಕು ಎಂಬ ಸ್ವಾರ್ಥ. ಅದಕ್ಕಾಗಿಯೇ ಕುರ್ಚಿಯನ್ನು ಕಚ್ಚಿ ಅದಕ್ಕೆ ಅಂಟಿಕೊಳ್ಳುವ ಹುನ್ನಾರು. ಆದರೆ ಇಂತಹ ಹಿರಣ್ಯಾಕ್ಷನನ್ನು ಸಂಹರಿಸಲು ವರಾಹ ದಾಡಿ ಮಸೆಯುತ್ತ ಎದ್ದುಬರುತ್ತಿರುವ ಪ್ರತಿಮೆಯನ್ನು ನೀಡಿ ಅತ್ಯಂತ ಸಾಮಾನ್ಯ ಪ್ರಾಣಿ (ಹಂದಿ)ಯಂತಿದ್ದ ಈ ಮನುಷ್ಯ ವರಾಹನ ರೂಪವನ್ನು ತಾಳಿ ಸಂಹರಿಸಿಯೇ ತೀರುತ್ತಾನೆಂಬ ಆಶಾವಾದವನ್ನು ಪ್ರತಿಪಾದಿಸುತ್ತಾರೆ.

ಅಂತೆಯೇ ಕಾಲ ಅಥವಾ ಚುನಾವಣೆ ಎಂಬ ಮುಖ ಕಂಬದಂತೆ ಇರುವ ಪ್ರಜಾಪ್ರಭುತ್ವದ ಆಧಾರ ಕಂಬವಾದ ಈ ಸಾಮಾನ್ಯನೆಂದು ತಿಳಿದುಕೊಂಡಿದ್ದ ಈ ಜನ ತಮ್ಮ ಸುತ್ತ ಹರಡಿದ್ದ ಕಂಬವನ್ನು ಭೇದಿಸಿಕೊಂಡು ನರಸಿಂಹ ಹೊರಬಂದಂತೆ ಹೊರಬಂದು ನಿನ್ನನ್ನು ಸಂಹರಿಸುತ್ತೇನೆ. ಈ ನರಸಿಂಹ ಇರುವುದಾದರೂ ಎಲ್ಲಿ ಕಂಬದಲ್ಲಿ. ಕಂಬ ಎಂದರೆ ಪ್ರಜಾಪ್ರಭುತ್ವ. ಮತ ನೀಡುವ ಜನ ಮಾತ್ರ ಕಂಬದಂತೆ ಉಳಿಯುವ ಜನ. ಅಂದರೆ ತಟಸ್ಥವಾಗಿ ಕೂಡ ಮತ್ತು ಸಾತತ್ಯವಾಗಿ ಕೂಡ. ಇಲ್ಲಿ ನಿನ್ನ ಪಾಲಿಗೆ ಅಣುವಾಗಿ ಇರುವ ನಾನು ನರಸಿಂಹನಾಗಿ ಹೊರಬಂದು ಹಿರಣ್ಯಕಶ್ಯಪುವಾದ ನಿನ್ನ ಸರ್ವಾಧಿಕಾರಕ್ಕೆ ಕೊನೆ ಹಾಡುವೆ ಎನ್ನುವ ಉತ್ಸಾಹ ಒಡಮೂಡಿದೆ. ತನ್ಮೂಲಕ ಅಡಿಗರು ನಿರಾಶಾವಾದಿಯಾಗದೆ ಇಂತಹ ಅಹಂಕಾರಕ್ಕೂ ಕೊನೆಯಿದೆ ಎಂದು ತೋರಿಸಿದ್ದಾರೆ.

ಕಲಾಕೃತಿಯಾಗಿ ಈ ಕವಿತೆ

ಈ ಕವಿತೆಯಲ್ಲೂ ತಾನು ತುರ್ತು ಪರಿಸ್ಥಿತಿಯ ವಿರುದ್ಧ ಮಾತನಾಡುತ್ತಿದ್ದೇನೆ ಎಂಬ ವಾಚ್ಯತೆಯನ್ನು ತೋರಿಸಿಲ್ಲ. ಆದರೂ ಈ ಕವಿತೆ ಬರೆದಿರುವುದು ತುರ್ತು ಪರಿಸ್ಥಿತಿಯ ಕಾಲದಲ್ಲಿಯೇ. ಹಾಗಾಗಿ ಈ ಕವಿತೆಯನ್ನು ಈ ಹಿನ್ನೆಲೆಯಲ್ಲಿ ಪರಿಭಾವಿಸಲಾಗಿದೆ. ಹೀಗೆ ಯೋಚನೆ ಮಾಡಲು ಮುಖ್ಯವಾದ ಸಂಕೇತಗಳು ಕವಿತೆಯ ಶಿಲ್ಪದಲ್ಲಿಯೇ ಅಂತರ್ಗತವಾಗಿರುವುದನ್ನು ಗಮನಿಸಬೇಕು. ತುರ್ತು ಪರಿಸ್ಥಿತಿಯ ಕಾಲಘಟ್ಟದಲ್ಲಿ ಯಾರಾದರೂ ಇಂದಿರಾರವರನ್ನು ಹೊಗಳಿದರೆ ಅಡಿಗರಿಗೆ ವಿಪರೀತ ಸಿಟ್ಟು ಬರುತ್ತಿತ್ತು ಎಂಬುದನ್ನು ಬೇಂದ್ರೆಯಂತಹ ಹಿರಿಯ ಕವಿಯ ಬಗ್ಗೆ ಬರೆದ ಸಂಗತಿಯಿಂದ ತಿಳಿದುಕೊಳ್ಳಬಹುದು. ಬೇಂದ್ರೆಯವರ ಕಾವ್ಯ ಎಂಬ ಪುಟ್ಟ ಪುಸ್ತಕದಲ್ಲಿ ಅಡಿಗರು ನಮ್ಮ ದೇಶದಲ್ಲಿ ಎಮರ್ಜೆನ್ಸಿ ಇದ್ದ ಕಾಲದಲ್ಲಿ ಬೇಂದ್ರೆಯವರು ಇಂದಿರಾ ಗಾಂಧಿಯವರನ್ನು ಬೆಂಬಲಿಸಿ ಹೇಳಿಕೆ ಕೊಟ್ಟದ್ದು ಕೇಳಿ ನಮಗೆಲ್ಲ ದಿಗ್ಭ್ರಾಂತಿ ಆಗಿತ್ತು. ಆಧುನಿಕ ಕನ್ನಡ ಕಾವ್ಯದಲ್ಲಿ ಸ್ವಾತಂತ್ರ್ಯವನ್ನು ಕುರಿತು ಮೂವತ್ತು ಮೂರು ಕೋಟಿ, ಕನಸಿನೊಳಗೊಂದು ಕನಸು, ನರಬಲಿ ಮುಂತಾದ ಅತ್ಯುತ್ತಮವಾದ ಕೆಲವು ಕವನಗಳನ್ನು ರಚಿಸಿದ್ದು ಮಾತ್ರವಲ್ಲ, ಸ್ವಾತಂತ್ರ್ಯವೆಂಬ ಮೌಲ್ಯವನ್ನು ಬದುಕಿಕೊಂಡು ಬಂದ ಈ ದೊಡ್ಡ ಕವಿ ಏಕೆ ಇಂಥ ಮಾತಾಡಿದರು ಎಂದು ವ್ಯಸನ ಪಟ್ಟವರು ಕೆಲವರು. ಸಿಟ್ಟಾದವರು ಅನೇಕರು. ಶ್ರೀ ಬೇಂದ್ರೆಯವರು ವ್ಯಕ್ತ ಪಡಿಸಿದ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಮಾತ್ರವಲ್ಲ ಅದನ್ನು ವಿರೋಧಿಸುತ್ತೇನೆ ಎಂದು ಹೇಳಿದ್ದಾರೆ. ಇದನ್ನು ಹೇಳಿದ ತಕ್ಷಣ ಅಡಿಗರು ದೊಡ್ಡವರಾಗುವುದಿಲ್ಲ. ಅದರ ನಂತರ ಅವರಾಡುವ ಮಾತು ಅವರು ನಿಜವಾಗಿಯೂ ಪ್ರಜಾಪ್ರಭುತ್ವವಾದಿ ಹಾಗೂ ಸ್ವಾತಂತ್ರ್ಯಪ್ರೇಮಿ ಎಂಬುದನ್ನು ತೋರಿಸಿಕೊಡುತ್ತದೆ. ಅದನ್ನು ವಿರೋಧಿಸುವ ಹಕ್ಕು ನನಗಿರುವ ಹಾಗೆ ಅದೇ ರೀತಿಯ ಅಥವಾ ಬೇರೆಯ, ತಮಗೆ ಇಷ್ಟವಾದ ಹೇಳಿಕೆ ಕೊಡುವ ಹಕ್ಕು ಬೇಂದ್ರೆಯವರಿಗಿದೆ. ಆ ಬಗ್ಗೆ ಅವರನ್ನು ಧಿಕ್ಕರಿಸಿ, ಅವಹೇಳನ ಮಾಡಿದ ಅವಮಾನಗೊಳಿಸಲು ಯತ್ನಿಸುವುದು ಪ್ರಜಾತಂತ್ರ ವಿರೋಧಿಯಾದ ಸರ್ವಾಧಿಕಾರ ಬುದ್ಧಿಯ ದ್ಯೋತಕ ಎಂದು ನಾನು ಭಾವಿಸುತ್ತೇನೆ. ಎಂದಿದ್ದಾರೆ.

ಈ ಮಾತು ಅಡಿಗರು ತಾವು ಯಾವ ರೀತಿ ತಮ್ಮ ಪ್ರಾಮಾಣಿಕತೆಗೆ ಬದ್ಧರು ಎಂದು ತೋರಿಸುತ್ತದೆ. ಬೇಂದ್ರೆಯವರನ್ನು ಟೀಕಿಸಿದ್ದರೆ ಅದು ಅಹಂಕಾರವಾಗುತ್ತಿತ್ತು. ತಾವು ಬರೆದ ಕವಿತೆಗೆ ಅವರು ಅಪ್ರಾಮಾಣಿಕರಾಗುವ ಸಾಧ್ಯತೆಯಿತ್ತು. ಆದರೆ ಅಂತಹ ಭಿನ್ನಾಭಿಪ್ರಾಯವನ್ನು ಒಪ್ಪಿಕೊಂಡು ನಡೆಯುವುದು ಮಾತ್ರ ಪ್ರಜಾತಂತ್ರ ಎಂಬುದು ಅಡಿಗರ ಕಾಳಜಿಯಾಗಿತ್ತು.

ಈ ಕವಿತೆ ಕಲಾಕೃತಿಯಾಗಿ ಇಂದಿರಾ ಯುಗವನ್ನು ಸ್ಪಷ್ಟವಾಗಿ ಸಾಂಕೇತಿಕವಾಗಿ ಸೂಚಿಸುತ್ತಿದೆ ಎಂದು ತೋರುವುದಿಲ್ಲವೇ. ಇಲ್ಲಿ ಹೇಳಿರುವ ನಾನು ಎಂದರೆ 'I' (ಐ) ಎಂದರೆಕಾಂಗ್ರೆಸ್. 'I' ಅಂದರೆ ಇಂದಿರಾ ಕಾಂಗ್ರೆಸ್ ಎಂಬ ಅರ್ಥ ಬರುವುದಿಲ್ಲವೇ. ಕಾಂಗ್ರೆಸ್‌ನ ವಿಭಜನೆಯ ಸರಮಾಲೆಯಲ್ಲಿ ಅಂತಿಮ ಹಂತ ಇದೇ ಎಂದು ಈ ಯುಗ ಪ್ರತಿಪಾದಿಸಲಿಲ್ಲವೇ? ಈ ಸರಕಾರದ ಗುರುತಾದರೂ ಏನು ಕೈ ಅಂದರೆ ಹಸ್ತವಲ್ಲವೇ? ಇದನ್ನೆ ಅಡಿಗರು ಸಾಮುದ್ರಿಕ ಎಂಬ ಮಾತಿನಲ್ಲಿ ಹೇಳಿರಬಹುದಲ್ಲವೇ. ಈ ಸಾಮುದ್ರಿಕಕ್ಕೆ ನಾನೂ ಕೂಡ ಒಂದು ಕೈಯನ್ನು ತೋರಿಸಿಯೇ ಬಿಡುವ ಎಂಬ ಮಾತು ಅವರ ಭಾಷೆಯಲ್ಲಿಯೇ ಅವರಿಗೆ ಒಡ್ಡಿದ ಸವಾಲಿನಂತೆ ಕಾಣುವುದಿಲ್ಲವೇ? ಹಾಗಾಗಿ ಈ ಸಾಮುದ್ರಿಕದ ದ್ಯೋತಕ ಅತ್ಯಂತ ಸಾರ್ಥಕವಾದಂತೆಯೇ ಅಲ್ಲವೇ?

ನೀನು ಸಮಶೀತೋಷ್ಣ ಕೋಣೆಯಲ್ಲಿ (Air conditioned Room) ಸಲೀಸಾಗಿ ಕೂತು ನಮ್ಮ ಕ್ರಿಯಾಕರ್ಮ ಮುಗಿಸಿದರೆ (ಅಂದರೆ ಹೇಡಿಯಂತೆ) ನಾನು ಸಾರ್ವಜನಿಕವಾಗಿಯೇ ಗಡಿಯಾರ ಮುಖದಿಂದ (ಅಂದರೆ ಚುನಾವಣೆ) ನಿನ್ನ ಕ್ರಿಯಾಕರ್ಮ ಮುಗಿಸಬಲ್ಲೆ ಎನ್ನುವ ಕವಿ ನೆಹರೂ ಯುಗವನ್ನು ಇಂದಿರಾ ಯುಗಕ್ಕೆ ಸಂವಾದಿಯಾಗಿ ನಿಲ್ಲಿಸುವ ಪ್ರತಿಮೆಗಳನ್ನು ಕಾಣಿಸಿರುವ ರೀತಿ ಮಾತ್ರ ಅದ್ಭುತವಾಗಿದೆ. ಸಾಮಾನ್ಯ ಬೈಗುಳದಂತೆ ಕಾಣುವ ನಿಮ್ಮಪ್ಪ ಸಾಮಾನ್ಯ ಇದು ಸಾಮಾನ್ಯ ರೇಗುವಿಕೆಯಂತೆ ಕಂಡರೂ ಈಗ ಇದು ಯಾರನ್ನು ಕುರಿತು ದಾಖಲಿಸಿದ ಮಾತು ಎಂದು ತಿಳಿಯುತ್ತಲ್ಲವೆ ಸಮವಸ್ತ್ರ ಪ್ರವಾದಿ, ಮುಖ ಮೂಗು ಕೆತ್ತಿಸಿಕೊಂಡ ಬೇವಾರ್ಸಿ, ಬಾಲ ಕಳೆದುಕೊಂಡ ನರಿ ಹಾಗೂ ವೈವಿಧ್ಯವೇ ಹುಳಿ ಎಂಬ ಮಾತುಗಳು ಯಾರನ್ನು ಕುರಿತು ಹೇಳಿದ ಮಾತುಗಳು ಎಂದು ತಿಳಿಯುವುದಿಲ್ಲವೇ. ವೈವಿಧ್ಯವೇ ಹುಳಿ ಎಂಬ ಮಾತಿನಲ್ಲಿ ನೆಹರು ಯುಗದ ಪ್ರಮುಖ ಧೋರಣೆಗಳಲ್ಲಿ ಒಂದಾದ ವಿವಿಧತೆಯಲ್ಲಿ ಏಕತೆ (unity in diversity) ಇಂದಿರಾ ಯುಗಕ್ಕೆ ಬಂದಾಗ ಯಾವ ಮುಖವಾಡ ಧರಿಸಿತು ಎಂದು ತಿಳಿಯುವುದಿಲ್ಲವೆ?

ಹಾಗಾಗಿಯೇ ಕವಿ ಇಲ್ಲಿ ಕೇಳುತ್ತಿರುವುದು ಇಷ್ಟೆಲ್ಲ ಆಗಿರುವ ನಿನ್ನ ಎದೆಗೂಡಲ್ಲಿರುವ ಯಂತ್ರದ ಹೆಸರೇನು? ಉಸಿರೋ ಉಸಿರು! ಯಾಕೆಂದರೆ ಬದುಕಿರುವ ನಾನುವಿಗೆ ತನ್ನದೇ ಆದ ಒಂದು ಇತಿಹಾಸ, ಹಾಸ, ವಿಕಾಸ, ವಿಲಾಸ, ಗುರಿ, ಪಾಶ ಭಿನ್ನವಾಗಿರುತ್ತದೆ. ಇದೇ ವೈವಿಧ್ಯತೆ. ಆದರೆ ಈ ವೈವಿಧ್ಯತೆಯೇ ನಿನಗೆ ಹುಳಿ. ಯಾಕೆಂದರೆ ಕೇವಲ ಕಾಳದಕ್ಷಿಣೆ ಹಣದ ಝಣಾತ್ಕಾರ ನಿರಾಕಾರ ಪೂಜಕ ನೀನು-ಕುರ್ಚಿಯ ಕಚ್ಚಿ ಅಂಟಿಕೊಳ್ಳುವ ಹುನ್ನಾರು ನಿನದು. ಅದೊಂದೇ ನಿನ್ನ ಪರಮಗುರಿ.

ಆದ್ದರಿಂದಲೇ ಅಹಂಕಾರದ ನಾನುವಿನ ಜೊತೆ ಅಸ್ಮಿತೆಯ ನಾನು ಬೆರೆಯುವುದಿಲ್ಲ. ಯಾಕೆಂದರೆ ನನ್ನ ಜಾಯಮಾನ ಏನು ಗೊತ್ತಾ? ತನ್ನ ಜೀವಪತಾಕೆ ಎತ್ತಿ ಎತ್ತಿ ಕಾದಾಡುವುದು. ಪ್ರತ್ಯೇಕತೆಯ ಬೆಳಕಿನುಪ್ಪರಿಗೆ ಕಟ್ಟುತ್ತ ಕಟ್ಟುತ್ತ ಕೊನೆವರಿಗೆ ಎನ್ನುವವನು ನಾನು. ವೈವಿಧ್ಯತೆಯೇ ಹುಳಿಯಾದ ನಿನಗೆ ಈ ಪ್ರತ್ಯೇಕತೆಯನ್ನು (ಅಂದರೆ ನನ್ನಿಂದ) ಅರಗಿಸಿಕೊಳ್ಳುವ ಶಕ್ತಿಯಿಲ್ಲ. ಈ ಕವಿತೆಯಲ್ಲಿರುವ ಮುಖವುಳ್ಳವರ ಮೋಡಿ ಎಂಬುದು ನೆಹರು ಯುಗದ ಸ್ಮರಣೆಯಂತೆ ತೋರುವುದಿಲ್ಲವೇ? ಈ ಮುಖವುಳ್ಳವರ ಮೂತಿಯನ್ನು ಕೆತ್ತಿ ಅಥವಾ ದೊಡ್ಡಿಯಲ್ಲಿಟ್ಟು ಎಂಬ ಮಾತು ಇಂದಿರಾಯುಗದ ಸಮರ್ಥ ರೂಪಕವಲ್ಲದೆ ಮತ್ತೇನು?

ಸಾಮಾನ್ಯನಂತೆ ಈ ನಾನು!
ಕವಿತೆಯೊಂದಿಗೆ ಇನ್ನಿತರ ಕವಿತೆಗಳ ಸಾವಯವ ಸಂಬಂಧ

ಈಗಾಗಲೇ ಹೇಳಿರುವಂತೆ ಒಬ್ಬ ಕವಿ ತನ್ನ ಒಂದು ಕವಿತೆಯ ಮೂಲಕ ಪ್ರತಿಪಾದಿಸಿದ ತಾತ್ವಿಕತೆಯು ಎಳೆಎಳೆಯಾಗಿ ಹಿಂದಿನಿಂದಲೂ ಹರಿದು ಬಂದಿರುವ ಸಾಧ್ಯತೆಯಿರುವಂತೆಯೇ ಮುಂದೂ ಸಹ ಮುಂದುವರೆಯುವ ಅನಿವಾರ್ಯತೆಯೂ ಒಮ್ಮೊಮ್ಮೆ ಕೆಲಸ ಮಾಡುತ್ತಿರುತ್ತದೆ. ಉದಾಹರಣೆಗೆ ಅಡಿಗರ ಅನೇಕ ಲೇಖನಗಳು ಇದೇ ವಸ್ತುವನ್ನು ಮತ್ತೆ ಮತ್ತೆ ಚರ್ಚೆಗೆ ಎತ್ತಿಕೊಳ್ಳುತ್ತದೆ. 'ಪ್ರಜಾಪ್ರಭುತ್ವದ ಜೀವಾಳ' ಎಂಬ ತಮ್ಮ ಲೇಖನದಲ್ಲಿ (ಜನವರಿ ೧೯೭೦ರಲ್ಲಿ ಬರೆದದ್ದು) ''ಪ್ರಜಾತಂತ್ರದ ಜೀವಾಳ ಯಾವುದು ಎಂದು ಯೋಚಿಸುವಾಗ ಅದು ಭಿನ್ನಮತ.

ಅನ್ಯಮತ, ಅಭಿಪ್ರಾಯಭೇದಗಳನ್ನು ಸಹಿಸುವುದು ಮಾತ್ರವಲ್ಲ ಗೌರವಿಸಲೂ ಸಮರ್ಥವಾದ ಒಂದು ವಿಶಿಷ್ಟ ಮನಃಸಂಸ್ಕಾರ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಮೂಲತಃ ಅದ್ವಿತೀಯವಾದ ಪ್ರತಿಯೊಬ್ಬ ಪ್ರಜೆಯ ವ್ಯಕ್ತಿತ್ವವನ್ನು ಮನ್ನಿಸಿ ಪೋಷಿಸಿವುದರ ಮೇಲೆ ಆ ವ್ಯಕ್ತಿತ್ವದ ಅಂತರಂಗದಲ್ಲಿ ನಮ್ಮ ಗೌರವಕ್ಕೆ ಯೋಗ್ಯವಾದ ನಿಗೂಢ ರಹಸ್ಯವೊಂದು ಅಡಗಿದೆ ಎಂಬ ಶ್ರದ್ಧೆಯ ತಳಹದಿಯ ಮೇಲೆ ಮಾತ್ರ ಪ್ರಜಾಪ್ರಭುತ್ವವನ್ನು ರಕ್ಷಿಸುವುದು ಸಾಧ್ಯ'' ಎಂಬ ಮಾತನ್ನಾಡಿದ್ದಾರೆ.

'ಸ್ವಾತಂತ್ರ್ಯವೆಂಬ ಹೊಸ ಮೌಲ್ಯ' ಎಂಬ ಲೇಖನದಲ್ಲಿ ''ಸ್ವಾತಂತ್ರ್ಯವೆಂಬ ಮೌಲ್ಯ ಅವಿಭಾಜ್ಯವಾದುದು. ತನಗೆ ಸ್ವಾತಂತ್ರ್ಯವಿದ್ದರೆ ಸಾಕು ಎಂಬ ಪ್ರವೃತ್ತಿ ಆತ್ಮಘಾತುಕವಾದದ್ದು. ತಾನು ಸ್ವತಂತ್ರವಾಗಿರಬೇಕಾದರೆ ಎಲ್ಲರೂ ಸ್ವತಂತ್ರರಾಗಿರುವುದು ಅಗತ್ಯ ಎಂದು ನಮ್ಮ ಅಧಿಕಾರಸ್ಥರಿಗೆ ತೋರದಿರುವುದು ಪರಮಾಶ್ಚರ್ಯ. ಆದರೆ ಅವರಿಗೂ ಸ್ವಾತಂತ್ರ್ಯವೊಂದು ಮೌಲ್ಯವಾಗಿಲ್ಲ'' ಎಂದಿದ್ದಾರೆ. 'ಸಮಾಜ ಪ್ರಜ್ಞೆ' ಎಂಬ ತಮ್ಮ ಲೇಖನದಲ್ಲಿ ಅಡಿಗರು ''ನಾನೊಬ್ಬ ಸ್ವತಂತ್ರ ಅಸ್ತಿತ್ವವುಳ್ಳ, ಸ್ವತಂತ್ರ ಬುದ್ಧಿಯುಳ್ಳ ವಿಶಿಷ್ಟ ಜೀವನ ವಿಧಾನವುಳ್ಳ ವ್ಯಕ್ತಿಯೇ ಆದರೂ ನಾನು, ಸಮಾಜ ಎಂದು ಕರೆಯುವ ಮನುಷ್ಯ ಸಮೂಹದ ಒಂದು ಗುಂಪಿಗೆ ಸೇರಿದವನು ಎಂಬ ಅರಿವಿರುವುದೇ ಸಮಾಜ ಪ್ರಜ್ಞೆ'' ಎಂದಿದ್ದಾರೆ. ಈ ಎಲ್ಲ ಮಾತುಗಳ ಜೊತೆಗೆ ಅವರ ಪ್ರತಿಯೊಂದು ಲೇಖನದಲ್ಲೂ ಇಂತಹ ಸಮಾಜ ಪ್ರಜ್ಞೆ, ಸ್ವಾತಂತ್ರ್ಯ, ಸಮಾನತೆ, ಸಂಕೀರ್ಣತೆಗಳನ್ನು ಉದ್ಧರಿಸಬಹುದು. ಈ ಮಾತುಗಳನ್ನು ಇಲ್ಲಿ ಉದ್ಧರಿಸಲು ಕಾರಣ ಅಡಿಗರು ಈ ವಿಷಯಗಳಲ್ಲಿ ಎಷ್ಟು ಚಿಂತನಶೀಲರಾಗುತ್ತಿದ್ದರು ಎಂದು ತಿಳಿಯಲು ಅಷ್ಟೆ.

ಹೀಗೆಯೇ ಸಾಮಾನ್ಯನಂತೆ ಈ ನಾನು! ಕವಿತೆಯಲ್ಲಿ ಮೂಡಿರುವ ಪ್ರತಿಮೆಗಳು ಇನ್ನೂ ಕೆಲವೆಡೆ ಮುಂದುವರೆದಿರುವುದು ಹಾಗೂ ಇಲ್ಲಿ ಪ್ರಸ್ತಾಪಿತವಾಗಿರುವ ಸಂಗತಿಗಳು ಈ ಹಿಂದೆಯೇ ಟಿಸಿಲೊಡೆದಿರುವುದನ್ನು ನಾವು ಗಮನಿಸಬಹುದು. ಉದಾಹರಣೆಗೆ ತುರ್ತು ಪರಿಸ್ಥಿತಿಯನ್ನು ಇಂದಿರಾ ಯುಗ ಹಿಂಪಡೆದ ಸಂದರ್ಭದಲ್ಲಿ ಅತ್ಯಂತ ಉತ್ಸಾಹದಿಂದ ಬರೆದ 'ಸ್ವಾತಂತ್ರ್ಯೋತ್ಸವ ೧೯೭೭' ಕವಿತೆಯಲ್ಲಿ ಈ ಕವಿತೆಯ ಆಶಯಗಳು ಮೂರ್ತರೂಪಕ್ಕೆ ಬಂದ ಸಂಗತಿಯನ್ನು ನಾವು ಕಾಣಬಹುದು.

''ತಾಳಕ್ಕೆ ಸರಿ ಹೆಜ್ಜೆ ಹೂಂಕರಿಸುತ್ತಲಿದ್ದರೂ ನಿನ್ನ ಪಿಸ್ತೂಲು'' ಎಂಬ ಮಾತು ಸ್ವಾತಂತ್ರ್ಯೋತ್ಸವ ೧೯೭೭ ಕವಿತೆಯಲ್ಲಿ ತನ್ನ ಗುರಿ ಮುಟ್ಟಿತು. ಅಲ್ಲಿ ''ಒಂದೇ ಮೈಮುರಿತಕ್ಕೆ ಹೂಂಕಾರಕ್ಕೆ ಬಂದೂಕು, ತುಪಾಕಿ, ಲಾಠಿ, ಮೀಸಾ ಜೈಲು ದಿಕ್ಪಾಲು ಚದುರಿ ಹೋದವೆ'' ಎಂಬ ಮಾತನ್ನು ಗಮನಿಸಬೇಕು. ಇಲ್ಲಿ ಕೇವಲ ಪಿಸ್ತೂಲು ಇದ್ದುದು ಅಲ್ಲಿ ಬಂದೂಕು, ತುಪಾಕಿ, ಲಾಠಿ, ಮೀಸಾ ಜೈಲು ಎಲ್ಲವೂ ಆಗಿ ಎಲ್ಲವೂ ಧ್ವಂಸಗೊಂಡು ಸೋಲುಂಡದ್ದು ವಿಶೇಷ.

ಇಲ್ಲಿ (ಸಾಮಾನ್ಯನಂತೆ ಈ ನಾನು!), ಕಂಬದೊಳಕ್ಕೆ ಸಿಕ್ಕ ಬಿದ್ದಣು ನಾನು ನರಸಿಂಹ ಕಾಯುತ್ತೇನೆ ನಾನು ಕೂಡ ಎಂಬ ಮಾತು ಅಲ್ಲಿ (ಸ್ವಾತಂತ್ರ್ಯೋತ್ಸವ ೧೯೭೭) ''ಕಂಬದಂತಿದ್ದ ಮನ ಮರವೊಡೆದು ಜನ ನರಸಿಂಹ ಗರ್ಜಿಸುತ್ತಿದ್ದಾಗ ಬಂದಿದ್ದಾನೆ'' ಎಂದಿದ್ದಾರೆ. ಅಲ್ಲಿ ಕಾಯುತ್ತಿದ್ದ ಜನನರಸಿಂಹ ಇಲ್ಲಿ ಸಂಹಾರ ಮಾಡಲು ಅವತರಿಸಿಯೇ ಬಿಟ್ಟ ಸಂಭ್ರಮವನ್ನು ಗಮನಿಸಬೇಕು.

ಇಲ್ಲಿ ಕಾದಾಡುವುದು ಪ್ರತ್ಯೇಕತೆಯ ಬೆಳಕಿನುಪ್ಪರಿಗೆ ಕಟ್ಟುತ್ತ ಕಟ್ಟುತ್ತ ಕೊನೆವರಿಗೆ ಎಂಬ ಮಾತು ಅಲ್ಲಿ ಎದೆ ಬಾಗಿ ಛತ್ತರಿ ಮಾಡಿ ಅಂತರಂಗದ ಹೊಸ್ತಿಲಲ್ಲಿ ಸಣ್ಣಗೆ ದೀಪ ಬೆಳಗುತ್ತಲೇ ಇರಲಿ ಎಂದಾಗಿದೆ.

ಸಾಮಾನ್ಯನಂತೆ ಈ ನಾನುವಿನಲ್ಲಿ ಒಡಕು ಲಾಟೀನೊಳಗೆ ಕರಕು ಬತ್ತಿಯನೆತ್ತಿ ಹೊತ್ತಿ ಉರಿವ ದೀಪದ ಕಾವು ಎಂಬ ಮಾತು ಅಲ್ಲಿ ''ಇರಲಿ ಕೊನೆವರೆಗೂ ಈ ಕರಕುಬತ್ತಿಯ ಸ್ಫುರಣ'' ಎಂದು ಎಚ್ಚರಿಕೆಯನ್ನು ಸಾರುತ್ತದೆ. ಇಲ್ಲಿ ನಿನ್ನ ಎದೆಗೂಡಲ್ಲಿ ಇಟ್ಟ ಯಂತ್ರಕ್ಕೇನು ಹೆಸರು? ಉಸರೋ ಉಸರು ಎಂದು ದಬಾಯಿಸಿದವರು. ಅಲ್ಲಿ ''ಯಾವುದೋ ಯಂತ್ರ ಎಲ್ಲಿಯೋ ಗೋಣಸುಗೆಟ್ಟು ಜೀದಿಗಳಲ್ಲಿ ಕತ್ತಲಿನ ಕರಗ'' ಎಂದಿದ್ದಾರೆ. ಹೀಗೆ ಇಲ್ಲಿ ತಮ್ಮ ಕವಿತೆಯಲ್ಲಿ ಯಾವೆಲ್ಲ ಆಶೋತ್ತರಗಳನ್ನು ಆಶಿಸಿದ್ದರೋ ಅದು ಸಾಧಿತವಾಗಿ ಧನ್ಯತೆಯನ್ನು ಅಲ್ಲಿ ಕಂಡಿದ್ದಾರೆ. ಪ್ರಜಾತಂತ್ರದ ಮೂಲತತ್ತ್ವವಾದ ವ್ಯಕ್ತಿಸ್ವಾತಂತ್ರ್ಯದ ಕಲ್ಪನೆಯನ್ನು ಅಡಿಗರು ಈ ಎರಡೂ ಕವಿತೆಗಳಲ್ಲಿ ಪ್ರತಿಪಾದಿಸಿದ ರೀತಿ ಅನನ್ಯವಾಗಿದೆ.

ಈ ಕವಿತೆಯನ್ನು ಬರೆಯುವುದರ ಜೊತೆಗೆ ಅದೇ ತಿಂಗಳು ಎಂದರೆ ೧೯೭೭ರ ಏಪ್ರಿಲ್‌ನಲ್ಲಿ ಅಡಿಗರು 'ಈ ಚಕ್ರಾಧಿಪತ್ಯಗಳಿಗೆ ಕೊನೆ' ಎಂದು ಎಂಬ ಲೇಖನವೊಂದನ್ನು ಬರೆದಿದ್ದಾರೆ. ಈ ಶೀರ್ಷಿಕೆಯಲ್ಲಿಯೇ ಅಡಿಗರು ಅನೇಕ ಅರ್ಥಗಳನ್ನು ಸ್ಫುರಿಸಿದ್ದಾರೆ. ಚಕ್ರಾಧಿಪತಿಗಳಿಗೆ ಎನ್ನಬಹುದಿತ್ತು. ಆದರೆ ಅವರು ಉದ್ದೇಶಪೂರ್ವಕವಾಗಿಯೇ ಚಕ್ರಾಧಿಪತ್ಯಗಳಿಗೆ ಎಂಬ ಪದ ಪ್ರಯೋಗಿಸಿದ್ದಾರೆ. ಅಡಿಗರ ಸಿಡಿದೇಳುವ ಬಂಡಾಯದ ಸ್ವರೂಪವೇ ಅತ್ಯಾಶ್ಚರ್ಯಕರವಾದದ್ದು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿಯೇ ತಮ್ಮೆಲ್ಲ ಕವನಗಳನ್ನು ಒಟ್ಟು ಸೇರಿಸಿ ಸಮಗ್ರ ಕಾವ್ಯ (೧೯೭೬), ತಮ್ಮೆಲ್ಲ ಲೇಖನಗಳನ್ನು ಒಟ್ಟು ಸೇರಿಸಿ ಸಮಗ್ರ ಗದ್ಯ (೧೯೭೭) ಕೃತಿಗಳನ್ನು ತಮ್ಮ ಸಾಕ್ಷಿ ಪ್ರಕಾಶನದಿಂದ ಹೊರತರುವುದರ ಮೂಲಕ ಈ ಎಮರ್ಜೆನ್ಸಿಗೆ ಗುರುತರವಾದ ಸೃಜನಶೀಲ ಸವಾಲನ್ನು ಒಡ್ಡಿದ್ದು ಕೇವಲ ಆಕಸ್ಮಿಕವಲ್ಲ. ಬದಲಿಗೆ ಹುಟ್ಟಾ ಸ್ವತಂತ್ರ ಪರಮಾಣು ದೇಹಿತನಕ್ಕೆ ಅತ್ಯುತ್ತಮ ನಿದರ್ಶನ.

''ಕಾಲಕ್ಕೆ ಹೆದರಿ ನಾನು ಈ ಕಾಲದಲ್ಲಿ ಬದುಕಿರಬಾರದಿತ್ತು ಎಂದು ಸಿನಿಕತನವಾಡುವ ಜಾಯಮಾನ ಅಡಿಗರದ್ದಾಗಿರಲಿಲ್ಲ. ಅವರಿಗೆ ಸಮಾಜದ ಸ್ವಾಸ್ಥ್ಯದ ಬಗ್ಗೆ ಅಪರೂಪದ ಕಾಳಜಿಯಿತ್ತು. ತುರ್ತು ಪರಿಸ್ಥಿತಿಯಿಂದ ನಮ್ಮ ವಾಕ್ ಸ್ವಾತಂತ್ರ್ಯ ಮೊಟಕಾಯಿತಲ್ವ?...ಆದ್ರೆ ನಾವು ಈ ಪರಿಸ್ಥಿತಿ ಇಲ್ಲಿಲ್ಲದದಿದ್ದಾಗ ಸರ್ಯಾಗಿ ಉಪಯೋಗಿಸಿಕೊಂಡಿದೀವೇನು?'' ಎಂದು ಅವರು ಕೇಳುತ್ತಿದ್ದುದನ್ನು ಎ.ಎನ್. ಪ್ರಸನ್ನ ಅವರು ತಮ್ಮ ಮಗುವಾಗಿಯೇ ಉಳಿದವರು ಲೇಖನದಲ್ಲಿ ಸ್ಮರಿಸಿಕೊಂಡಿದ್ದಾರೆ.

ಹಾಗಾಗಿಯೇ ಈ ಸಾಮಾನ್ಯತೆಯ ಬಗ್ಗೆ ಮಾತನಾಡುತ್ತಾ ಅಡಿಗರ ಬಗ್ಗೆ ಪಿ. ಲಂಕೇಶರು ಆಡಿದ ಮಾತು ನಮ್ಮನ್ನು ಸದಾ ಕಾಡುತ್ತಿರುತ್ತದೆ. ಲಂಕೇಶರು '' 'ಒಂದು ಜಗಳ ಮತ್ತು...' ಎಂಬ ಲೇಖನದಲ್ಲಿ ಸಾಮಾನ್ಯರ ಸಂಶಯ, ಅಸೂಯೆ, ಪ್ರೀತಿ, ಶಂಕೆ-ಎಲ್ಲವನ್ನೂ ಅಡಿಗರು ಅನುಭವಿಸಬಲ್ಲವರಾಗಿದ್ದರು. ಈ ಸಾಮಾನ್ಯತೆ ಕೂಡ ಅಡಿಗರನ್ನು ಅರಿಯುವುದರಲ್ಲಿ ಮುಖ್ಯ'' ಎಂಬ ಮಾತನ್ನು ಹೇಳಿದ್ದಾರೆ.

ಅಡಿಗರ ಚಿಂತನೆ ಸದಾ ಸಾತತ್ಯ ಹೊಂದಿರುತ್ತದೆ. ಸಾಮಾನ್ಯನಂತೆ ಈ ನಾನುವಿನಲ್ಲಿ ಕೂಡ ಅಹಂಕಾರದ ಸಾತತ್ಯ ಎದ್ದು ಕಾಣುತ್ತದೆ. ನಿರಂಕುಶ ಪ್ರಭುತ್ವದ ಅಪೇಕ್ಷೆಯೇ ಈ ರೀತಿಯ ಸಾತತ್ಯಕ್ಕೆ ಕಾರಣ ಎಂಬುದು ಅವರ ಖಚಿತ ನಿಲುವಾಗಿದೆ. ಹತ್ತು ಅವತಾರಗಳನ್ನು ಎತ್ತುವ ಸರ್ವಶಕ್ತನ ಸಂಚಲನ ಕ್ರಿಯೆಯನ್ನು ಅಡಿಗರು ನಮ್ಮ ಮುಂದೆ ಇಟ್ಟಿದ್ದಾರೆ. ಈ ಪದ್ಯದಲ್ಲಿ 'ದಾಡಿ ಮಸೆವ ವರಾಹ'ನ ಚಿತ್ರವಿದೆ. ಈತ ಈ ಹಿಂದೆ ''ಕತ್ತಲಿಗೆ ಹತ್ತೆ ತಲೆ? ನೂರಾರೆ? ಅದು ಅಸಂಖ್ಯ'' ಎಂದು ಗೊತ್ತಿದ್ದ ಪುರುಷೋತ್ತಮನ ಮುಂದುವರೆದ ರೂಪ (ಶ್ರೀರಾಮನವಮಿಯ ದಿವಸ; ೧೯೫೪) ಇದೇ ವರಾಹ ಸ್ವಾತಂತ್ರ್ಯೋತ್ಸವ ೧೯೭೭ ಪದ್ಯದಲ್ಲಿ ಕಂಭದಂತಿದ್ದ ಮನ ಮರವೊಡೆದು ಜನ ನರಸಿಂಹನಾಗಿ ಗರ್ಜಿಸುತ್ತಾ ಬಂದಿದ್ದಾನೆ. ಇದೇ ನರಸಿಂಹ ಇದೇ ಸಂಕಲನದ 'ಕೆಸರು ತೆಗೆಯುವುದು' ಪದ್ಯದಲ್ಲಿ ''ಕೆಸರಿನಲ್ಲುಸುರು ಕಟ್ಟಿದೆ ಸಂಸ್ಕೃತಿಯ ನಾಳ; ಶಸ್ತ್ರಕ್ರಿಯೆಗೆ ಬಂತು ತಕ್ಕ ಕಾಲ ಎನ್ನುತ್ತಾ ಪರಶುರಾಮರ ಕೊಡಲಿ ಎಲ್ಲಿ ಎಲ್ಲಿ'' ಎಂದು ಹುಡುಕಾಡಿದ್ದಾರೆ.

'ಪಟ್ಟಭದ್ರರ ಅಭದ್ರ ಸಿಂಹಾಸನದ ಮೇಲೆ' ಪದ್ಯದಲ್ಲಿ ಐದಾರು ವರುಷಗಳ ಇಂದ್ರಪಟ್ಟಕ್ಕೆ ಜನ್ಮಜನ್ಮಾಂತರದ ಪುಣ್ಯಲವಲೇಶದೇಕತ್ರ ಆಹುತಿ, ಹುತಿಗೆ ದಧೀಚಿ, ಶಚಿ, ದಿಲೀಪ, ಜೀಮೂತವಾಹನರೆ ಮುಂತಾದ ಬಲಿಪಶುಗಳಿಗೆ ಕೊರತೆಯೇ ಇಲ್ಲ ಎನ್ನುವ ಅಡಿಗರು ಹಳೆಯ ದೇವರುಗಳೆಲ್ಲ ಸತ್ತು ಪದ್ಯದಲ್ಲಿ ನಂಜ ಕೊರಳಲ್ಲಿಟ್ಟುಕೊಂಡು ಒಳಗಡೆ ಅಮೃತಕುಂಭ ಹೊತ್ತಂಥ ಹೊರಬಲ್ಲಂಥ ವಿಷಕಂಠ ಸಂತಾನವೆಲ್ಲಿ? ಎಂದು ಹುಡುಕುತ್ತಾ ಕಾಯುತ್ತಿದ್ದೇವೆ ಕೊನೆಯಂಕ ಪರದೆ ಬೀಳುವುದನ್ನು ಕಾಯುವಂತೆಯೇ ನಾವು ಎಂದಿದ್ದಾರೆ.

'ನಿನ್ನ ಗದ್ದೆಗೆ ನೀರು' ಕವಿತೆಯಲ್ಲಿ ''ತಾಳ ಲಯಕ್ಕೆ ಸರಿ ಲಾಗ ಹಾಕುವುದೇ ಲಾಗಾಯ್ತಿನ ಹಿರಿಮೆ'' ಎಂದ ಅಡಿಗರು ಈ ಜನರ ಮನಃಸ್ಥಿತಿಯನ್ನು ಕುರಿತು 'ದೆಹಲಿಯಲ್ಲಿ' (೧೯೭೨) ಎಂಬ ಪದ್ಯದಲ್ಲಿ ''ದಫ್ತರಿನಲ್ಲಿ ಕಾಫಿ, ಟೀ ಸರಸ ಸಲ್ಲಾಪ ಕೆಲಸದ ನಡುವೆ ಕಂಬ ಸುತ್ತುತ್ತವೆ ಕೆಲವು; ಏಣಿಯನ್ನಿಟ್ಟು ಕಾಣದುಪ್ಪರಿಗೆ ಕಡೆ ಏರುತ್ತಲೇ ಇರುವ ಖದೀಮ ಕುಳ ಹಲವಾರು'' ಎಂದಿದ್ದಾರೆ. ಈ ಎರಡೂ ಚಿತ್ರಗಳು ಸಾಮಾನ್ಯನಂತೆ ಈ ನಾನು ಪದ್ಯದಲ್ಲಿ ಬೆಳೆದು ತಾಳಕ್ಕೆ ಸರಿ ಹೆಜ್ಜೆ ಹಾಕು ಎಂದು ಹೂಂಕರಿಸುತ್ತಲಿದ್ದರೂ ಮನಸ್ಸಿನಲ್ಲಿಯೇ ದೃಢವಾಗಿ ಬೇರೆ ತಾಳ ಲಯ ನಿಭಾಯಿಸುವ ಹುಟ್ಟಾ ಸ್ವತಂತ್ರ ಪರಮಾಣು ದೇಹಿಯಾಗಿ ಬೆಳೆದಿರುವ ಪರಿ ಆಶ್ಚರ್ಯ ಹುಟ್ಟಿಸುತ್ತದೆ.

ಹೀಗೆ ಅಡಿಗರು ತಮ್ಮ ಒಟ್ಟು ಕಾವ್ಯದ ಮೂಲಕ ನಿರಂತರವಾಗಿ ಸಂಚರಿಸಿ ಪ್ರತಿಯೊಂದು ಧಾತುವನ್ನು ಇನ್ನೊಂದು ಮಾತಿನ ಮೂಲಕ ಸಂಲಗ್ನಗೊಳಿಸಿ, ಸಮಕಾಲೀನಗೊಳಿಸಿ ಕಲಾಕೃತಿಯಾಗಿಸಿದ್ದಾರೆ. ಬಿಡಿಬಿಡಿಯಾಗಿ ಹೊಳೆಯುವ ಇಂತಹ ವಿಚಾರ ಪುಷ್ಪಗಳನ್ನು ಒಂದು ಸೂತ್ರದಲ್ಲಿ ಬೆಸೆಯುವ ಹಾರಗಳನ್ನಾಗಿ ಮಾಡಿಕೊಂಡಾಗ ಅದು ಸಮಗ್ರ ಸಂವೇದನೆಯಾಗುತ್ತದೆ.

೩೩೩೬, ೩ನೇ ಅಡ್ಡರಸ್ತೆ, ೭ನೇ ಮುಖ್ಯರಸ್ತೆ
ಹಂಪಿನಗರ, ವಿಜಯನಗರ ೨ನೇ ಹಂತ
ಬೆಂಗಳೂರು-೫೬೦೧೦೪
ಮೊಬೈಲ್: ೯೫೩೫೭೬೨೪೬೪

ಕನ್ನಡ ಸಾಹಿತ್ಯದಲ್ಲಿ ದೇಶೀಯ ಪ್ರಜ್ಞೆ

■ ಎಸ್.ಆರ್. ವಿಜಯಶಂಕರ

ಆಧುನಿಕ ಪೂರ್ವ ಕನ್ನಡದಲ್ಲಿ ದೇಶೀಯ ಪ್ರಜ್ಞೆ ಎಂಬ ವಿಚಾರದ ಕುರಿತು ಮಾತನಾಡುವಾಗ ದೇಶೀಯ ಪ್ರಜ್ಞೆ ಎಂದರೇನು? ಹಾಗೂ ಅದರ ಬದಲಾದ ನೆಲೆಗಳೇನು? ಎಂಬುದರ ಕುರಿತು ಸ್ಪಷ್ಟತೆ ಇರಬೇಕು. ಹಾಗೆಯೇ, ಆಧುನಿಕ ಪೂರ್ವ ಎಂದರೆ ಯಾವ ಕಾಲ ಎಂಬುದನ್ನು ಗುರುತಿಸಬೇಕು. ಈ ಪ್ರಬಂಧದ ವ್ಯಾಪ್ತಿಯೊಳಗೆ ಹಳೆಗನ್ನಡದಲ್ಲಿ ಬೆಳೆದ ದೇಸಿ ಕಲ್ಪನೆಗಳೊಡನೆ ಹೊಸಗನ್ನಡದ ಹೊಸ್ತಿಲಲ್ಲಿ ಮುಖ್ಯವಾಗಿ ನವೋದಯ ಸಂದರ್ಭದಲ್ಲಿ ಉಂಟಾದ ಪ್ರಾತಿನಿಧಿಕ ಬದಲಾವಣೆಗಳನ್ನು ಗುರುತಿಸಬಹುದು.

ದೇಶೀಯ ಪ್ರಜ್ಞೆ ಕುರಿತು ಚರ್ಚಿಸುವ ಮೊದಲು ನಮ್ಮಲ್ಲಿ ದೇಸಿ ಹಾಗೂ ಮಾರ್ಗ ಕಲ್ಪನೆಗಳು ಬೆಳೆದು ಬಂದ ಕ್ರಮವನ್ನು ಸ್ಥೂಲವಾಗಿ ಗುರುತಿಸಬೇಕು. ಹತ್ತನೇ ಶತಮಾನದ ಪಂಪ, ಬಗೆ ಪೊಸದಪ್ಪುದಾಗಿ ಮೃದು ಬಂಧದೊಳೊಂದುವದೊಂದಿ ದೇಸಿಯೊಳ್ ಪುಗುವುದು, ಮಾರ್ಗದೊಳೆ ತಳ್ವುದು, ತಳ್ತೊಡೆ ಕಾವ್ಯಪೊಪ್ಪುಗುಂ ಎಂದು ಹೇಳಿದ. ಒಂದು ಕಾಲದಲ್ಲಿ ಮಾರ್ಗಕಲ್ಪನೆಯು ಓಂದೆ ಸಂಸ್ಕೃತದ ಅಭಿಜಾತ ಕಾವ್ಯ ಪರಂಪರೆ ಇತ್ತು. ರನ್ನನಿಗೆ ಕಾಳಿದಾಸನನ್ನು ಮೀರಿಸುವಂತೆ ಸಮಾಸಗಳನ್ನು ಬಳಸಬೇಕು ಎಂಬುದೂ ಒಂದು ಗುರಿ. ಪಂಪನ ಕಾಲಕ್ಕಾಗಲೆ ಕಾಲಿದಾಸ, ಬಾಣಭಟ್ಟ, ದಂಡಿ ಇದ್ದರು.

ಜೈನರಿಗೆ ಒಂದು ರೀತಿಯಲ್ಲಿ ಆಗಮ ಕಾವ್ಯಗಳಲ್ಲಿ ಮಾರ್ಗ ಇದ್ದಿತು ಎಂಬುದೂ ಒಂದು ಅಭಿಪ್ರಾಯ. ಆದ್ದರಿಂದ ದೇಸಿ ಯಾವುದು? ಲೌಕಿಕವೆ? ತಮಗೆ ದೇಸಿ ಯಾವುದು ಎಂಬುದನ್ನು ಆಯಾ ಕಾಲದ ಕವಿಗಳೇ ನಿರ್ಣಯಿಸಬೇಕಾಗಿತ್ತು. ಆದುದರಿಂದಲೆ, ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯ ನೀಸುವೆನ್ ಎಂದು ಹೇಳುವುದು ಪಂಪನಿಗೆ ಅನಿವಾರ್ಯವಾಯಿತು.

ದೇಸಿಯಲ್ಲಿ ಹೋಗಬೇಕು ಎನ್ನುವಾಗ ಪಂಪ ಕೊಡುವ ಹೋಲಿಕೆ ಮಾವಿನ ಮರ ಕೋಗಿಲೆಗಳದ್ದು. ಆದರೆ ಅದು ಸಂಸ್ಕೃತ ಕಾವ್ಯದ ಮಾವಿನ ಮರವಲ್ಲ. ಡಾ.ಎಲ್. ಬಸವರಾಜು ಅವರ ಹೊಸಗನ್ನಡ ಅನುವಾದದಲ್ಲಿ ಹೇಳುವುದಿದ್ದರೆ ಕೆಂದಳಿರಿಂದ ದಪ್ಪ ಹೂಗೊಂಚಲಿಂದ ಜಗ್ಗಿ ತುಂಬಿಗಳಿಂದ ತುಂಬಿ, ಕೋಗಿಲೆ ಕೂಗಿದರೆ ಸುಗ್ಗಿಯಲ್ಲಿ ಎಳೆಯ ಮಾವಿನ ಮರ ಶೋಭಿಸುವಂತೆ ಇರುವ ಕಾವ್ಯಬಂಧವದು.

ಇಲ್ಲಿಯೆ ನಾವು ವಸ್ತುಕ ಹಾಗೂ ವರ್ಣಕಗಳ ವೈಶಾಲ್ಯವನ್ನು ನೆನಪಿಸಿಕೊಳ್ಳಬೇಕು. ಪಂಪನ ಕತೆಯಲ್ಲಿ ವರ್ಣಕದ ಪ್ರಾಮುಖ್ಯತೆಯನ್ನು ಸಾರುತ್ತಾನೆ. ವರ್ಣಕ ಎಂದರೆ ಇಲ್ಲಿ ಹೇಳುವ ರೀತಿ. ಪ್ರದೇಶದ ಸಂಸ್ಕೃತಿ ಹೇಳುವ ರೀತಿಯಲ್ಲೂ ಸೇರಿಕೊಂಡಿರುತ್ತದೆ. ಅದು ಕೇವಲ ಶೈಲಿಯಲ್ಲ. ದೇಸಿಯ ಸೃಷ್ಟಿಶೀಲ ಪ್ರತಿಭೆ ವರ್ಣಕದಲ್ಲಿ ಅಡಗಿರುತ್ತದೆ. ಆದ್ದರಿಂದಲೆ ವಸ್ತುಕ ಮಾರ್ಗದ ಕ್ರಮವಾದರೆ ವರ್ಣಕ ದೇಸಿಯ ಹೆಜ್ಜೆ. ಕವಿಯೊಬ್ಬನ ಮೇಲೆ ಅಭಿಜಾತ ಮಾರ್ಗದ ಒತ್ತಡ ಒಳಗಿನಿಂದ ಇದ್ದೇ ಇರುತ್ತದೆ. ಇಲ್ಲವಾದರೆ ಕಾಲಿದಾಸನ ಇಂದುಮತಿಯ ಸ್ವಯಂವರ ನೆನಪಾಗುವಂತೆ ಪಂಪನ ದ್ರೌಪದಿಯ ಸ್ವಯಂವರ ವರ್ಣನೆ ಯಾಕೆ ಇರಬೇಕು? ಬಹುಶಃ ಅದೂ ಕೂಡಾ ಪ್ರೊ. ಕೀರ್ತಿನಾಥ ಕುರ್ತಕೋಟಿಯವರು ಗುರುತಿಸಿರುವಂತೆ ಕನ್ನಡವನ್ನು ದೇಸಿಯನ್ನು ಹದಗೊಳಿಸಿಕೊಳ್ಳುವ ಕ್ರಮ.

ಮಾರ್ಗ-ದೇಸಿ ಅಥವಾ ವಸ್ತುಕ-ವರ್ಣಕ ಈ ಪದಗಳು ಪಾರಿಭಾಷಿಕ ಪದಗಳು. ಒಂದು ಕಾಲಕ್ಕೆ ಅವುಗಳಿಗೆ ಸ್ಪಷ್ಟವಾದ ಅರ್ಥ ನಿರ್ದೇಶನ ಇತ್ತು. ಆದರೆ ಕಾಲಕ್ರಮೇಣ ಕಾಲ, ದೇಶ, ಸಂದರ್ಭಗಳು ಬದಲಾಗುತ್ತಾ ಹೋದಂತೆ ಅವುಗಳ ಅರ್ಥದಲ್ಲೂ ವ್ಯತ್ಯಾಸಗಳಾಗುವುದು ಸಹಜವಾಗಿದೆ. ಮಾರ್ಗದ ವ್ಯಾಖ್ಯೆಯೂ ಬದಲಾಗಿದೆ. ದೇಸಿಯ ಕಲ್ಪನೆಯೂ ಬೇರೆಯಾಗಿದೆ.

ಪಂಪ ಹತ್ತನೆ ಶತಮಾನದವ. ಇಂದು ನಾವು ೨೧ನೇ ಶತಮಾನದಲ್ಲಿ ಕುಳಿತು ದೇಸಿ ಕಲ್ಪನೆಯನ್ನು ಅರ್ಥೈಸಿಕೊಳ್ಳುವ ಮೊದಲು ಮಾರ್ಗ-ದೇಸಿಗಳ ಪರಿಕಲ್ಪನೆಗಳು ಬದಲಾಗುತ್ತಾ ಬಂದುದನ್ನು ಗುರುತಿಸಬೇಕು. ಕುಮಾರವ್ಯಾಸನ ಕಾಲಕ್ಕೆ ಅಂದರೆ ಪಂಪನ ಮುಂದಿನ ಐನೂರು ವರುಷಗಳಲ್ಲಿ ಪಂಡಿತರ ಪ್ರೀತಿಯ ಪಂಪನ ಕ್ರಮವೇ ಕನ್ನಡ ಮಾರ್ಗ ರೂಪದಲ್ಲಿ ಕುಮಾರವ್ಯಾಸನ ಮುಂದಿತ್ತು. ಆ ಮಾರ್ಗ ಕಾವ್ಯದ ಜೊತೆ ಕುಮಾರವ್ಯಾಸನಿಗೆ ವಚನಕಾರರು ತೋರಿದ ಹೊಸ ದೇಸಿ ಕ್ರಮದ ಪರಿಚಯವೂ ಇತ್ತು. ಭಕ್ತಿಯ ದಾರಿಯೊಂದು ನಿರ್ಮಾಣವಾಗಿತ್ತು. ಈ ಹಿನ್ನೆಲೆಯಲ್ಲಿ ಕುಮಾರವ್ಯಾಸನು ಹೇಳಿದ 'ತಿಳಿಯ ಹೇಳುವೆ ಕೃಷ್ಣ ಕತೆಯನು' ಎಂಬ ಮಾತುಗಳನ್ನು ಅರ್ಥ ಮಾಡಿಕೊಳ್ಳಬೇಕು. ಕೃಷ್ಣ ಪಂಪನಲ್ಲಿ ಚುಟುಕು. ಕುಮಾರವ್ಯಾಸ, ಮಹಾಭಾರತವನ್ನು ಕೃಷ್ಣ ಕತೆಯಾಗಿಸುವ ಮೂಲಕ ಜೈನರ ಮೂಲಕ ಬೆಳೆದ ಕನ್ನಡದ್ದೇ ಆದ ಮಾರ್ಗವೊಂದನ್ನು ತಿರಸ್ಕರಿಸುತ್ತಾನೆ.

ಪಂಪನಿಂದ ಬೆಳೆದ ಕನ್ನಡ ಮಾರ್ಗ ಕ್ರಮ ಒಂದಿದೆ ಎಂಬುದು ಸೂಕ್ಷ್ಮವಾಗಿ ನಾವು

ಗುರುತಿಸಬಹುದಾದ ವಿಚಾರ. ಹಾಗೆ ಬೆಳೆಯುತ್ತಾ ಬಂದ ಕನ್ನಡ ಮಾರ್ಗವೊಂದರ ಎದುರಾಗಿ ತನ್ನದೇ ಕ್ರಮವನ್ನು ಕುಮಾರವ್ಯಾಸ ಛಾಪಿಸುತ್ತಾನೆ. ಆದ್ದರಿಂದಲೆ ಪೀಠಿಕಾ ಸಂಧಿಯಲ್ಲಿ ಕುಮಾರವ್ಯಾಸನಿಗೆ ತನ್ನ ನಿಲುವನ್ನು ಸಮರ್ಥಿಸುವ ಅಗತ್ಯವಿದೆ. 'ಪದದ ಪ್ರೌಢಿಯ ನವರಸಂಗಳ/ ವುದಿತವೆನುವಭಿಧಾನಭಾವದ ಬೆದಕಲಾಗದು' ಎನ್ನುತ್ತಾನೆ.

ಪದ ಪ್ರೌಢಿಯ ಒಂದು ಮಾರ್ಗ ಇದೆ. ಪಂಪನಲ್ಲಂತೂ ಪದಗಳು ತಕ್ಕಡಿಯಲ್ಲಿ ತೂಗಿ ನೀಡುವಂತೆ ಹಿಡಿತ. ತೆಗಲೆ ಹಾಗೂ ಎದೆ ಶಬ್ದಗಳಿಗೆ ಪಂಪನ ಸಂದರ್ಭದಲ್ಲಾಗುವ ಸೂಕ್ಷ್ಮ ವ್ಯತ್ಯಾಸವನ್ನು ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ತಮ್ಮ ನಾಡೋಜ ಪಂಪ ಎಂಬ ಕೃತಿಯಲ್ಲಿ ಗುರುತಿಸುವುದನ್ನು ನಾವು ನೆನಪಿಸಿಕೊಳ್ಳಬಹುದು. ಕುಮಾರವ್ಯಾಸನಿಗಾದರೊ ಪದಗಳ ಸಮೃದ್ಧಿ. ಕುಮಾರವ್ಯಾಸನ ವಿವರಿಸುವ ಉತ್ಸಾಹಕ್ಕೆ ಎಷ್ಟು ಶಬ್ದಗಳಿದ್ದರೂ ಸಾಕಾಗುವುದಿಲ್ಲ, ಹಾಗಾಗಿ ಆತ ತನ್ನದೇ ಆದ ದೇಸಿಯನ್ನು ಸೃಷ್ಟಿಸಿಕೊಳ್ಳುತ್ತಾನೆ. ·ಯಾದವರು ನಮಗೆ ಹಗೆಯಾದವರು ಮೊದಲಾದ ಸಾಮಾನ್ಯವೆಂಬಂತೆ ತೋರುವ ಆದರೆ ಪರಿಣಾಮಕಾರಿಯಾದ ಶಬ್ದಾಲಂಕಾರ ಕುಮಾರವ್ಯಾಸನಲ್ಲಿದೆ.

ನವರಸಂಗಳ ಬೆದಕಲಾಗದು ಎಂಬ ಮಾತು ಸ್ಪಷ್ಟವಾಗಿ ಸಂಸ್ಕೃತ ಕಾವ್ಯಮೀಮಾಂಸೆಯ ಮಾರ್ಗವನ್ನು ಸೂಚಿಸುತ್ತದೆ ನಿಜ. ಆದರೆ ಸಂಸ್ಕೃತ ಅನುಕರಣೆಯಲ್ಲಿ ಬೆಳೆದ ಅಂತಹ ಒಂದು ಕನ್ನಡ ಮಾರ್ಗವೂ ಪಂಪನ ಕಾಲದಿಂದ ಬೆಳೆಯುತ್ತಾ ಬಂದಿತ್ತು ಎಂಬುದನ್ನು ಮರೆಯಲಾಗದು. ಆದುದರಿಂದಲೆ ಅದು ಸರಳ ಬರಿಯ ತುಳಸಿಯ ನೀರಿನ ಹಾಗಿದೆ. ತೀರ್ಥದಲ್ಲೂ ಎರಡು ವಿಧ. ಪಂಚಾಮೃತ ಒಂದು ವಿಧಾನ. ಅಲ್ಲಿ ಹಾಲು, ಜೇನು, ಸಕ್ಕರೆ, ತುಪ್ಪ, ಮೊಸರುಗಳು ಸೇರಿದ ತೀರ್ಥ. ಅದು ಮಾರ್ಗ. ನೀರಿಗೆ ಒಂದು ತುಲಸಿ ಎಲೆ ಹಾಕಿಯೂ ತೀರ್ಥವಾಗಬಹುದು. ತುಲಸಿ ಎಲೆ ಅದ್ದಿದ ನೀರಿನ ತೀರ್ಥ-ದೇಸಿ. ಅಲ್ಲಿ ಪದುಮನಾಭನ ಮಹಿಮೆ ಇದೆ. ಇದು ಕ್ರಮದ ಎದುರಿನ ವಿಕ್ರಮದ ಕತೆಯಲ್ಲ. ಕುಮಾರವ್ಯಾಸ ವರ್ಣಿಸುವುದು ಮಹಿಮೆಯನ್ನು. ಎರಡೂ ವರ್ಣಕಗಳೇ. ಒಂದು ವಿಕ್ರಮವನ್ನು ಸಾರಿದರೆ ಮತ್ತೊಂದು ಮಹಿಮೆಯನ್ನು ಕೊಂಡಾಡುತ್ತದೆ.

ಅಂದರೆ ಕುಮಾರವ್ಯಾಸನ ಕಾಲಕ್ಕಾಗಲೆ ಮಾರ್ಗ ದೇಸಿಗಳು ತಮ್ಮದೇ ಆದ ರೀತಿಯ ಅರ್ಥವ್ಯಾಪ್ತಿಗಳನ್ನು ಪಡೆದಿದ್ದವು ಎಂಬುದನ್ನು ನಾವು ಊಹಿಸಬಹುದು. ಕಾವ್ಯಕೆ ಗುರುವೆನಲು ರಚಿಸಿದ ಕುಮಾರವ್ಯಾಸನಲ್ಲಿ ವೀರ, ವೇದದ ಸಾರ, ತತ್ತ್ವ ವಿಚಾರ, ಬುದ್ಧಿಗುಣ, ಶೃಂಗಾರ ಎಲ್ಲವೂ ಅಡಕವಾಗಿದೆ. ಆದರೆ ಅವೆಲ್ಲವೂ ಪಂಚಾಮೃತದ ಅಲಂಕಾರ ರುಚಿಗಳಲ್ಲ, ತುಳಸಿ ನೀರಿನ ಪಾವಿತ್ರ್ಯದ ರುಚಿ ತಿಳಿಯಲು ಮಹಿಮೆಯ ಕಾರುಣ್ಯವನ್ನು ಅರಿಯಬೇಕು. ಮಾರ್ಗ-ದೇಸಿಗಳು ಹೊಸ ರೂಪಾಂತರ ಹೊಂದುತ್ತವೆ.

ಆಧುನಿಕ ಪೂರ್ವದಲ್ಲಿ ದೇಸಿ ಹಾಗೂ ಮಾರ್ಗಗಳ ಕಲ್ಪನೆಯನ್ನು ತಿಳಿಯಲು ಬಹುಶಃ ಆನಂದಕುಮಾರಸ್ವಾಮಿ, ಮಾರ್ಗ ಹಾಗೂ ದೇಸಿ ಪರಿಕಲ್ಪನೆಗಳನ್ನು ಕಲೆಯ ಸಂದರ್ಭದಲ್ಲಿ ವಿವರಿಸಿರುವುದನ್ನು ನೆನಪಿಸಿಕೊಳ್ಳಬಹುದು. ವೇದಕಾಲದಲ್ಲಿ ಕಲೆಗಳನ್ನು ಸ್ವರ್ಗ್ಯ ಮತ್ತು ಅಸ್ವರ್ಗ್ಯ ಎಂದು ಗುರುತಿಸುತ್ತಿದ್ದ ಕ್ರಮಗಳನ್ನು ಭಾರತದ ನವೋದಯದ ಮುಖ್ಯ ಚಿಂತಕರಲ್ಲಿ ಒಬ್ಬರಾಗಿದ್ದ ಆನಂದಕುಮಾರಸ್ವಾಮಿ ತಮ್ಮ ಪ್ರಬಂಧವೊಂದರಲ್ಲಿ ನೆನಪಿಸಿಕೊಳ್ಳುತ್ತಾರೆ.

ಧಾರ್ಮಿಕವಾದ ಕಾವ್ಯ ಮಾರ್ಗ. ಅದಕ್ಕೆ ಎದುರಾಗಿ ಜನರಂಜನೆಯ ಕಾವ್ಯ ದೇಸಿ. ಅಡಗಿದ

ಬೆಳಕನ್ನು ಹುಡುಕುವ ಕಲೆ. ದೇಶ್ಯ ಎಂಬುದು ಈ ಜಗತ್ತಿನ ಸುಖ ದುಃಖಗಳಿಗೆ ಸಂಬಂಧಿಸಿದ್ದು. ಮಾರ್ಗಕ್ಕೆ ಜನರಂಜನೆಯ ಅಗತ್ಯವಿಲ್ಲ. ಹಾಗಾಗಿ ಸೀಮಿತ ಅರ್ಥದಲ್ಲಿ ಸೌಂದರ್ಯ ಅದರ ಉದ್ದೇಶವಲ್ಲ. ದೇಸಿಗೆ ಜೀವನ ಬೇಕು. ಸೌಂದರ್ಯ ಇರಬೇಕು. ಧಾರ್ಮಿಕವಾಗಿಯೂ ಬೆಳೆದುಬಂದ ಭಾರತೀಯ ಕಲೆ ಕಾವ್ಯಗಳ ಸಂದರ್ಭದಲ್ಲೂ ಕಲೆಯ ಸಂಪೂರ್ಣತೆಗೆ ಇವೆರಡೂ ಒಂದಾಗಬೇಕು ಎಂಬುದನ್ನು ಕೀರ್ತಿನಾಥ ಕುರ್ತಕೋಟಿಯವರು ಅನೇಕ ಉದಾಹರಣೆಗಳಿಂದ ಸುಂದರವಾಗಿ ನಿರೂಪಿಸಿದ್ದಾರೆ. ಅಂತಹ ಸಂಪೂರ್ಣತೆಯನ್ನು ಪಡೆಯುವುದು ಎಲ್ಲಾ ಶ್ರೇಷ್ಠ ಬರಹಗಾರರ ಆಶಯವೂ ಆಗಿದೆ.

ಈ ಹಿನ್ನೆಲೆಯಲ್ಲಿ ನಾವು ದೇಶೀವಾದ ಹಾಗೂ ದೇಶೀ ಪ್ರಜ್ಞೆಗಳ ಆಧುನಿಕ ಅರ್ಥದ ಬೆಳವಣಿಗೆ ಹಾಗೂ ಬದಲಾವಣೆಗಳನ್ನು ಗಮನಿಸಬೇಕು. ಡಾ। ರಾಜೇಂದ್ರ ಚೆನ್ನಿ ಮೊದಲಾದ ವಿಮರ್ಶಕರು ದೇಶೀವಾದ ಎಂಬುದನ್ನು ಇಂಗ್ಲೀಷಿನ ನೇಟಿವಿಸಂ ಎಂಬ ಕಲ್ಪನೆಗೆ ಸಂವಾದಿಯಾಗಿ ಬಳಸುತ್ತಾರೆ. (ನೋಡಿ: ದೇಶೀವಾದ- ಡಾ। ರಾಜೇಂದ್ರ ಚೆನ್ನಿ, ಸಾಹಿತ್ಯ ಅಕಾಡೆಮಿ ಪ್ರಕಟಣೆ) ಇದು ಪಂಪನಿಂದ ಬೆಳೆದು ಬಂದ ದೇಸಿ ಮತ್ತು ದೇಶೀ ಹುಟ್ಟಿದ್ದು ದೇಶ್ಯ ಎಂಬ ಪದದಿಂದ. ಅಲ್ಲಿ ಪ್ರಾದೇಶಿಕತೆ ಇಲ್ಲ.

ಭಾಷೆಯ ಬಳಕೆ ಹಾಗೂ ಹೇಳುವ ಕ್ರಮಗಳ ಹಿನ್ನೆಲೆಯಲ್ಲಿ ದೇಸಿ ಚರ್ಚೆಯಾಗುತ್ತಿತ್ತು. ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಪಂಪನ ದೇಸಿ ಬಗ್ಗೆ ಹೇಳುವಾಗ, ನುಡಿಗಳ ದೇಸಿ, ನುಡಿಗಟ್ಟಿನ ದೇಸಿಯ ಸ್ವಭಾವ, ಗಾದೆಯ ದೇಸಿ, ಛಂದಸ್ಸಿನ ದೇಸಿ ಅಥವಾ ದೇಸಿ ಪಾಡು ಮೊದಲಾದ ವಿಭಾಗಗಳನ್ನು ಮಾಡುವುದನ್ನು ನಾವು ನೆನಪಿಸಿಕೊಳ್ಳಬಹುದು. ಆಧುನಿಕರಾದ ಓ.ಎಲ್. ನಾಗಭೂಷಣಸ್ವಾಮಿಯವರು ದೇಸಿ, ದೇಸಿಯತೆ ಎಂಬುದು ಕೇವಲ ಸಾಹಿತ್ಯಕ್ಕೆ ಸಂಬಂಧಿಸಿದ ಮಾತುಗಳು ಎಂದು ತಿಳಿದಿಲ್ಲ. ದೇಸಿ ಎಂಬುದು ಮನೋಧರ್ಮಕ್ಕೆ, ಬದುಕನ್ನು ಅರಿಯುವ ರೀತಿಗೆ ಸಂಬಂಧಪಟ್ಟ ರೀತಿ ಎಂದು ಅವರು ತಿಳಿಯುತ್ತಾರೆ. (ನೋಡಿ: ಓ.ಎಲ್. ಎನ್. ಲೇಖನ ದೇಸಿಯತೆಯ ಪ್ರಶ್ನೆ, ಸುವರ್ಣ ಸಾಹಿತ್ಯ ವಿಮರ್ಶೆ ಸಂಗ್ರಹ, ಸಂಪಾದಕರು: ಎಚ್. ದಂಡಪ್ಪ ಹಾಗೂ ಬಿ.ಎನ್. ಸುಮಿತ್ರಾಬಾಯಿ) ಕವಿರಾಜಮಾರ್ಗಕಾರ ದೇಸಿ ಎಂಬುದನ್ನು ಶಿಷ್ಟಭಾಷೆಯಿಂದ ಬೇರೆಯಾದ ಉಪಭಾಷೆಯ ಪ್ರಕಾರ ಎಂದು ಗುರುತಿಸಿದ ಕಾಲದಿಂದ ಇಂದಿನವರೆಗೆ ದೇಸಿಯ ಪರಿಕಲ್ಪನೆ ಹಾಗೂ ಅದರ ಪಾರಿಭಾಷಿಕ ಅರ್ಥ ಸ್ವರೂಪ ಬದಲಾಗುತ್ತಾ ಹೋದುದನ್ನು ನಾವು ಗಮನಿಸಬಹುದಾಗಿದೆ.

ಓ.ಎಲ್. ನಾಗಭೂಷಣಸ್ವಾಮಿಯವರು ದೇಸಿ ಎಂಬುದು ಮನೋಧರ್ಮ ಎಂದಾಗ ಇಂದು ಜನಪದ ಪ್ರಜ್ಞೆ ಹಾಗೂ ದೇಸಿಪ್ರಜ್ಞೆ ಇವುಗಳ ನಡುವೆ ಮಾಡಬೇಕಾದ ವ್ಯತ್ಯಾಸ ಇನ್ನಷ್ಟು ಸಂಕೀರ್ಣವಾಗುತ್ತದೆ. ಜಾನಪದ ಸಾಹಿತ್ಯ ಕೂಡಾ ಒಂದು ಮನೋಧರ್ಮವೇ ಆಗಿದೆ. ಅಲ್ಲಿ ವಸ್ತುವಿನ ಹಂಗು ಇಲ್ಲ. ವರ್ಣಕವು ಮಾರ್ಗದ ಮೇರೆಯನ್ನು ಅರಿಯಬೇಕಾದ ಒತ್ತಡವಿಲ್ಲ. ಮಾರ್ಗದ ಹಂಗೇ ಇಲ್ಲದ ಆಳ ವಿಸ್ತಾರಗಳು ಜಾನಪದ ಕಾವ್ಯಕ್ಕಿದ್ದರೆ ದೇಸಿ ಪ್ರಜ್ಞೆ ಸಾಹಿತ್ಯದಲ್ಲಿ ಅಭಿವ್ಯಕ್ತಿಗೆ ಸಂಬಂಧಿಸಿದ ಮೇರೆ ಹಾಗೂ ತಾತ್ತ್ವಿಕತೆಗಳ ಒಳಗೇ ಕೆಲಸ ಮಾಡುತ್ತದೆ.

ಆದರೆ ಇಂದಿನ ಸಾಹಿತ್ಯ ದೃಷ್ಟಿಯಿಂದ ದೇಸಿ ಪರಿಕಲ್ಪನೆಯನ್ನು ಪರೀಕ್ಷಿಸುವಾಗ ಮಾರ್ಗವು ವರ್ತಮಾನವಾಗುವ ರೀತಿ ಆಧುನಿಕ ದೇಸಿ ಎಂದು ನಾವು ಹೇಳಬಹುದು. ಸಾಮಂತರಾಜ

ಅರಿಕೇಸರಿಯ ಚರಿತ್ರೆಯನ್ನು ಪಂಪ ತಗಳ್ಚಿ ಹೇಳುತ್ತಾನೆ. ಹೀಗೆ ತಗಳ್ಚಿ ಹೇಳುವ ಪಂಪನ ಕ್ರಮ ತಗಲಿಸಿ ಹೇಳುವ ಸಮಾಸ ಸೌಂದರ್ಯಕ್ಕೆ ಸಮನಾದ್ದು ಎಂಬುದು ಸಾಹಿತ್ಯ ದೃಷ್ಟಿಯಿಂದ ನೋಡುವ ಕ್ರಮ. ಹೀಗೆ ತಗಲಿಸಿ ಹೇಳುವುದರಿಂದಲೆ ಪಂಪನಿಗೆ ಕಾವ್ಯವನ್ನು ವರ್ತಮಾನಕ್ಕೆ ತರಲು ಸಾಧ್ಯವಾಗುತ್ತದೆ. ಹೀಗೆ ಪುರಾಣ ಕತೆಯನ್ನು ಪ್ರಸ್ತುತಗೊಳಿಸಲು ಮಾಡುವ ವರ್ಣಕದ ಪ್ರಯತ್ನಗಳಲ್ಲಿ ನಾವು ಬದಲಾಗುತ್ತಾ ಬಂದ ಪರಿಭಾಷೆಯಲ್ಲಿ ಉಳಿದುಕೊಂಡಿರುವ ಮೂಲ ಸತ್ತ್ವವನ್ನು ಅರಸಬೇಕಾಗಿದೆ. ಅಂತಹ ಮೂಲ ಸತ್ತ್ವ ಇಪ್ಪತ್ತೊಂದನೇ ಶತಮಾನಕ್ಕೂ ಪಂಪನ ಹತ್ತನೇ ಶತಮಾನಕ್ಕೂ ಪರಸ್ಪರ ನಂಟು ಬಿಗಿಯುವ ಸಾಧ್ಯತೆಯಾಗಿದೆ. ಹಾಗೆಯೇ ಅದು ಆಧುನಿಕ ಪೂರ್ವ ಕನ್ನಡ ತನ್ನ ಹಿಂದಿನ ಕಾವ್ಯಗಳಿಂದ ಶಕ್ತಿ ಸಂಚಯನ ಮಾಡಿಕೊಳ್ಳಲೂ ಕಾರಣವಾಗಿದೆ. ಅಂತಹ ಪ್ರಯತ್ನಗಳು ಹಿಂದಿನ ಸಾಹಿತ್ಯ, ಕಾಲಗಳ ವೈಭವೀಕರಣವಲ್ಲ. ಬದಲಾಗಿ ಅದು ಹಿಂದಿನ ಸಾಹಿತ್ಯವನ್ನು ಇಂದಿನ ಸಾಹಿತ್ಯದ ಭಾಗವಾಗಿ ಮಾಡಿಕೊಂಡ ಕ್ರಮವಾಗಿದೆ.

ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ದೇಶೀಯ ಪ್ರಜ್ಞೆ ಕುರಿತು ಚಿಂತಿಸುವಾಗ ನಾವು ಮುಖ್ಯವಾಗಿ ಪಂಪನ ಕಾಲಕ್ಕೂ ನಮ್ಮ ಕಾಲಕ್ಕೂ ಇರುವ ಮೂಲಭೂತ ವ್ಯತ್ಯಾಸವೊಂದನ್ನು ಗುರುತಿಸಬೇಕು. ಪಂಪನ ಕಾಲದಲ್ಲಿ ರಾಷ್ಟ್ರೀಯತೆಯ ಕಲ್ಪನೆ ಇರಲಿಲ್ಲ. ನೇಶನ್ ಸ್ಟೇಟ್ ಎಂಬ ಇಂದಿನ ರಾಷ್ಟ್ರ ಕಲ್ಪನೆ ಆಧುನಿಕ ದೇಶೀಯ ಪ್ರಜ್ಞೆಯ ಮೇಲೆ ಪ್ರಭಾವ ಬೀರಿದೆ. ವಸಾಹತು ಶಾಹಿಯಿಂದ ಬಿಡಿಸಿಕೊಂಡು ಸ್ವತಂತ್ರವಾಗುವ ಕಲ್ಪನೆ ನಮ್ಮಲ್ಲಿ ಹೊಸದಾಗಿ ಸೃಷ್ಟಿಸಿದ ರಾಷ್ಟ್ರೀಯ ಕಲ್ಪನೆ ದೇಶೀಯ ಪ್ರಜ್ಞೆಯೊಳಗೆ ಅಸ್ಮಿತೆಯನ್ನು ತುಂಬಿದೆ. ನಮ್ಮದು ಎಂಬುದು ಸ್ವಂತಿಕೆಯ ಪ್ರಶ್ನೆಯೂ ಆಗಿದೆ.

ರಾಷ್ಟ್ರೀಯತೆ ನಮ್ಮ ಚಿಂತನೆ ಹಾಗೂ ಸಂಸ್ಕೃತಿ ಮೇಲೂ ಪ್ರಭಾವ ಬೀರಿದೆ. ಅಖಂಡ ಭಾರತವನ್ನು ಒಂದು ನಾಗರಿಕತೆ(civilization) ಎಂದು ಟಾಯನ್‌ಬಿ ಗುರುತಿಸಿದರು. ಇಂದಿನ ರಾಷ್ಟ್ರೀಯ ಕಲ್ಪನೆ ಇಲ್ಲದಿದ್ದಾಗ ಚಿಂತನೆಯ ಕ್ರಮದಲ್ಲಿದ್ದ ವ್ಯತ್ಯಾಸಕ್ಕೆ ಒಂದು ಪುಟ್ಟ ಉದಾಹರಣೆ ಕೊಡಬಹುದು. ಪಂಪನ ಕಾಲದಲ್ಲಿ ಅವನ ರಾಜ್ಯದಲ್ಲಿದ್ದ ಯಾರಾದರೂ ಅವನಿಂದ ಹೊರರಾಜ್ಯವಾದ ಕಾಶಿ ರಾಜ್ಯದಲ್ಲಿರುವ ಗಂಗಾಜಲ ಅತ್ಯಂತ ಪವಿತ್ರ ಜಲ ಎಂದರೆ ಅವನು ತನ್ನ ನೆಲ-ಜಲಗಳನ್ನು ಪ್ರೀತಿಸದ ರಾಜ್ಯದ್ರೋಹಿಯಾಗುತ್ತಿರಲಿಲ್ಲ. ತನ್ನ ರಾಜ್ಯದ ಹೊರಗಿನ ಕೈಲಾಸ ಪರ್ವತ ಪವಿತ್ರ ನೆಲ ಎಂದರೂ ರಾಜ್ಯದ್ರೋಹಿಯಾಗುತ್ತಿರಲಿಲ್ಲ. ಇಂದಿನ ರಾಷ್ಟ್ರೀಯತೆ ಬಳಿಕ ನಮ್ಮ ದೇಶದ ಹೊರಗೆ ಪವಿತ್ರ ನೆಲ ಇದೆ ಎಂಬ ಧಾರ್ಮಿಕ ನಂಬುಗೆಯೂ ಅಪರಾಧವೆಂಬಂತೆ ಬಿಂಬಿಸುವವರಿದ್ದಾರೆ. ಇದು ರಾಷ್ಟ್ರೀಯತೆಯ ಪಂಜಗಳು ಇಂದು ನಮ್ಮನ್ನು ಹಿಡಿದಿರುವ ರೀತಿಗೆ ಒಂದು ಉದಾಹರಣೆ.

ರಾಷ್ಟ್ರ ಕಲ್ಪನೆಯೂ ಭಾರತದಂತಹ ದೇಶದಲ್ಲಿ ಸರಳವಲ್ಲ. ನಮ್ಮ ಒಕ್ಕೂಟ ವ್ಯವಸ್ಥೆಯೊಳಗೆ ಇರುವ ಅನೇಕ ರಾಜ್ಯಗಳು ಸ್ಥಳೀಯ ರಾಜ್ಯ ಕಲ್ಪನೆಯನ್ನು ನೀಡಿವೆ. ರಾಜ್ಯಗಳ ವಿಂಗಡನೆ ಮೊದಲಿಗೆ ಭಾಷಾವಾರು ಪ್ರಾಂತ್ಯಗಳ ಮೂಲಕ ಆಗಿರುವುದರಿಂದ ನಮ್ಮಲ್ಲಿ ಭಾಷೆ ಹಾಗೂ ಸ್ಥಳೀಯ ಸಂಸ್ಕೃತಿಯ ಆಧಾರದ ಮೇಲೆ ನಿಂತಿರುವಂತಹ ಉಪರಾಷ್ಟ್ರೀಯ ಕಲ್ಪನೆಯೂ ಇದೆ. ಆದುದರಿಂದ ನಮ್ಮ ದೇಶೀ ಪ್ರಜ್ಞೆ ಒಳಗೆ ಬೆಳೆದಿರುವ ರಾಷ್ಟ್ರೀಯ ಹಾಗೂ ಉಪರಾಷ್ಟ್ರೀಯ ಕಲ್ಪನೆಯನ್ನೂ ನಾವು ಗಮನಿಸಬೇಕು.

ರಾಷ್ಟ್ರ, ರಾಜ್ಯಗಳು ಒಂದು ಕುಟುಂಬದ ಹಾಗಿರುವ ಕಲ್ಪನೆಯನ್ನು ಕುವೆಂಪು ನಾಡಗೀತೆಯಲ್ಲಿ ಸಾರಿದ್ದಾರೆ. ಭಾರತ ಜನನಿ ಹಾಗೂ ಅವಳ ತನುಜಾತೆ ನಮ್ಮ ಕನ್ನಡ ಮಾತೆ. ಬಹುಶಃ ರಾಷ್ಟ್ರ ಹಾಗೂ ಉಪರಾಷ್ಟ್ರ ಕಲ್ಪನೆಗಳನ್ನು ನಾವು ನಾಡೋಜ ಕಯ್ಯಾರ ಕಿಂಞಣ್ಣ ರೈ ಅವರ ಕವನಗಳಲ್ಲಿ ನೋಡಬಹುದು. ಅವರಿಗೆ ತುಳು ಮನೆಯ ತಾಯಿ. ಕನ್ನಡ ಮಾತೆ. ಭಾರತಾಂಬೆ ಮಹಾಮಾತೆ. ಈ ಮೂರೂ ತಾಯಂದಿರ ಶಕ್ತಿಗಳು ತಮ್ಮಲ್ಲಿ ಸೇರಿವೆ. ಅದು ತಮ್ಮ ಸ್ವಂತಿಕೆಯನ್ನು ಬೆಳೆಸುವ ಶಕ್ತಿಗಳು. ಆ ಮೂರೂ ಕೂಡಾ ಪರಸ್ಪರ ಪೂರಕವಾಗಿವೆ. ಅವುಗಳೊಳಗೆ ಸಂಘರ್ಷವಿಲ್ಲ. ಈ ಮೂರೂ ಮಾತೆಯರು ಈ ಲೋಕದಲ್ಲಿ ತಮ್ಮನ್ನು ಸ್ಥಳೀಯಗೊಳಿಸುವ ದೇಶೀಯವಾಗಿ ಮೂಡುವ ಪ್ರಜ್ಞೆಯ ಭಾಗಗಳೇ ಆಗಿವೆ.

ಹೀಗೆ ರಾಷ್ಟ್ರೀಯತೆ ಕಲ್ಪನೆ ಬಳಿಕ ದೇಶೀಪ್ರಜ್ಞೆ ಪಡೆದ ಹೊಸ ಅರ್ಥಕ್ಕೆ ಆಧುನಿಕ ಸಮಾನತೆಯ ತಾತ್ತ್ವಿಕತೆ ಹಾಗೂ ಆಧುನಿಕ ಪರಿಣತಿಯ ಕಲ್ಪನೆಗಳೂ ಸೇರಿಕೊಂಡವು. ಆಧುನಿಕ ಪೂರ್ವ ಕಾಲವನ್ನು ಕನ್ನಡದ ನವೋದಯದ ಹೊಸ್ತಿಲು ಎಂದು ಪರಿಗಣಿಸಿದರೆ, ಅಭಿಜಾತ ಶೈಲಿ ಹಾಗೂ ಮಾರ್ಗಗಳನ್ನು ಓದುಗಬ್ಬ ಎಂದೂ ದೇಶೀ ಸಂಪ್ರದಾಯವನ್ನು ಹಾಡುಗಬ್ಬ ಎಂದು ಕರೆದುದನ್ನು ಕಾಣುತ್ತೇವೆ. ಕನ್ನಡದಲ್ಲಿ ಸಾಹಿತ್ಯ ಮತ್ತು ವಾಕ್‌ಪರಂಪರೆ ನಡುವೆ ಅಂತಹ ಬಿರುಕು ಇದೆಯೆ? ಎಂಬುದೂ ಒಂದು ಪ್ರಶ್ನೆ. ನಮ್ಮ ಗಮಕ, ಯಕ್ಷಗಾನ, ಸಂಗೀತ ಮೊದಲಾದ ಕಲೆಗಳು ಸಾಕಷ್ಟು ಸಾಹಿತ್ಯ ಕೃತಿಗಳನ್ನು ಹಾಡುಗಳ ಮೂಲಕವೂ ಜನರ ಬಳಿ ಒಯ್ದಿವೆ. ಇಂತಹ ಚರ್ಚೆಗಳು ನಡೆಯುತ್ತಿದ್ದ ಕಾಲದಲ್ಲೆ ಕುವೆಂಪು ಅವರು ವಿಶಾಲ ಹರಹಿನಲ್ಲಿ ಸಮಾನತೆಯ ತಾತ್ತ್ವಿಕತೆಯನ್ನು ಇಟ್ಟರು. ಅಸಮಾನತೆ ಪ್ರೋತ್ಸಾಹಿಸಿದ ಜಾತಿ ಹಾಗೂ ವರ್ಣವ್ಯವಸ್ಥೆ ವಿರುದ್ಧ ವ್ಯಕ್ತಿ ಸಮಾನತೆಯನ್ನು ಸ್ಥಳೀಯ ಧಾರ್ಮಿಕ ಪ್ರಜ್ಞೆಯ ಪ್ರಾರ್ಥನೆಯ ರೂಪದಲ್ಲೂ ನಿರೂಪಿಸಿದರು. ಅವರ ಒಂದು ಕವನ:

ಸಮಯವಿಹುದಿನ್ನೂ ಅವಸರವು ಬೇಡ
ತುದಿಯ ಕಾಣದ ಕಾಲ ಮುಂದಿರುವುದು
ಗುರಿಯು ಇರೆ ದೂರ, ಕಠಿನವಿರೆ ದಾರಿ
ಯುಗ ಯುಗಗಳುಳಿದಿಹವು ಭೀತಿಯೇಕೆ?
ಬಾಗಿಲುಗಳಿಲ್ಲ, ಪಾಗಾರವಿಲ್ಲ
ನಮ್ಮೊಡೆಯನರಮನೆಗೆ ಪಹರೆಯಿಲ್ಲ
ಎಂದಾದರೇನು? ಎಲ್ಲಾದರೇನು?
ಯಾರಾದರದರ ಮನೆಗೆ ನುಗ್ಗಬಹುದು!

ಇಲ್ಲಿ ಸ್ಪಷ್ಟವಾಗಿ ಸಮಾನತೆಯ ನೆಲೆ ಇದೆ. ಇದನ್ನು ಆಧುನಿಕ ಸ್ವಂತಿಕೆಯ ಹಾಗೂ ವ್ಯಕ್ತಿಯೊಬ್ಬನ ಸ್ವಾತಂತ್ರ್ಯವೂ ದೇಶೀಯ ಸ್ವತಂತ್ರ ಪ್ರಜ್ಞೆಯಾಗುವ ಹಿನ್ನೆಲೆಯಲ್ಲಿ ಗುರುತಿಸಬೇಕು. ಈ ಕವನದಲ್ಲಿ ಅರಮನೆಯ ರೂಪಕ ಎರಡು ಭಿನ್ನ ರೀತಿಯಲ್ಲಿ ಬಳಕೆಯಾಗಿರುವುದು ಬದಲಾಗುತ್ತಿದ್ದ ರಾಷ್ಟ್ರ ಕಲ್ಪನೆಯ ಪ್ರಭಾವಕ್ಕೂ ಒಳಗಾಗಿರುವುದನ್ನು ಗುರುತಿಸಬೇಕು. ಆಗಮಿಕವಾದುದು ವಸ್ತುಕ ಹಾಗೂ ಲೌಕಿಕ ಕಾವ್ಯ ವರ್ಣಕ ಎಂಬ ಮಾರ್ಗ-ದೇಸಿಗಳ ವರ್ಗೀಕರಣದಿಂದ ಪ್ರತ್ಯೇಕವಾಗಿ ಧಾರ್ಮಿಕ ಹಾಗೂ ಲೌಕಿಕ ತಾತ್ತ್ವಿಕತೆಗಳು ಒಂದರ ಒಳಗೆ ಒಂದು ಸೇರಿಕೊಂಡ ಹೊಸ ಪ್ರಜ್ಞೆಯನ್ನು ಕುವೆಂಪು ಅವರ ಪ್ರಾರ್ಥನಾ ರೂಪದ ಕವನದಲ್ಲಿ ಕಾಣಬಹುದು. ಪಾರಿಭಾಷಿಕ ಪರಿಕಲ್ಪನೆಗಳನ್ನು

ಹೊರಗಿಟ್ಟು ನೋಡಿದರೆ ಅದನ್ನೂ ದೇಶೀಯ ಪ್ರಜ್ಞೆಯ ಭಾಗವಾಗಿ ವ್ಯಾಖ್ಯಾನಿಸಲು ಸಾಧ್ಯವಿದೆ.

ಹೇಳುವುದು ಹಾಗೂ ಹೇಳಬೇಕಾದ ವಸ್ತು ಎರಡರಲ್ಲೂ ಆಧುನಿಕವಾಗಿ ನಿರ್ಮಾಣವಾದ ತಾತ್ತ್ವಿಕ ಬದಲಾವಣೆಯನ್ನು ಕುವೆಂಪು ಅವರ ನನ್ನನು ನಿನ್ನಯ ಕೊಳಲನು ಮಾಡು ಎಂಬ ಕವನದಲ್ಲೂ ಗುರುತಿಸಬಹುದು.

ನನ್ನನು ನಿನ್ನಯ ಕೊಳಲನು ಮಾಡು
ಹೇ ಜೀವೇಶನೆ ಬೇಡುವೆನು;
ನಿನ್ನಯ ಸವಿಗೊರಲುಸಿರನು ನೀಡು
ವಿಧ ವಿಧ ರಾಗವ ಹಾಡುವೆನು

ನನ್ನೀ ಹೃದಯದ ಶೂನ್ಯವ ತುಂಬಲಿ
ನಿನ್ನುಸಿರೊಲ್ಮೆಯ ಪೂರ್ಣತೆಯಿಂ;
ಬನದುಸಿರೆದೆಯಲಿ ತೊದಲುವ ಬದಲು
ನಿನ್ನುಸಿರಾಡಲಿ ಪರಿಣತೆಯಿಂ!

ಬನದ ಉಸಿರು ಎದೆಯಲಿ ತೊದಲುವ ಬದಲು ನಿನ್ನ ಉಸಿರು ಪರಿಣತೆಯಿಂದ ಆಡಲಿ ಎಂಬ ಕೊನೆಯ ಮಾತುಗಳನ್ನು ಗಮನಿಸಬೇಕು. ಸ್ಥಳೀಯ ನೆಲೆಗಳಲ್ಲಿ ವಿಜ್ಞಾನ ಹಾಗೂ ಕೈಗಾರಿಕೆಗಳ ಶಕ್ತಿ ಬೆಳೆಯುತ್ತಿದ್ದ ಕಾಲದಲ್ಲಿ ಪರಿಣತಿಯ ಕಲ್ಪನೆಗೆ ವಿಶೇಷ ಮಹತ್ವ ಬಂದಿದೆ. ಸ್ವಂತಿಕೆಯ ಸಫಲತೆಗೆ ಪರಿಣತಿಯೂ ಮುಖ್ಯವಾದೊಂದು ಆಶಯವಾಗಿ ನಮ್ಮ ಸಮಾಜದಲ್ಲಿ ಮುಂದೆ ಬೆಳೆಯಿತು.

ದೇಶೀಯ ಪ್ರಜ್ಞೆಯ ಆಧುನಿಕ ಪೂರ್ವ ಕನ್ನಡದಲ್ಲಿ ಹೊಸದಾಗಿ ಉದಿಸಿದ ಕ್ರಮವನ್ನು ಸೂಚಿಸಲು ವರಕವಿ ಬೇಂದ್ರೆ ಅವರ ಕೆಲವು ಕವನಗಳನ್ನು ಗಮನಿಸಬೇಕು. ಅವರ ಗರಿ ಕವನ ಸಂಕಲನ ೧೯೩೨ರಲ್ಲಿ ಪ್ರಕಟವಾಯಿತು. ಈ ಸಂಕಲನದಲ್ಲಿ ೧೯೧೯ರಲ್ಲಿ ವಾಗ್ಭೂಷಣ ಪತ್ರಿಕೆಯಲ್ಲಿ ಪ್ರಕಟವಾದ ಮುದ್ದಣ ಎಂಬ ಕವನವಿದೆ. ಅದರಲ್ಲಿ ಕನ್ನಡ ನಾಡನ್ನು ಸಂಜೆ ಆವರಿಸಿ ಕತ್ತಲು ಕವಿದಿದೆ. ಹೀಗೆ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಕತ್ತಲನ್ನು ಕಳೆಯುವಂತೆ ಕವಿ ಮುದ್ದಣ ಎಂಬ ಹುಂಜ ಕೂಗಿ ಬೆಳಗಾಗಿದೆ. ಇನ್ನು ಹಿಂಜರಿಯದಂಥ ಚೈತನ್ಯ ಕನ್ನಡದ ಪಾಲಿಗಾಗಿದೆ ಎಂದು ಹೇಳುತ್ತಾರೆ.

ಸಂಜೆ ಸೇರಿತು ಬಂದು ಕನ್ನಡ ನಾಡಿನೊಳಾ
ಮಂಜು ಮುಸುಕಿದ ಕತ್ತಲೆಯ ಗುಡಿಸಿತೊ?
ನಂಜೇರಿ ನಿದ್ದೆಗೈದಿತೋ? ಸತ್ತಿತೋ ಜೀವ? ಮಿಡುಕಿಲ್ಲದಾಯಿತಾಗ
ಮುಂಜಾವಿನವಳ ತಂಬೆಲರೊಡನೆ ಮುದ್ದಣನ
ಹುಂಜವೆಕ್ಕಿಕ್ಕಿ ಕೂಗಿದ ಮೇಲೆ ಆ ದನಿಯ
ಸಜೀವವೆಚ್ಚಿಸಿತು ಸಾಸಿಗರು ಹಿಂಜರಿಯದಂಥ ಚೈತನ್ಯವನ್ನು

ಕನ್ನಡನಾಡಿನ ಕತ್ತಲೆಯನ್ನು ಕಳೆಯುವಂತೆ ಕೂಗಿದ ಹುಂಜ ಮುದ್ದಣ. ಇದು ಕನ್ನಡದ ದೇಶೀಯ ಪ್ರಜ್ಞೆ ಗುರುತಿಸಿಕೊಳ್ಳುವ ಕ್ರಮ. ಮಾರ್ಗದ ಕ್ರಮವನ್ನು ಬಿಟ್ಟು ದೇಶೀಯತೆಯನ್ನು ತನ್ನದೇ ಆದ ರೀತಿಯಲ್ಲಿ ಮೊದಲು ಬೆಳೆಸಿದ ಮತ್ತೊಂದು ಮುಖ್ಯ ಕಾಲ ವಚನಕಾರರ ಕಾಲ. ಬೇರೆಯೇ ಒಂದು ರೀತಿಯಲ್ಲಿ ಮಾರ್ಗ ಕಲ್ಪನೆಯಲ್ಲಿದ್ದ ಸಾಂಸ್ಕೃತಿಕ ನೆಲೆಗಳನ್ನು ಬೇಂದ್ರೆಯವರು

ದೇಶೀಯ ಪ್ರಜ್ಞೆಯೊಳಗೆ ತರುವ ಇನ್ನೊಂದು ಉದಾಹರಣೆಗೆ ಅವರ ಶ್ರಾವಣ ಕಲ್ಪನೆ ನೋಡಬೇಕು.

ಗುಡ್ಡ ಗುಡ್ಡ ಸ್ಥಾವರ ಲಿಂಗ, ಅವಕ ಅಭ್ಯಂಗ, ಎರಿತಾರೋ ಅನ್ನೋ ಹಂಗ, ಶ್ರಾವಣ ಬಂದಿದೆ. ಇಲ್ಲಿ ಮಾರ್ಗದ ಅಭಿಷೇಕ ಕಲ್ಪನೆಯನ್ನು ಬೇಂದ್ರೆಯವರು ದೇಶೀಯ ಅಭ್ಯಂಗದ ಚಿತ್ರದಲ್ಲಿಡುತ್ತಾರೆ. ಇಲ್ಲಿ ಸ್ಥಾವರ ಲಿಂಗಗಳು ಗುಡ್ಡಗಳು. ಶಿವಲಿಂಗದಂತೆ ತೋರುವ ಆ ಬೆಟ್ಟಗಳಿಗೆ ಶ್ರಾವಣದ ಮೋಡಗಳು ಸ್ನಾನ ಮಾಡಿಸುತ್ತಿವೆ. ಲಿಂಗ ಹಾಗೂ ಅಭ್ಯಂಗಗಳು ಕೇವಲ ಪ್ರಾಸಕ್ಕಾಗಿ ಮಾತ್ರ ಸೇರಿಲ್ಲ. ಲಿಂಗಗಳಿಗೆ ಸಂಸ್ಕೃತ ಮಾರ್ಗಕ್ರಮದಲ್ಲಿ ಮಾಡಬೇಕಾದ್ದು ಅಭಿಷೇಕ. ಅದರ ಮೂಲ ಎರೆಯುವುದು. ನೀರಿನ ಅಭಿಷೇಕ ಮೂಲಾರ್ಥದಲ್ಲಿ ನೀರಿನ ಸ್ನಾನವೇ ಆಗಿದೆ. ಅದನ್ನು ದೇಶೀಯ ಪ್ರಜ್ಞೆಯ ಭಾಗವಾಗಿ ಬೇಂದ್ರೆ ಅಭ್ಯಂಗ ಪದದ ಮೂಲಕ ಸೂಚಿಸುತ್ತಿದ್ದಾರೆ. ಅಭ್ಯಂಗ ಅಥವಾ ಅಭ್ಯಂಜನ ಎಂಬುದು ಸಂಸ್ಕೃತ ಪದವೇ ಆಗಿದ್ದರು ಕನ್ನಡದಲ್ಲೂ ಅದು ಎಣ್ಣೆ ನೀರಿನ ಸ್ನಾನವನ್ನೇ ಸೂಚಿಸುವುದು. ಅಭಿಷೇಕ ಎಂಬ ಪದದ ಹಿಂದಿರುವ ಪಾವಿತ್ರ್ಯದ ಕಲ್ಪನೆ ಅಭ್ಯಂಗಕ್ಕೆ ಇಲ್ಲ. ಬೆಟ್ಟಗಳು ಸ್ಥಾವರ ಲಿಂಗವಾಗುವುದರಿಂದ ದೇಶೀಯ ಪಾವಿತ್ರ್ಯ ಸೃಷ್ಟಿಯಾಗುತ್ತದೆ.

ಈ ಮಾತುಗಳನ್ನು ಹೇಳುವಾಗ ಈ ಮೊದಲು ಸೂಚಿಸಿದ ಕುವೆಂಪು ಅಭಿವ್ಯಕ್ತಿ ಕ್ರಮಕ್ಕೂ ಬೇಂದ್ರೆಯವರ ಕ್ರಮಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಕುವೆಂಪು ಅವರು ಅಭಿವ್ಯಕ್ತಿಯಲ್ಲಿ ಮಾರ್ಗ ಪಂಥದವರು. ಅವರ ವಿಚಾರಗಳ ಸ್ವಂತಿಕೆಯಲ್ಲಿ ಆಧುನಿಕ ದೇಶೀಯ ಪ್ರಜ್ಞೆಯ ಸೂಚನೆಗಳಿವೆ. ದೇಶೀಯ ಚಿತ್ರಗಳು ಅವರ ಕಾದಂಬರಿಗಳ ಅಭಿವ್ಯಕ್ತಿಯೊಳಗೆ ಸೇರಿಬರುವಂತೆ ವರ್ಣಕವಾಗಿ ಕಾವ್ಯದೊಳಗೆ ಸೇರಿಕೊಳ್ಳುವುದಿಲ್ಲ. ಆದರೆ ಅವರ ವಿಚಾರಗಳಲ್ಲಿ ಅಸ್ಮಿತೆಯ ಪ್ರಶ್ನೆಯಾಗಿ ದೇಶೀಯ ಪ್ರಜ್ಞೆ ಸೇರಿಕೊಳ್ಳುವುದನ್ನು ನಾವು ಗಮನಿಸಬೇಕು. ಕವಿ ಗೋಪಾಲಕೃಷ್ಣ ಅಡಿಗರು ಗೊಂದಲಪುರ ಕವನದಲ್ಲಿ ಹತ್ತು ಅವತಾರ ರಂಗೋಲೆ ಕೆಳಗೇ ತೂರಿ ಬದುಕಿದೆ ಅಸುರ ದರ್ಪ ಎಂದಾಗ ರಂಗೋಲಿ ಕೆಳಗೆ ತೂರುವ ಗಾದೆಯ ದೇಸಿಯನ್ನು ಬಳಸುವುದನ್ನು ಗಮನಿಸಬಹುದು. ಆಧುನಿಕ ಪೂರ್ವ ಕನ್ನಡ ಹೀಗೆ ಅಭಿವ್ಯಕ್ತಿ ಕ್ರಮಗಳಲ್ಲಿ ನಡೆಸಿದ ಪ್ರಯೋಗಗಳೂ ವರ್ಣಕ (ದೇಸಿ) ಮೂಲಕ ದೇಶೀಯ ಪ್ರಜ್ಞೆಯನ್ನು ಆವಾಹಿಸಿಕೊಂಡ ಕ್ರಮ ಎಂದೇ ಭಾವಿಸಬೇಕಾಗುತ್ತದೆ.

೧೯೨೨ರಲ್ಲಿ ಬೇಂದ್ರೆಯವರು ಬರೆದ ಹರಕೆ ಎಂಬ ಕವನವಿದೆ.

ಭೋಗಕ್ಕೆ ಮನಸೋತು ವಿಕಟ ವಿಟಗಣದಂತೆ
ಆಗಿರುವದೀಗ ನಾಡು
ರೋಗಕ್ಕೆ ಮೈಸೋತು ಕೈಸಾಗದಾಗಿಹುದು
ಯೋಗಸ್ಥನಾಗಿ ಹಾಡು

ಯೋಗಸ್ಥನಾಗಿ ಗಡ ಹಾಡುಗಳ ಹಾಡುತ್ತ
ಕನ್ನಡಿಗರೊಡನೆ ಆಡು
ಯೋಗ-ಭೋಗದ ಭೂಮಿಯಾಗಿ ಸಾಗುವ ಹಾಗೆ
ಕನ್ನಡದ ನಾಡ ಮಾಡು!

ಕನ್ನಡದಲ್ಲಿ ದೇಸಿ ಎದುರಿಸಬೇಕಾದ ಮಾರ್ಗಗಳು ಒಂದೇ ಅಲ್ಲ. ಸಂಸ್ಕೃತ, ವಸ್ತುಕ


ನೆಲೆಯಲ್ಲಿ ಪಂಪ ದೇಸಿಯನ್ನು ವರ್ಣಕವಾದ ಕನ್ನಡವಾಗಿ ಪರಿವರ್ತಿಸಿದ. ಆದರೆ ಮುಂದೆ ಪಂಪನಿಂದ ಬೆಳೆದ ಕನ್ನಡವನ್ನೂ ಕುಮಾರವ್ಯಾಸ ಮಾರ್ಗದ ರೀತಿಯಲ್ಲೇ ಎದುರಿಸಬೇಕಾಯಿತು. ಕನ್ನಡದಲ್ಲಿ ಇಂತಹ ಅಂತರ್ ಪ್ರತಿಫಲನಗಳು ನಡೆದಿರುವುದರಿಂದಲೆ ಆಧುನಿಕ ಪೂರ್ವ ಕನ್ನಡ ಕಾವ್ಯಕ್ಕೆ ಯೋಗಸ್ಥವಾಗುವುದು ಸಾಧ್ಯವಾಯಿತು. ರೋಗಕ್ಕೆ ಮೈ ಮಾತ್ರ ಸೋತಿದೆ. ಆದರೆ ಅಂತರ್ಗತವಾದ ಮನಸ್ಸಿಗೆ ಯೋಗಸ್ಥವಾಗುವ ಶಕ್ತಿ ದತ್ತವಾಗಿರುವುದು ಹಳಗನ್ನಡ, ನಡುಗನ್ನಡ ಕಾಲದ ಅನೇಕಾನೇಕ ಪ್ರಯೋಗಗಳಿಂದ ಕೂಡಿದ ಶಕ್ತಿ ಸಂಚಯನದಿಂದ. ಭೋಗ ಒಂದಕ್ಕೇ ಮನಸೋಲುವುದರಿಂದ ರೋಗ. ನಾಡು ಬೆಳೆಯಬೇಕಾದರೆ ಯೋಗ-ಭೋಗಗಳ ಸಮನ್ವಯ ಇರಬೇಕು. ರತ್ನಾಕರವರ್ಣಿ ಆ ಬಗ್ಗೆ ಚಿಂತಿಸಿದ್ದ. ಯೋಗಸ್ಥವಾದ ಹಾಡು ಸಾಧಿಸಬೇಕಾಗಿರುವುದು ಅಂತಹ ಸಮನ್ವಯವನ್ನು ತಾತ್ತ್ವಿಕತೆ ಹಾಗೂ ಜೀವನ ಸೌಂದರ್ಯದ ದೇಸಿ ಎರಡನ್ನೂ ಮೈಗೂಡಿಸಿಕೊಳ್ಳುವುದನ್ನು ಕೈಸಾಗದಿದ್ದ ಕಾಲದಲ್ಲೂ ಯೋಗಸ್ಥನಾಗಿ ಪಡೆಯಬಲ್ಲ ಶಕ್ತಿ ಸಂಚಯನಕ್ಕೆ ಪಂಪನಿಂದ ಇಂದಿನವರೆಗೆ ಬೆಳೆದ ಚಿಂತನೆಯನ್ನು ಗ್ರಹಿಸುವ ಮನೋಸಿದ್ಧತೆ ಬೇಕು. ಆಧುನಿಕ ಪೂರ್ವ ಕನ್ನಡ ಸಾಹಿತ್ಯ ತನ್ನ ನವೋದಯದ ಬೆಳಕಲ್ಲಿ ಅಂತಹ ಆರ್ಜನೆಯನ್ನು ಮಾಡಿತು. ಹೊಸತಾಗಿ ತನ್ನ ದೇಶೀಯ ಪ್ರಜ್ಞೆಯನ್ನು ಬೆಳೆಸಿಕೊಂಡಿತು.

(ಕನ್ನಡ ಸಾಹಿತ್ಯದಲ್ಲಿ ದೇಶೀಯ ಪ್ರಜ್ಞೆ ಎಂಬ ವಿಚಾರದ ಕುರಿತಾಗಿ ಮಡಿಕೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ನೀಡಿದ ಭಾಷಣದ ಬರಹ ರೂಪ.)

ಸಿ-೨/೧೦೩, ಓಂಕಾರ್ ಅಪಾರ್ಟ್‌ಮೆಂಟ್ಸ್
೮ನೇ ಮುಖ್ಯರಸ್ತೆ, ೧೨ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು- ೫೬೦ ೦೦೩
ಮೊಬೈಲ್: ೯೮೮೦೩೦೨೪೫೦
ಇಮೇಲ್:srvshankar@yahoo.com



ಲಂಕೇಶರ 'ಸಂಕ್ರಾಂತಿ'ಯಲ್ಲಿ ಆಹಾರ ಸಂಸ್ಕೃತಿಯ ಪ್ರಶ್ನೆಗಳು



■ **ನಟರಾಜ್ ಶ್ಯಾನುಭೋಗ್**

ಒಬ್ಬ ಪೌರಾಣಿಕ ಅಥವಾ ಐತಿಹಾಸಿಕ ವ್ಯಕ್ತಿಯ ಬಗೆಗೆ ನಾವು ಹೇಗೆ ಹತ್ತು ಹಲವು ಕಥೆಗಳನ್ನು ಕೇಳಿದ್ದೇವೋ ಹಾಗೆ ಲಂಕೇಶ್ ಮೇಷ್ಟ್ರು ಅವರ ವ್ಯಕ್ತಿತ್ವದ ಬಗೆಗೆ ಹಲವು ಸಂಗತಿಗಳು ಚಾಲ್ತಿಯಲ್ಲಿರುವುದನ್ನು ನಾನು ಕೇಳಿಸಿಕೊಂಡಿದ್ದೇನೆ. ಅವು ಕೇವಲ ಕಟ್ಟು ಕಥೆಗಳಲ್ಲ ಎಂದೂ ಸ್ಪಷ್ಟಪಡಿಸಿಕೊಂಡಿದ್ದೇನೆ. ಅಂತಹ ಕಥೆಗಳನ್ನು ಕೇಳಿದಾಗೆಲ್ಲ ಮೇಷ್ಟ್ರು ಬಗೆಗೆ ನನ್ನ ಆಸಕ್ತಿ, ಒಲವು ಹೆಚ್ಚುತ್ತಲೇ ಹೋಯಿತು. ಕೆಲವು ವ್ಯಕ್ತಿಗಳು ಹೀಗೆ ತಾವಿರುವ ಕಾಲದಲ್ಲೂ, ನಂತರದಲ್ಲೂ ತಮ್ಮ ವ್ಯಕ್ತಿತ್ವದ ಅಸಮಾನ್ಯ ಪ್ರಭಾವವನ್ನು ಬೀರುತ್ತಾರೆ. ಅಂತಹ ವ್ಯಕ್ತಿತ್ವ ಲಂಕೇಶ್ ಅವರದು. ಒಬ್ಬ ವ್ಯಕ್ತಿಯನ್ನು ಎರಡು ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು. ಒಂದು ಅವರ ಜೀವನ ಕ್ರಮದ ಮುಖಾಂತರ ಎರಡನೆಯದು ಅವರ ಬರವಣಿಗೆಗಳು, ವೈಚಾರಿಕತೆ ಮೂಲಕ. ವ್ಯಕ್ತಿಯನ್ನು ಅರಿಯಲು ಇವೆರಡೂ ಭಿನ್ನ ಮಾರ್ಗಗಳು. ಎಂದು ಹೇಳಬಹುದಾದರೂ ಈ ಭಿನ್ನತೆಗಳ ಸಮನ್ವಯ ಒಬ್ಬ ವ್ಯಕ್ತಿಯಲ್ಲಿ ಕಾಣುವುದು ಕಷ್ಟ ಸಾಧ್ಯ. ನಿಜ ವ್ಯಕ್ತಿ ಜೀವನವೇ ಬೇರೆ, ಆತನ ಬರವಣಿಗೆಯೇ ಬೇರೆ ಎರಡಕ್ಕೂ ತಾಳೆ ಹಾಕಿ ನೋಡುವುದೂ ಕಷ್ಟ. ವ್ಯಕ್ತಿಯ ಜೀವನದಂತೆ ಆತನ ಸಾಹಿತ್ಯ, ಆತ ರಚಿಸಿದ ಸಾಹಿತ್ಯದಂತೆ ಜೀವನ ಕ್ರಮ ಇರಬೇಕೆಂದು ಒತ್ತಾಯವೂ ಇಲ್ಲ. ಆದರೆ ಮೇಷ್ಟ್ರು ವಿಚಾರದಲ್ಲಿ ಜೀವನ, ವೈಚಾರಿಕತೆ ಒಂದನ್ನೊಂದು ಪ್ರತಿಫಲಿಸುತ್ತದೆ ಎಂದೇ ನನ್ನ ಭಾವನೆ. ಲಂಕೇಶ್ ಅವರ ಜೀವನ, ವೈಚಾರಿಕತೆಗಳು ಹಲವು ವೈರುಧ್ಯಗಳನ್ನು ಹೊಂದಿದ್ದಾಗ್ಯೂ,

ಆ ವೈರುಧ್ಯಗಳು ಕನ್ನಡ ಸಾಹಿತ್ಯದಲ್ಲಿ ಅವರ ವಿಶಿಷ್ಟ ಗುರುತುಗಳಾಗಿ ಕಂಡಿರಲೂ ಸಾಕು. ಮೇಷ್ಟ್ರು ಒಳಗಿದ್ದ ತಾಯ್ತನ, ಅಪ್ಪತನಗಳು ಆ ಕಾಲದಲ್ಲಿ ಹಲವರಿಗೆ ಬೆರಗನ್ನು ಉಂಟು ಮಾಡಿದ್ದವು ಎಂದು ಕೇಳಿ ತಿಳಿದಿದ್ದೇನೆ.ಇಂತಹ ಬೆರಗಿನ ವ್ಯಕ್ತಿತ್ವವನ್ನು ನಾನು ಕಾಣಲಾಗಲಿಲ್ಲವೇನೋ ನಿಜ. ಆದರೆ ಲಂಕೇಶರ ಹಲವು ಕೃತಿಗಳನ್ನು ಓದುವುದರ ಮೂಲಕ ಅವರ ಸಾಂಗತ್ಯವನ್ನು ಆಗು ಮಾಡಿಕೊಳ್ಳುತ್ತಿದ್ದೇನೆ.

ಮೇಲೆ ನಾನು ಲಂಕೇಶ್ ಮೇಷ್ಟ್ರು ಬಗೆಗೆ ಸ್ವಲ್ಪ ಪ್ರೀತಿಯಿಂದ, ಭಾವನಾತ್ಮಕ ನೆಲೆಯಲ್ಲಿ ವಿವರಿಸಿದ್ದರೂ ವರ್ತಮಾನದ ತಲ್ಲಣಗಳಿಗೆ ಅವರು ಹೇಗೆ ಮುಖಾಮುಖಿಯಾಗಿದ್ದಾರೆ ಎಂದು ಹೇಳುವುದೇ ನನ್ನ ಲೇಖನದ ಉದ್ದೇಶ. ನಾನು ಹೀಗೆ ಹೇಳುವ ಹೊತ್ತಿನಲ್ಲಿ ದೇಶ, ರಾಜ್ಯದಲ್ಲಿ ಹಲವು ರಾಜಕೀಯ, ಸಾಮಾಜಿಕ ಬದಲಾವಣೆಗಳು ವೈಚಾರಿಕ ಜಗತ್ತು ಆತಂಕಗೊಳ್ಳುವ ಹಾಗೆ ಮಾಡುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ಈ ಬದಲಾವಣೆಗಳು ವ್ಯಕ್ತಿ, ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮ, ಒತ್ತಡಗಳನ್ನು ನಿರ್ಮಿಸುತ್ತಿರುವುದನ್ನು ಗ್ರಹಿಸಬಹುದು. ಅಂದರೆ ವ್ಯಕ್ತಿಯ ನಿಲುವುಗಳು, ಸಮಾಜದ ನಿಲುವುಗಳು ಒಂದರ ಮೇಲೊಂದು ಪ್ರಭಾವಿಸುತ್ತಲೇ ಇರುತ್ತದೆ ನಿಜ. ಆದರೆ ಇಲ್ಲಿ ನಿಯಂತ್ರಣವಿರದೇ ಸಹ ಸಂಬಂಧಗಳು ಇರಬೇಕು. ಯಾವ ಸಮಾಜದಲ್ಲಿ ವ್ಯಕ್ತಿಯ ವೈಯಕ್ತಿಕ ಹಿತಾಸಕ್ತಿಗಳು, ಧೋರಣೆಗಳ ಮೇಲೆ ಅನಾಮತ್ತಾಗಿ ಹೇರಿಕೆ, ನಿಯಂತ್ರಣ ಹೇರಲಾಗುತ್ತದೆಯೋ ಆ ಸಮಾಜವು ಸಂಕೀರ್ಣಗೊಂಡಿದೆ ಎಂದೇ ಅರ್ಥ. ಬಹುಶಃ ಇಂಡಿಯಾ ದೇಶ ಈ ಸಂಕೀರ್ಣತೆಯನ್ನು ಒಪ್ಪಿಕೊಂಡು, ಪ್ರತಿಪಾದಿಸಿಕೊಂಡೇ ಬಂದಿದೆ. ಈ ಸಂಕೀರ್ಣತೆಯಿಂದ ಬಿಡಿಸಿಕೊಳ್ಳುವ, ಒಡೆದು ಹಾಕುವ ಯಾವುದೇ ಒಂದು ಸಣ್ಣ ಪ್ರಯತ್ನವನ್ನು ನಮ್ಮ ಪ್ರಬುದ್ಧ ಭಾರತದಲ್ಲಿ ಸಹಿಸಲಾಗುವುದಿಲ್ಲ. ಇದು ದುರಂತವೂ ಹೌದು, ವಾಸ್ತವವೂ ಹೌದು.

ಹಿಂದಿನಿಂದಲೂ ಇರುವ ಜಾತಿ ಅಸಮಾನತೆ, ಧಾರ್ಮಿಕ ಅಸಹನತೆ, ಲಿಂಗತಾರತಮ್ಯ, ಕೋಮುವಾದ, ಪ್ರಾದೇಶಿಕ-ಭಾಷಾ ತಾರತಮ್ಯ ಮುಂತಾದ ಜ್ವಲಂತ ಸಮಸ್ಯೆಗಳು ನಮ್ಮ ಸಮಾಜವನ್ನು ನಿಗಿ-ನಿಗಿ ಕೆಂಡವಾಗಿಸಿದೆ. ಯಾವುದು ಅಮುಖ್ಯ, ಮಾನವೀಯಗೊಳ್ಳಬೇಕಿತ್ತೋ ಅವುಗಳೇ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿರುವುದು ವಾಸ್ತವ. ಜಾತಿಯ ಹೆಸರಿನಲ್ಲಿ ದಲಿತ, ಶೋಷಿತರ ಮೇಲಿನ ನಿರಂತರ ಹಲ್ಲೆಗಳು, ಕೋಮುವಾದದ ಹೆಸರಿನಲ್ಲಿ ನೈತಿಕ ಪೊಲೀಸ್ ಗಿರಿ, ವೈಚಾರಿಕತೆಗೆ ಗುಂಡಿನೇಟು ಈ ಮೇಲಾಟಗಳೆಲ್ಲವೂ ನಾವು ಸಮಾಜವನ್ನು ನೋಡುವ, ಅರ್ಥೈಸುವ ಕ್ರಮಗಳನ್ನು ಬದಲಾಯಿಸಿಕೊಳ್ಳಲು ಒತ್ತಾಯಿಸುತ್ತವೆ. ಇದರ ಜೊತೆಗೆ ಆಹಾರ ಕ್ರಮದ ಆಯ್ಕೆ, ಆಹಾರ ಸಂಸ್ಕೃತಿಯ ಪ್ರಶ್ನೆ ಅತ್ಯಂತ ಸೂಕ್ಷ್ಮವಾಗಿ ಮುನ್ನೆಲೆಗೆ ಬರುತ್ತಿದೆ. ಒಂದು ರೀತಿಯಲ್ಲಿ ಇದನ್ನು ಆಹಾರದ ರಾಜಕಾರಣ ಎಂದೇ ಕರೆಯಬಹುದೇನೋ. ಇದು ವಚನ ಚಳುವಳಿಯ ಕಾಲದ ಪ್ರಶ್ನೆಯಾಗಿದ್ದರೂ ಈಗ ಅದರ ಸ್ವರೂಪ ಬದಲಾಗಿ ಕೋಮುವಾದ ಕ್ಕೆ ಅಂಟಿಕೊಂಡು ಅದರ ಚಹರೆ ಬದಲಾಗಿ ಹೋಗಿದೆ. ಆಹಾರ-ಪಾನೀಯಗಳು ಮನುಷ್ಯನ ಆಯ್ಕೆ ವಿಚಾರಗಳು. ನಿಖರವಾಗಿ ಹೇಳುವುದಾದರೆ ವ್ಯಕ್ತಿಗತ ನೆಲೆಗೆ ಸಂಬಂಧಿಸಿದ್ದು. ಅದು ಒಂದು ಸಮುದಾಯದ ಸಹಜ ಆಹಾರ ಕ್ರಮವೂ ಹೌದು. ಇದು ತಪ್ಪು ಎಂದು ಹೇಳುವ ಹಕ್ಕು ಯಾರಿಗೂ ಇಲ್ಲ. ವ್ಯಕ್ತಿಯ ಸಹಜವಾದ ಆಹಾರ ಕ್ರಮವನ್ನು (ಸಸ್ಯಾಹಾರ, ಮಾಂಸಹಾರ/ ಗೋಮಾಂಸ) ಬಲವಂತವಾಗಿ ಅದನ್ನು ನಿಯಂತ್ರಿಸುವ, ನಿರಾಕರಿಸುವ, ಬದಲಾಯಿಸಿ ಎಂದು

ನಿರ್ದೇಶಿಸುವ ಅಧಿಕಾರ ಯಾವೊಬ್ಬನಿಗೂ ಇಲ್ಲ, ಇರಲಾರದು. ಆದರೆ ಕೆಲವರು ಈಗ ಆಹಾರ ಕ್ರಮದ ಮೇಲೆ ನಿಯಂತ್ರಿಸುವ, ಬದಲಾಯಿಸಿ ಎಂದು ನಿರ್ದೇಶಿಸುವುದನ್ನು ಕಾಣಬಹುದಾಗಿದೆ. ಇದು ವರ್ತಮಾನದಲ್ಲಿ ಸಮಸ್ಯಾತ್ಮಕ, ಪ್ರಶ್ನಾರ್ಹವಾದದು. ಯಾರು ಹೀಗೆ ಮತ್ತೊಬ್ಬರ ಆಹಾರ ಕ್ರಮದ ಮೇಲೆ ನಿಯಂತ್ರಣಕ್ಕೆ, ಪ್ರಯತ್ನಿಸುತ್ತಿದ್ದಾರೋ ಅವರಿಗೆ ನಮ್ಮ ಭಿನ್ನಮತವಿದೆ.

ವಚನ ಚಳುವಳಿಯ ಕಾಲದಲ್ಲೇ ಆಹಾರ ಸಂಸ್ಕೃತಿ ಪ್ರಶ್ನೆಯು ಚರ್ಚಿತವಾಗಿ ಆಹಾರ ಕ್ರಮ, ತಳಸಮುದಾಯದವರು ಶರಣರಾಗಿ ಬದಲಾದರೂ ಅವರ ಜಾತಿಯ ಕೀಳರಿಮೆ ಬದಲಾಗುವುದಿಲ್ಲ ಎಂಬುದೂ ಸಾಧಿತವಾಗಿದೆ. ಲಂಕೇಶ್ ಅವರ ಸಂಕ್ರಾಂತಿ ನಾಟಕವು ಆಹಾರ ಸಂಸ್ಕೃತಿ ನೆಲೆಯಲ್ಲಿ ವಚನ ಚಳುವಳಿಯನ್ನು ವಿಮರ್ಶಿಸುತ್ತದೆ. ಶರಣ ಚಳುವಳಿಯ ಗ್ರಹಿಕೆಯಲ್ಲಿ ಮಾಂಸಹಾರ, ಮದ್ಯಪಾನವನ್ನು ತಳಸಮುದಾಯಗಳು ತ್ಯಜಿಸಿದರೆ ಜಾತೀಯ ಕೀಳರಿಮೆ ಇಲ್ಲವಾಗುತ್ತದೆ ಎಂಬುದಾಗಿತ್ತು. ವಾಸ್ತವವಾಗಿ ಈ ಗ್ರಹಿಕೆಯೇ ಸಮಸ್ಯಾತ್ಮಕವಾದದು. ಅಂದರೆ ಮಾಂಸಾಹಾರಕ್ಕೂ ಮತ್ತು ಆಯಾ ಜಾತಿಗಳ ಸ್ಥಾನಗಳಿಗೂ ಸಂಬಂಧವನ್ನು ಕಲ್ಪಿಸುವುದು ಮತ್ತು ಈ ಕಾರಣಕ್ಕೇ ಅವರುಗಳ ಜಾತಿ ಮೇಲು-ಕೀಳಾಗಿದೆ ಎಂದು ಒಂದು ಬಗೆಯ ನಂಬಿಕೆ ಶರಣ ಚಳುವಳಿಯ ಒಳಗಡೆ ಕೆಲಸ ಮಾಡುತ್ತಿತ್ತು. ಈ ಕಾರಣಕ್ಕಾಗಿ ಒಂದಂಶದ ಕಾರ್ಯಕ್ರಮವಾಗಿ ತಳಸಮುದಾಯಗಳ ಆಹಾರ ಕ್ರಮವನ್ನು ಬದಲಾಯಿಸಿ ಅವರೂ ಸಸ್ಯಹಾರಿಗಳಾಗುವಂತೆ ಮಾಡುವುದಾಗಿತ್ತು. ಅಂದರೆ ಆಹಾರ ಶುದ್ಧೀಕರಣದಿಂದ ಜಾತಿ ಶುದ್ಧೀಕರಣ ಸಾಧ್ಯ ಎಂಬ ನಂಬಿಕೆ, ಗ್ರಹಿಕೆ. ಇದನ್ನು ಮೇಷ್ಟ್ರು ಸಂಕ್ರಾಂತಿ ನಾಟಕದ ಸಂವಿಧಾನದ ಒಳಗೆ ತಂದು ಮೇಲಿನ ಗ್ರಹಿಕೆಯನ್ನು ಪ್ರಶ್ನಿಸುತ್ತಾರೆ.

ನಾಟಕದಲ್ಲಿ ಬಸವಣ್ಣ ಸಂಘಟಿಸಿದ ಶರಣ ಚಳುವಳಿಯ ಆಶಯದ ಮುಖವಾಣಿಯಾಗಿ ರುದ್ರ ನಿದ್ದಾನೆ. ರುದ್ರ Angry young man ಸ್ವರೂಪದ ಪಾತ್ರ. ಬದಲಾವಣೆ ಪರವಾದ ಪಾತ್ರ. ರುದ್ರನಿಗೆ ಬಸವಣ್ಣನಲ್ಲಿ ಅಗಾಧವಾದ ಪ್ರೀತಿ, ನಂಬಿಕೆ. ರುದ್ರನು ತನ್ನ ಜಾತಿಯು ಅನುಭವಿಸಿದ ಅಪಮಾನಕ್ಕೆ ತಾವು ರೂಢಿಸಿಕೊಂಡು ಬಂದ ತಮ್ಮ ಆಹಾರ ಪದ್ಧತಿ ಕಾರಣವೆಂದು ನಂಬಿದವನು. ಹೀಗಾಗಿ ತನ್ನ ಸಮುದಾಯಕ್ಕೆ ಶತಮಾನಗಳಿಂದ ಅಂಟಿದ ಕೀಳುತನವನ್ನು ಅಳಿಸಿಹಾಕಲು ಬಸವಣ್ಣ ಹೇಳಿದಂತೆ ಹೆಂಡ-ಕಂಡಗಳನ್ನು ತ್ಯಜಿಸಲು ತಾನೂ ಸೇರಿದಂತೆ ಹಲವರಿಗೆ ಮನವೊಲಿಸಲು ಪ್ರಯತ್ನಿಸುತ್ತಾನೆ. ಶರಣರಾದರೆ ತಮ್ಮ ಎಲ್ಲಾ ತರಹದ ಅಪಮಾನಗಳು ಇಲ್ಲವಾಗುತ್ತದೆಂಬ ನಂಬಿಕೆ. ವಾಸ್ತವವಾಗಿ, ಪ್ರಯೋಗಿಕವಾಗಿ ಅದು ಸಮಸ್ಯಾತ್ಮಕವೆಂಬ ಅರಿವು ಇಲ್ಲ.

ಶರಣ ಚಳುವಳಿಯು ಆಹಾರ-ಪಾನೀಯಗಳಲ್ಲಿ ಬದಲಾವಣೆಗಳಾದರೆ, ಶುದ್ಧೀಕರಣ ವಾದರೆ ಜಾತಿ ಶುದ್ಧೀಕರಣವಾದಂತೆ ಎಂದು ಹೇಳುತ್ತದೆ. ಅಲ್ಲದೇ ಆಹಾರ ಶುದ್ಧೀಕರಣವನ್ನೇ ಜಾತಿಗಳ ಶುದ್ಧೀಕರಣಕ್ಕೆ ಸಾಮ್ಯತೆ(Similarity)ಯನ್ನಾಗಿ ಮಾಡಿದರು. ಇದು ವಿವೇಚನೆ ಮತ್ತು ಬಿಡುಗಡೆಯ ಮಾರ್ಗ ಅಲ್ಲ, ವಾಸ್ತವಿಕವಾಗಿ ಆಹಾರ ಶುದ್ಧೀಕರಣ ಮಾಡಿದರೆ ಜಾತಿ ಶುದ್ಧೀಕರಣ ಮಾಡಿದ ಹಾಗೆ ಅಲ್ಲವೇ ಅಲ್ಲ, ಇದು ವಚನ ಚಳುವಳಿಯು ಜಾತಿಗಳ ಸ್ಥಿತಿಗತಿಗಳನ್ನು ಅರಿಯದ ಕ್ರಮದ ಗ್ರಹಿಕೆಯಲ್ಲಿನ ಸಮಸ್ಯೆಯೂ ಆಗಿದೆ. ಈ ಗ್ರಹಿಕೆಯನ್ನು ಸಂಕ್ರಾಂತಿ ಬಲವಾಗಿ ಪ್ರಶ್ನಿಸುವುದನ್ನು ಕಾಣಬಹುದು. ಉಜ್ಜ ಮತ್ತು ಕೆಂಚ ಇವರು ಬಸವಣ್ಣನ ಆಹಾರ ಶುದ್ಧೀಕರಣ ವಾದವನ್ನು ಬಲವಾಗಿ ಅಲ್ಲಗಳೆಯುತ್ತಾರೆ.

ಉಜ್ಜ : ಹೆಂಡ ತಕಬಾರದು ಉಜ್ಜಣ್ಣ ಅಂತಾರೆ, ಮಗ ಸಹಿತ ಬಂದು ಬ್ಯಾಡಪ್ಪ ಇನ್ನ ಹೆಂಡ, ಕಂಡ ಅಂತಾನೆ. ಯಾಕ್ಲಾ ಮಗನೆ ಯಾಕ್ಲಾ ಅಂತೀನಿ ಶರಣ್ರು ಹೆಂಡ ಕಂಡ ತಕ್ಕಳ್ಳಕ್ಕಿಲ್ಲ ಅಂತಾನೆ. ಹಂಗಾರ ಶರಣ್ರು ಹ್ಯಂಗಪ್ಪ ಬದುಕುತ್ತಾರೆ? ಅಂತ ನಾನು ಅಂತೀನಿ. ಹ್ಯಂಗಂದ್ರ-ಬಸವಣ್ಣಾರಂಗ ಅಂತಾನೆ ಮಗ. ಮಗ ಯಲ್ಲ ಬಿಟ್ಟು-ಏನಪ ಮಾಡಬೇಕು ಅಂತೀನಿ.

ಕೆಂಚ : ಬಸವಣಾರಲ್ಲ, ಜವರಾಯನೆ ಬಂದ್ರೂ ಕೋಳಿ ತಿಂಬೋದು ಬಿಡಕಾಗಲ್ಲ ಗೊತ್ತಾತ.

ಎಂದು ಮೇಲಿನಂತೆ ಉಜ್ಜ ಮತ್ತು ಕೆಂಚ ಅವರು ತಮ್ಮ ಮೇಲೆ ಆಗುತ್ತಿರುವ ಪ್ರಜ್ಞಾಪೂರ್ವಕ, ಅಪ್ರಜ್ಞಾಪೂರ್ವಕ ಚಿಂತನೆಗಳ ಸವಾರಿಯನ್ನು ನಿರಾಕರಿಸುತ್ತಾರೆ, ವಿರೋಧಿಸುತ್ತಾರೆ. ತಮ್ಮ ಸಹಜ ಸಂಸ್ಕೃತಿಯ ಪಳೆಯುಳಿಕೆಗಳನ್ನು ತಮ್ಮ ಸುಖ-ದುಃಖಗಳನ್ನು ಹಂಚಿಕೊಳ್ಳುವ ಮಾರ್ಗಗಳನ್ನು ಪ್ರತಿಬಂಧಿಸುತ್ತಿರುವ ಯಾವುದನ್ನು ಒಪ್ಪಲಾರರು. ಒತ್ತಾಯಪೂರ್ವಕವಾದ ಯಾವುದೇ ಬದಲಾವಣೆಗಳನ್ನು ತಮ್ಮ ನೆಲೆಯಲ್ಲಿ ವಿರೋಧಿಸುತ್ತಾರೆ. ಕಾರಣ ಉಜ್ಜ-ಕೆಂಚರು ವಾಸ್ತವಾದಿ ನೆಲೆಯಲ್ಲಿ ಆಲೋಚಿಸುತ್ತಾರೆ. ನಾಟಕದಲ್ಲಿ ನಿರೂಪಿತವಾಗುತ್ತಿರುವ ಈ ದ್ವಂದ್ವಗಳನ್ನು ಹೇಗೆ ಅರ್ಥೈಸಿಕೊಳ್ಳಬೇಕು. ಇದು ವ್ಯಕ್ತಿಯ ದ್ವಂದ್ವಗಳೋ, ವ್ಯಕ್ತಿಗಳು ಪ್ರತಿನಿಧಿಸುವ ಸಮುದಾಯಗಳಲ್ಲಿನ ದ್ವಂದ್ವಗಳೋ? ಉತ್ತರ ಖಚಿತವಿಲ್ಲ ಅಷ್ಟೇ. ನಾಟಕದ ಕೊನೆಯ ಭಾಗದಲ್ಲಿ ಉಜ್ಜ, ಕೆಂಚರ ಸಂಕಟಗಳು ಪ್ರಮಾಣ ಮಾಡಲಾಗದ ಸ್ಥಿತಿಯದ್ದು ಶರಣರಾಗುವುದಕ್ಕೂ ಹೆಂಡ-ಕಂಡ ಬಿಡುವುದಕ್ಕೂ ಇರುತ್ತಿರುವ ಸಂಬಂಧವನ್ನು ಅವರಿಗೆ ಒಪ್ಪಲಾಗುತ್ತಿಲ್ಲ. ಅಂತೆಯೇ ಸಂಕ್ರಾತಿಯ ದಿನದಂದು ಉಜ್ಜ ಪ್ರಮಾಣ ಮಾಡಲಾರದವನಾಗಿದ್ದಾನೆ. ಅದು ಅವನ ಮೌನ ಪ್ರತಿಭಟನೆಯೂ ಆಗಿರುವುದನ್ನು ಗಮನಿಸಬೇಕು. ಅದಕ್ಕೆಂದೇ ಉಷಾ ಉಜ್ಜನ ಬೆಂಬಲಕ್ಕೆ ನಿಲ್ಲುತ್ತಾಳೆ. ಆಗ ಉಷಾ ಕೆಲವರಿಂದ ಕೆಲವು ರೀತಿಯ ಪ್ರಮಾಣ ಮಾತ್ರ ಸಾಧ್ಯ ಅದು ಗೊತ್ತಾಗದ ನೀನೆಂಥ ಶರಣ ಎಂದು ಆಹಾರ ಸಂಸ್ಕೃತಿಯನ್ನು ಬಲವಂತವಾಗಿ ಬದಲಾಯಿಸುವ, ನಿಯಂತ್ರಿಸುವ ಧೋರಣೆಗೆ ಅವಳು ಪ್ರತಿರೋಧ ತೋರುತ್ತಾಳೆ. ಕೇವಲ ಪ್ರಮಾಣವೆಂಬುದು ವ್ಯಕ್ತಿಗಳ, ಸಮುದಾಯಗಳ ಸ್ಥಿತಿಗತಿಗಳನ್ನು ಬದಲಾಯಿಸುವುದಿಲ್ಲ ಎಂಬುದು ಉಷಾಳ ನಂಬಿಕೆ. ಯಾರಿಗೆ ಹೇಗೆ ಸಂತೋಷವಾಗಿರಲು ಸಾಧ್ಯವೋ ಹಾಗೆಯೇ ಇರುವುದಕ್ಕೆ ಬಿಡಬೇಕೆಂಬುದು ಅವಳ ಒತ್ತಾಯವಾದಂತೆ ಕಾಣಿಸುತ್ತದೆ. ಉಷೆ ಕೇವಲ ವ್ಯಕ್ತಿಯಾಗಿ ಅಲ್ಲ ಒಂದು ಸಮುದಾಯದ ದನಿಯಾಗಿ ಮಾತನಾಡುತ್ತಿದ್ದಾಳೆ. ಉಷೆಯು ತಾರ್ಕಿಕ ಉತ್ತರವನ್ನೇನು ನೀಡುತ್ತಿಲ್ಲ ಬದಲಾಗಿ ತಾರ್ಕಿಕ ಭಿನ್ನಮತವನ್ನು ಹೂಡುತ್ತಿದ್ದಾಳೆ. ಈ ಭಿನ್ನಮತವು ವ್ಯಕ್ತಿಯ ಆಯ್ಕೆಯನ್ನು ಬಲವಾಗಿ ಸಮರ್ಥಿಸುತ್ತದೆ. ಇದು ಲಂಕೇಶ್ ಅವರ ಬರವಣಿಗೆಯ ಸ್ವರೂಪವೂ ಹೌದು. ಅಂದರೆ ವ್ಯಕ್ತಿಗತ ನೆಲೆಯಿಂದ ಸಾಮುದಾಯಿಕ ನೆಲೆಗೆ ವಿಸ್ತರಿಸುವ ಸ್ವರೂಪವು ಇಲ್ಲಿದೆ. ಈ ನೆಲೆಯಲ್ಲಿ ಲಂಕೇಶ್ ಅವರು ಸ್ಥಾಪಿತ ಅಥವಾ ಪ್ರಬಲ ವ್ಯವಸ್ಥೆಗೆ ಪ್ರತಿರೋಧ ತೋರುತ್ತಲೇ, ವ್ಯವಸ್ಥೆಯೊಂದಿಗೆ ವಾಗ್ವಾದಕ್ಕೆ ಇಳಿಯುತ್ತಾರೆ.


ಮೇಷ್ಟ್ರು ಬಸವಣ್ಣ, ರುದ್ರ ಮತ್ತು ಉಷಾ-ಉಜ್ಜ ಇವರುಗಳನ್ನು ಮುಖಾಮುಖಿ ಮಾಡುತ್ತಾ ಆಹಾರ ಶುದ್ಧೀಕರಣ ಚಿಂತನೆಯ ವೈರುಧ್ಯಗಳನ್ನು ಸಂಕ್ರಾಂತಿ ಯಲ್ಲಿ ತೆರೆದಿಡುತ್ತಿದ್ದಾರೆ. ಯಾವುದೇ

ಜಾತಿ, ಧರ್ಮದವರು ಅನುಸರಿಸುವ ಸಹಜ ಆಹಾರ ಕ್ರಮ ವನ್ನು ನಿರಾಕರಿಸುವ, ನಿಯಂತ್ರಿಸುವ, ಕೀಳೆಂದು ಭಾವಿಸುವ ಮೌಲ್ಯ ವ್ಯವಸ್ಥೆಯ ಹಿತಾಸಕ್ತಿಗಳೇನು ಎಂಬುದನ್ನು ನಾಟಕದಲ್ಲಿ ಬಯಲು ಮಾಡಿದ್ದಾರೆ. ಸಂಕ್ರಾಂತಿಯ ಈ ಆಹಾರ ಶುದ್ಧೀಕರಣ ಸಮಸ್ಯೆಯನ್ನು ವರ್ತಮಾನದಲ್ಲಿ ಇಟ್ಟು ನೋಡುವ ಸಾಧ್ಯತೆ ಇರುವ ಕಾರಣಕ್ಕಾಗಿ ಲಂಕೇಶ್ ಮತ್ತು ಸಂಕ್ರಾಂತಿ ಮುಖ್ಯವಾಗುತ್ತದೆ. ಸಂಕ್ರಾಂತಿ ನಾಟಕವು ಸದಾ ವರ್ತಮಾನದ ಹಲವು ತಲ್ಲಣಗಳಿಗೆ ಪ್ರಶ್ನೆಗಳನ್ನು, ಉತ್ತರಗಳನ್ನು ಅಡಗಿಸಿಕೊಂಡಿದೆ. ಲಂಕೇಶ್ ಮೇಷ್ಟ್ರು ಯಾಕೆ ಮುಖ್ಯ ಎನ್ನುವುದಕ್ಕೆ ಸಂಕ್ರಾಂತಿಯನ್ನೊಮ್ಮೆ ಓದಲೇಬೇಕು. ಈ ಮೂಲಕ ವರ್ತಮಾನವನ್ನು ಓದುವ ನಮ್ಮ ಗ್ರಹಿಕೆಯನ್ನು, ತಿಳುವಳಿಕೆಯನ್ನು ಬದಲಾಯಿಸಿಕೊಳ್ಳಬಹುದು. ಯಾಕೆ ಈ ಮಾತು ಹೇಳುತ್ತಿರುವುದೆಂದರೆ ವರ್ತಮಾನದಲ್ಲಿ ನಡೆಯುತ್ತಿರುವ ಗೋಮಾಂಸ ರಾಜಕಾರಣಕ್ಕೂ ನಮ್ಮ ಚರ್ಚೆಯನ್ನು ವಿಸ್ತರಿಸುವುದಕ್ಕೆ, ಭಿನ್ನಮತ ಹೂಡುವುದಕ್ಕೆ ಸಂಕ್ರಾತಿಯಲ್ಲಿಯ ಆಹಾರ ಶುದ್ಧೀಕರಣ ಪ್ರಕರಣವನ್ನು ಗಮನಿಸುವುದು ಉತ್ತಮ. ಹೀಗಾಗಿಯೇ ಲಂಕೇಶ್ ಮೇಷ್ಟ್ರು ಅವರ ಬರವಣಿಗೆಗಳು ವಾಸ್ತವವಾದಿ ಚಿಂತನೆಯ ನೆಲೆಯ ಚಹರೆಗಳನ್ನು ತನ್ನೊಳಗೆ ಆಹ್ವಾನಿಸಿಕೊಂಡಿರುತ್ತವೆ. ಕಾರಣ ಅವು ಹಲವು ಬಾರಿ ಅವರ ಬರವಣಿಗೆಗಳು ಓದುಗರಿಗೆ ಆಪ್ತವೆನಿಸಿ ಬಿಡುತ್ತವೆ.

ಜಿನ್ ಅಶೋಕ್ ಪಟೇಲ್
ಪಟೇಲ್ ಎಲೆಕ್ಟ್ರಿಕಲ್ಸ್
ಕೊಟ್ಟೂರು ರೋಡ್
ಹರಪನಹಳ್ಳಿ ೫೮೩ ೧೩೧, ದಾವಣಗೆರೆ
ಮೊ. ೯೯೦೧೭೦೩೦೫೦, ೯೪೮೦೬೬೨೧೪೧



ರಾಜರತ್ನಂ ಅವರ ಸಾಹಿತ್ಯ ಪರಿಚಾರಿಕೆ



■ ಡಿ.ವಿ. ಪ್ರಹ್ಲಾದ್

ಮಲ್ಲೇಶ್ವರ ಬೆಂಗಳೂರಿನ ಹೆಮ್ಮೆಯ ಬಡಾವಣೆ. ಇಲ್ಲಿನ ಎಂ.ಇ.ಎಸ್. ಕಾಲೇಜು ಕೂಡ ಒಂದು ಹೆಸರಾಂತ ಶಿಕ್ಷಣ ಸಂಸ್ಥೆ. ಇದೇ ಮಲ್ಲೇಶ್ವರದವರೇ ಆಗಿ ಬಾಳಿ ಬದುಕಿದ ಕನ್ನಡದ ಪರಿಚಾರಕ ಡಾ. ಜಿ.ಪಿ.ರಾಜರತ್ನಂ ಜನ್ಮಶತಮಾನೋತ್ಸವವನ್ನು ಈ ಕಾಲೇಜಿನಲ್ಲಿ ನಡೆಸುತ್ತಿರುವುದು ಅರ್ಥಪೂರ್ಣವಾದದ್ದು. ರಾಜರತ್ನಂ ಉಸಿರು ಇಲ್ಲಿನ ಗಂಧಗಾಳಿಯಲ್ಲಿದೆ. ಅವರು ಹೆಜ್ಜೆಯೂರಿ ನಡೆದಾಡಿದ ಇಲ್ಲಿನ ರಸ್ತೆಗಳು, ಅವರ ಮಾತಿಗೆ, ಬರಹಕ್ಕೆ ಸಾಕ್ಷಿಯಾದ ಇಲ್ಲಿನ ಜನಗಳು ಅವರನ್ನು ತಮ್ಮ ಮನಸ್ಸಿನಲ್ಲಿ ಜೀವಂತಗೊಳಿಸಿಕೊಂಡಿದ್ದಾರೆ. ಈ ಕಾಲೇಜು ಅವರ ಕ್ರಿಯಾಕ್ಷೇತ್ರದ ಒಂದು ಭಾಗವಾಗಿತ್ತು. ಅವರಿಗೆ ಅರವತ್ತು ತುಂಬಿದಾಗಲೂ ಈ ಕಾಲೇಜು ಅವರನ್ನು ಗೌರವಿಸಿ ಹೆಮ್ಮೆಪಟ್ಟಿತ್ತು. ನನ್ನ ತಾಯಿನಾಡು ಕೂಡ ಮಲ್ಲೇಶ್ವರವೇ. ಇಲ್ಲಿ ಹುಟ್ಟಿ ಬೆಳೆದ ನನಗೆ ಗಲ್ಲಿಗಲ್ಲಿಯೂ ಅಂಗೈ ಗೆರೆಯ ಹಾಗೆ ಪರಿಚಿತ ವಾದದ್ದು. ಆದ್ದರಿಂದ ನನ್ನ ಪ್ರೀತಿಯ ಮಲ್ಲೇಶ್ವರದ ಕನ್ನಡದ ಕಟ್ಟಾಳು ರಾಜರತ್ನಂ ಅವರ 'ಸಾಹಿತ್ಯ ಪರಿಚಾರಿಕೆ' ಕುರಿತು ಹಂಚಿಕೊಳ್ಳುವುದು ನನಗೆ ಸಿಕ್ಕ ಗೌರವವೆಂದೇ ಭಾವಿಸುತ್ತೇನೆ.

ರಾಜರತ್ನಂ ಥರದ ವ್ಯಕ್ತಿಗಳು ನಮ್ಮ ಭಾಷೆಗೆ ಕೊಟ್ಟ ಕೊಡುಗೆಯನ್ನು ನಾವು ಇಂಥ ಸಂಕಿರಣಗಳಲ್ಲಿ ಖಂಡ ಖಂಡವಾಗಿ ಅವರ ನಾಟಕ, ಕಾವ್ಯ, ಪರಿಚಾರಿಕೆ, ಮಕ್ಕಳ ಸಾಹಿತ್ಯ, ಅಧ್ಯಾಪನ

ಹೀಗೆ ಬಿಡಿಬಿಡಿಸಿ ನೋಡುವ ಕ್ರಮ ಬೇರೆಯಾಗಬೇಕು ಅನ್ನಿಸುತ್ತದೆ. ಇಂಥದ್ದು chemistry ಅಥವಾ ಇತರ ವಿಜ್ಞಾನ ವಿಷಯಕ್ಕೆ ಸರಿ. ಹೀಗೆ ತುಂಡುತುಂಡಾಗಿ ನೋಡುವುದಕ್ಕಿಂತಲೂ ಹೆಚ್ಚು organic ಆದ, ಸಮಗ್ರವೆನ್ನಿಸುವ ಹಾಗೆ ನೋಡಬೇಕು ರಾಜರತ್ನಂ ಅವರ ಬದುಕು, ಅದರ ಬಡತನ-ಸಿರಿತನ, ಹೋರಾಟ-ಮಾಗುವಿಕೆಯನ್ನು. ತಾನು ಪಡೆದದ್ದಕ್ಕೆ ಅದರ ದುಪ್ಪಟ್ಟು ಮುಪ್ಪಟ್ಟು ಬಡ್ಡಿ ಸಮೇತ ತನ್ನ ಭಾಷೆಗೆ, ತನ್ನ ಸಮುದಾಯಕ್ಕೆ ಕಡ ತೀರಿಸಿದರು. ಹಾಗೆ ಕೊಟ್ಟಿದ್ದು ಕೊಡುತ್ತಲೇ ಬದುಕಿ ಮರೆಯಾದದ್ದು ಈ ಕಾಲದ ಮತಲಬೀ ಮನಸ್ಸುಗಳಿಗೆ ನಾಟುವುದು ಕಷ್ಟ. ಕೆಲವರು ಕೊಡುವುದನ್ನು ಪಡಕೊಂಡು ಬಂದಿರುತ್ತಾರೆ. ಅಂಥವರ ಒಂದು ಪಡೆಯೇ ನಮ್ಮಲ್ಲಿ ಹುಟ್ಟಿಬಂದದ್ದು ಕನ್ನಡದ ಪುಣ್ಯ.

ಸಾಹಿತ್ಯ ಹಾಗೂ ಭಾಷೆಗೆ ಸಂಬಂಧಿಸಿದ ಹೊಸ ಬೆಳೆಯನ್ನು ಗುರುತಿಸುವ, ಪ್ರಕಟಿಸುವ, ಪ್ರೋತ್ಸಾಹಿಸುವ, ಬರೆದದ್ದು, ಬರೆಯಬೇಕಾದ್ದನ್ನು ಮುಂಗಾಣುವ, ತಲುಪಬೇಕಾದ ಎಡೆಗಳಿಗೆ ತಲುಪಿಸುವ ಜಾಣ್ಮೆಯನ್ನು, ಸಾಹಿತ್ಯದ ಪ್ರಚಾರವನ್ನು ತನ್ನ ಎಂದಿನ ವಿನಯದಿಂದ ರಾಜರತ್ನಂ 'ಸಾಹಿತ್ಯ ಪರಿಚಾರಿಕೆ' ಅಂತ ಕರೆದರು. ಈ ಕುರಿತು ಅವರ ಕಡುಕಷ್ಟದ ದಿನಗಳ ಹಳೆಯ ಗೆಳೆಯ ದಿ. ಎಂ.ವಿ. ಸೀತಾರಾಮಯ್ಯ ಹೀಗೆ ವಿವರಿಸುತ್ತಾರೆ: ''ಬಿ.ಎಂ.ಶ್ರೀ., ಡಿ.ವಿ.ಜಿ., ಎ.ಆರ್.ಕೃ. ಮುಂತಾದ ನಮ್ಮ ಗುರುವರ್ಗ ದವರು ಹಾಕಿಕೊಟ್ಟ ಹೆದ್ದಾರಿಯಲ್ಲಿ ರಾಜರತ್ನಂ ಅವರು ನಡೆದು, ಸರ್ವತೋಮುಖವಾದ ರೀತಿಯಲ್ಲಿ ಸಾಹಿತ್ಯ ಸೇವೆ ಮಾಡಿದರು. ಅವರಂತೆ, ಮುಖ್ಯವಾಗಿ ಶ್ರೀಯವರಂತೆ ನಾಡನ್ನೆಲ್ಲಾ ಸುತ್ತಿದರು. ಕನ್ನಡದ ಕೃತಿಗಳನ್ನು ಹಳಗನ್ನಡದವು, ಹೊಸಗನ್ನಡದವು, ತಮ್ಮವು, ಇತರರದ್ದು ಎಲ್ಲವನ್ನೂ ಜನಸಾಮಾನ್ಯಕ್ಕೆ ಪರಿಚಯ ಮಾಡಿಕೊಡುವ ಕೈಂಕರ್ಯವನ್ನು ಮಾಡಿದರು. ರಾಜರತ್ನಂ ಮಾಡಿದ ಪ್ರಮಾಣದಲ್ಲಿ, ರೀತಿಯಲ್ಲಿ ಇತರರು ಮಾಡಿಲ್ಲ ಎಂದು ನನಗೆ ತೋರುತ್ತದೆ. ಈ ತಮ್ಮ ಕೆಲಸವನ್ನು ಇತರರಂತೆ ಸಾಹಿತ್ಯ ಪ್ರಚಾರ ಎಂದು ಕರೆದುಕೊಳ್ಳಲಿಲ್ಲ. 'ಸಾಹಿತ್ಯ ಪರಿಚಾರಿಕೆ' ಎಂದು ಕರೆದುಕೊಂಡರು. ಇದು ಅವರು ವಿನಯದಿಂದ ಹೇಳಿಕೊಂಡ ಮಾತು. ಆ ಮಾತಿನ ಅರ್ಥ ಛಾಯೆಯಲ್ಲಿಯೇ ಒಂದು ವಿನಯದ, ಪವಿತ್ರತೆಯ, ನಿರಹಂಕಾರದ ಭಾವ ಅಡಗಿದೆ.'' (ರಾಜಮಾರ್ಗ ಪು: ೩೮)

ಸ್ವತಃ ರಾಜರತ್ನಂ ೧೯೭೮ರಲ್ಲಿ ದೆಹಲಿಯಲ್ಲಿ ನಡೆದ ೫೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ತಮ್ಮ ಸಾಹಿತ್ಯ ಪರಿಚಾರಿಕೆ ಕುರಿತು ಹೀಗೆ ವಿವರಿಸಿದ್ದಾರೆ: ''ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೊಂಚ ಕೃಷಿ ಮಾಡಿದ್ದೇನೆ. ಅದರ ಜೊತೆಗೆ ಅದಕ್ಕಿಂತ ಅಧಿಕವಾಗಿ ಇತರ ಕಾಲ ದೇಶ ಭಾಷೆ ಸಾಹಿತ್ಯಗಳಿಂದ ವಿಧವಿಧವಾದ ಪಕ್ವಾನ್ನಗಳನ್ನು ತಂದು ನಮ್ಮ ಕನ್ನಡ ಜನಕ್ಕೆ ಕೈತುತ್ತು ಹಾಕಿದ್ದೇನೆ. ಐವತ್ತು ವರ್ಷಗಳಿಂದ ನಾನು ನಡೆಸುತ್ತಿರುವ ಈ 'ಸಾಹಿತ್ಯ ಪರಿಚಾರಿಕೆ'ಯಿಂದ ಸುಪ್ರೀತರಾಗಿ ನಮ್ಮ ಜನ ನನ್ನನ್ನು ಎತ್ತಿಕೊಂಡಿದ್ದಾರೆ. ದೈವ ಅವರನ್ನು ಒಪ್ಪಿದೆ. ಹಾಗಾಗಿ ನಾನು ಇಲ್ಲಿ ಅಧ್ಯಕ್ಷನಾಗಿದ್ದೇನೆ. ನನ್ನ ಪರಿಚಾರಿಕೆಗೆ ನಮ್ಮ ಜನ ತಮ್ಮ ಅಂಗೀಕಾರ ಮುದ್ರೆಯನ್ನು ಈ ಅಧ್ಯಕ್ಷತೆಯ ಮೂಲಕ ಒತ್ತಿದ್ದಕ್ಕಾಗಿ ನಿಮಗೆಲ್ಲರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳು.''

ತಮ್ಮನ್ನು ತಾವು ಕನ್ನಡ ಸಾಹಿತ್ಯ ಪರಿಚಾರಕ ಅಂತ ಗುರುತಿಸಿಕೊಳ್ಳುವಲ್ಲಿ ಅವರಿಗೊಂದು ಹೆಮ್ಮೆ ಇತ್ತು. ಹಾಗೇ ಅವರಿಗೆ ಮೈಸೂರು ವಿಶ್ವವಿದ್ಯಾಲಯ ಡಾಕ್ಟರೇಟ್ ಪ್ರದಾನ ಮಾಡಿದಾಗ ಅವರು ಹೇಳಿದ್ದು- ೪೫ ವರ್ಷಗಳ ಹಿಂದೆ ನಾನು ಮೂರನೆ ದರ್ಜೆಯಲ್ಲಿ ಎಂ.ಎ. ಪದವಿ ಪಡೆದವನು. ಆಗ ಪಠ್ಯಗಳನ್ನು ಚೆನ್ನಾಗಿ ಓದದೇ ಇದ್ದದ್ದಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡ ಹಾಗೆ

ಕಳೆದ ೪೫ ವರ್ಷಗಳಿಂದ ಇಂದಿನವರೆಗೂ ಶ್ರದ್ಧೆಯಿಂದ ಸಾಹಿತ್ಯ ಪರಿಚಾರಿಕೆ ಮಾಡಿಕೊಂಡು ಬಂದಿದ್ದೇನೆ. ಬರೆದವರಿಗೂ ಇತರರಿಗೂ ನಡುವೆ ಸಂಪರ್ಕ ಸೇತುವೆಯಾಗಿ ಸಾಹಿತ್ಯ ಪರಿಚಾರಕರ ಪಡೆಯೊಂದು ಸಜ್ಜಾಗಬೇಕು. ಕನ್ನಡದ ಸಾಹಿತ್ಯ ಪರಿಚಾರಕರ ಪರಂಪರೆ ಕಳೆದ ಶತಮಾನದ ಮೊದಲ ಭಾಗದಲ್ಲಿ ನವೋದಯದ ನಾಡು ನುಡಿಗಳ ಬಗೆಗಿನ ಅಭಿಮಾನ, ಅಸ್ಮಿತೆಯ ಉತ್ಸಾಹ ಹುಟ್ಟಿದ ಸಂದರ್ಭದಿಂದ ಆರಂಭಗೊಂಡಿತು. ಸಾವಿರದ ಒಂಬೈನೂರರ ಮೊದಲ ದಶಕದಲ್ಲಿ ಕನ್ನಡದ ಭಾಷೆಯ ಬಗ್ಗೆ ಹೆಮ್ಮೆ ಪಡುವ ಕನ್ನಡದ ರಾಷ್ಟ್ರೀಯತೆಯೊಂದು ರೂಪುಗೊಂಡ ಸಂಧಿ ಕಾಲ. ಹೊಸ ಹೊಸ ಕನಸು ಹೊತ್ತು ನಮ್ಮ ಭಾಷೆ, ನಾಡಿನ ಹೊಸ ವಿಸ್ತಾರಗಳನ್ನು ಕಟ್ಟಿಕೊಳ್ಳುವ ಕಾಲವಾಗಿತ್ತು. ಮೈಸೂರು ಪ್ರಾಂತದ ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡದ ವಿದ್ಯಾವರ್ಧಕ ಸಂಘ ಇವೆರಡೇ ಆ ಕಾಲದ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರವಾಗಿತ್ತು.

ಸಾಹಿತ್ಯ ಜನಮುಖಿಯಾಗಬೇಕೆಂಬ ಆಶಯವನ್ನು ಆ ಕಾಲದ ಲೇಖಕರು ತಮ್ಮ ಸಹಜವಾದ ಒಂದು ಕ್ರಿಯೆಯ ಹಾಗೆ ಪಾಲಿಸಿದರು. ಸಾಹಿತ್ಯ ಸಾಮಾನ್ಯ ಜನಗಳಿಗೆ ತಲುಪುವ ಬಗೆಗಳನ್ನು ಪ್ರಾಮಾಣಿಕವಾಗಿ ಪ್ರಯೋಗಿಸಿದರು. ಅದರಲ್ಲಿ ಯಶಸ್ವಿಯೂ ಆದರು. ಆ ಕಾಲದ ಯಾವುದೇ ಹಿರಿಯ ಲೇಖಕರನ್ನು ಉದಾಹರಣೆಗೆ ಗಮನಿಸಿದರೂ ಅವರು ಬಹುಶ್ರುತರೂ, ಬಹುಮುಖಿಗಳೂ, ಮೊದಲಿಗೆ ಮನುಷ್ಯರೂ ಆಗಿದ್ದರು. ಗೋವಿಂದ ಪೈ, ಡಿವಿಜಿ, ಮಾಸ್ತಿ, ರಾಜರತ್ನಂ ಇವರುಗಳಿಗೆ ಈ ಕಾಲದ ಹಾಗೆ ಸಾಹಿತ್ಯದ ಸಾಮುದಾಯಿಕ ಆಶಯಗಳು ಘೋಷಣೆಯಾಗಿ ತಮ್ಮ ವೃತ್ತಿ ಜೀವನದ ಏಣಿ ಮೆಟ್ಟಿಲಾಗಿರಲಿಲ್ಲ. ಜನಮುಖಿತ್ವವನ್ನು ಅಬ್ಬರಿಸುವುದಕ್ಕೂ ಸಹಜವಾಗಿ ಜೀವಿಸುವುದಕ್ಕೂ ದೊಡ್ಡ ಅಂತರವಿದೆ.

ರಾಜರತ್ನಂ ಈ ಸಾಲಿನ ಜನ. ಶಿಶುಗೀತೆ ಬರೆದವರಿಗೆ ಪುಸ್ತಕ ಹೊತ್ತು ಮಾರುವುದಾಗಲಿ, ತಮ್ಮ ಸಹಲೇಖಕರನ್ನು ಪ್ರಚುರಗೊಳಿಸುವುದಾಗಲಿ, ಹಳಗನ್ನಡದ ಪ್ರಚಾರವಾಗಲೀ ತನ್ನ ದಾರಿಗೆ ಅಗತ್ಯವಲ್ಲದ ಕೆಲಸ ಅನ್ನಿಸಲಿಲ್ಲ. ಇವತ್ತು ಕನ್ನಡ ಲೇಖಕರು ಉಳಿದ ಕ್ಷೇತ್ರದ expertಗಳ ಹಾಗೆ ಆಗುವ ಹವಣಿಕೆಯಲ್ಲಿ ಎಲ್ಲೂ ಸಲ್ಲದ ವ್ಯಕ್ತಿಗಳಾಗುತ್ತಿದ್ದಾರೆ. ನವ್ಯ ಕಾಲದ perfectionist ಧೋರಣೆ, ದಲಿತ-ಬಂಡಾಯದ ಹೇಗೆ ಬರೆದರೂ ನಡೆಯಬಹುದೆನ್ನುವ ಉಡಾಫೆತನ ಇವತ್ತಿನ ಕನ್ನಡ ಲೇಖಕರ ದುಃಸ್ಥಿತಿಗೆ ಕಾರಣ.

೧೯೧೮ರಲ್ಲಿ ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳನ್ನು ಕೇಂದ್ರವಾಗಿಟ್ಟುಕೊಂಡು ಕರ್ನಾಟಕ ಸಂಘವನ್ನು ಆರಂಭಿಸಿದರು. ಕನ್ನಡವನ್ನು ಮಾತಾಡಿದರೆ, ಕೇಳಿದರೆ, ಬರೆದರೆ, ಓದಿದರೆ ಕೀಳು ಎನ್ನುವ ಮನೋಭಾವ ಪ್ರಚಲಿತವಾಗಿದ್ದ ಕಾಲದಲ್ಲಿ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘವು ಜನ್ಮತಳೆಯಿತು.

ಆ ಸಂಘದ ಚಟುವಟಿಕೆಗಳು ಮೂರು ವಿಧವಾಗಿತ್ತು.

೧. ವಿದ್ಯಾರ್ಥಿಗಳಲ್ಲಿ ಜ್ಞಾನ ಉತ್ಸಾಹ ಹೆಚ್ಚಿಸುವ ಸಲುವಾಗಿ ಸ್ಪರ್ಧೆ, ಚರ್ಚಾಕೂಟ ಹಾಗೂ ಅಭ್ಯಾಸ ಗೋಷ್ಠಿಗಳನ್ನು ನಡೆಸುವುದು

೨. ವಿದ್ಯಾರ್ಥಿ ಹಾಗೂ ಸಾರ್ವಜನಿಕರಿಗೆ ಉಪಯುಕ್ತವೆನ್ನಿಸುವ ಸಭೆ, ಉಪನ್ಯಾಸ, ಉತ್ಸವ ಮುಂತಾದವು.

ಗ್ರಂಥ ಪ್ರಕಟಣೆ

ಸಂಘ ಪ್ರಾರಂಭವಾದ ಸಂದರ್ಭ ತುಂಬಾ ಸಂಕೀರ್ಣವಾಗಿತ್ತು. ಕನ್ನಡ ನಾಡು ಹಂದು ಹಂಚಿಹೋಗಿತ್ತು. ಕನ್ನಡ ನುಡಿ ಭಿಕ್ಷೆ ಎತ್ತುತ್ತಿತ್ತು. ಕನ್ನಡಿಗರನ್ನು ಕನ್ನಡತನವನ್ನು ಒಂದುಗೂಡಿಸುವ ಪ್ರಯತ್ನ ಆಗ ತಾನೆ ಪ್ರಾರಂಭವಾಗಿತ್ತು. ಮೈಸೂರಿನಲ್ಲಿ ಬಿ.ಎಂ.ಶ್ರೀ. ಅವರ ಹಿರಿತನದಲ್ಲಿ 'ತಳಿರು' ತಂಡ, ಮಂಗಳೂರಿನಲ್ಲಿ ತೆಂಕಣ ಗಾಳಿಯಾಟದ ಪಂಜೆ ಮಂಗೇಶರಾಯರ ಹಿರಿತನದಲ್ಲಿ 'ಮಿತ್ರ ಮಂಡಳಿ', ಧಾರವಾಡದಲ್ಲಿ ವರಕವಿ ದ.ರಾ. ಬೇಂದ್ರೆ ಅವರ ಹಿರಿತನದಲ್ಲಿ 'ಗೆಳೆಯರ ಗುಂಪು' ಹೊಸಗನ್ನಡ ಅರುಣೋದಯವನ್ನು ಹಾಡುತ್ತಿದ್ದವು. ದೇಶಾಭಿಮಾನ, ಭಾಷಾಭಿಮಾನ ಎರಡೂ ಒಟ್ಟಾಗಿ ಎಲ್ಲ ಕಡೆಗೂ ಹರಡುತ್ತಿತ್ತು.

ಎ.ಆರ್. ಕೃಷ್ಣಶಾಸ್ತ್ರಿಗಳ ಮತ್ತೊಂದು ಮಹತ್ತರ ಕೊಡುಗೆ ಎಂದರೆ 'ಹೊಸಗನ್ನಡ ಸಾಹಿತ್ಯದ ತೊಟ್ಟಿಲು' ಎಂದೇ ಗುರುತಿಸಲ್ಪಟ್ಟ 'ಪ್ರಬುದ್ಧ ಕರ್ನಾಟಕ' ಸಾಹಿತ್ಯ ಪತ್ರಿಕೆ. ಆ ಕಾಲಕ್ಕೆ ಕೃಷ್ಣಶಾಸ್ತ್ರಿಗಳ ದೂರಗಾಮಿತ್ವ ಎಷ್ಟು ಉದಾತ್ತವಾಗಿತ್ತೆಂದು ಇದರಿಂದ ಅರ್ಥವಾಗುತ್ತದೆ. 'ಪ್ರಬುದ್ಧ ಕರ್ನಾಟಕ' ಕನ್ನಡದ ಅನೇಕ ಮುಖ್ಯ ಲೇಖಕರನ್ನು ಬೆಳಕಿಗೆ ತಂದು ಪೋಷಿಸಿ ಬೆಳೆಸಿದಂಥದ್ದು. ಹಾಗೆಯೇ ಒಂದು ಅಭಿರುಚಿಯುಳ್ಳ ಸಾಹಿತ್ಯ ಪತ್ರಿಕೆಯ ಮಾದರಿಯನ್ನು ತನ್ನ ಮುಂದಿನ ತಲೆಮಾರಿಗೆ ಅದು ರೂಪಿಸಿಕೊಟ್ಟಿತ್ತು. ಈಗಿನ ಎಲ್ಲಾ ಸಾಹಿತ್ಯ ಪತ್ರಿಕೆಗಳು ಅದಕ್ಕೆ ಕೃತಜ್ಞವಾಗಿರಬೇಕು. ಹದಿಮೂರು ವರ್ಷಗಳು ಅದನ್ನು ತಮ್ಮ ಕರ್ಣಾಟಕ ಸಂಘದಿಂದ ಹಾಗೂ ವೈಯಕ್ತಿಕ ಶ್ರಮದಿಂದ ಎ.ಆರ್.ಕೃಷ್ಣಶಾಸ್ತ್ರಿಗಳು ನಡೆಸಿದರು. ನಂತರ ಅದನ್ನು ಮೈಸೂರು ವಿಶ್ವವಿದ್ಯಾಲಯ ವಹಿಸಿಕೊಂಡು ಮುಂದುವರೆಸಿತು. ಅವರೆ ಕ್ರಾಂತಿಗಿಂತ ವಿಕಾಸದಲ್ಲಿ ತನಗೆ ನಂಬಿಕೆ; ಪ್ರಬುದ್ಧ ಕರ್ನಾಟಕ ಪತ್ರಿಕೆಯನ್ನು ಒಂದು ಮರಕ್ಕಿಂತ ಮೆಳೆಯ ಹಾಗೆ ಬೆಳೆಸಿಕೊಂಡು ಬರಲಾಯಿತು ಎಂದು ಎ.ಆರ್.ಕೃ. ವಿವರಿಸುತ್ತಾರೆ. ನಿಜ ಅರ್ಥದಲ್ಲಿ ಹಲವು ಧ್ವನಿಗಳ ಒಂದು ಸೃಜನಶೀಲ ಮೆಳೆಯ ಬೆಳೆ ಪ್ರಬುದ್ಧ ಕರ್ನಾಟಕವು. ಇದರಲ್ಲಿ ಪ್ರಕಟಿಸಿದ ಬರೆಹಗಳನ್ನೇ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದು, ಒಟ್ಟು ೪೭ ಪುಸ್ತಕಗಳಾದವು. ಜೊತೆಗೆ ನಾಲ್ಕು ಪುಸ್ತಕಗಳನ್ನು ಸ್ವತಂತ್ರವಾಗಿ ಪ್ರಕಟಿಸಿ ಚಂದಾದಾರರಿಗೆ ಹಂಚಿದರು. ಒಟ್ಟು ಐವತ್ತೊಂದು ಪುಸ್ತಕಗಳ ಮೂಲಕ ತನ್ನ ಕಾಲದ ಸಾಹಿತ್ಯದ ಎಲ್ಲ ಹಿರಿ-ಕಿರಿಯರನ್ನು ಒಳಗೊಂಡು ಬೆಳಗಿತು ಕರ್ನಾಟಕ ಸಂಘ.

ಕೃಷ್ಣ ಪರ್ವ, ರತ್ನ ಪರ್ವ

ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಕೃಷ್ಣಪರ್ವದಲ್ಲಿ ಒಟ್ಟು ೫೧ ಪುಸ್ತಕಗಳು ಪ್ರಕಟಗೊಂಡವು. ಡಿವಿಜಿ, ಬಿ.ಎಂ.ಶ್ರೀ., ಎ.ಆರ್.ಕೃ, ಮಾಸ್ತಿ, ಎಂ.ಆರ್. ಶ್ರೀನಿವಾಸ ಮೂರ್ತಿ, ಕುವೆಂಪು, ವಿ.ಸೀತಾರಾಮಯ್ಯ, ಟಿ.ಎಸ್. ವೆಂಕಣ್ಣಯ್ಯ, ಎ.ಎನ್. ಮೂರ್ತಿ ರಾವ್, ಜಿ.ಪಿ. ರಾಜರತ್ನಂ, ನಾ. ಕಸ್ತೂರಿ ಮುಂತಾದವರ ಪುಸ್ತಕಗಳು ಪ್ರಕಟಗೊಂಡವು. ಕೆ.ಎಸ್.ನ. ಅವರ ಮೊದಲ ಕೃತಿ 'ಮೈಸೂರು ಮಲ್ಲಿಗೆ' ಪುಸ್ತಕ ಪ್ರಕಟಗೊಂಡದ್ದು ಈ ಕಾಲದಲ್ಲಿ.

೧೯೪೪ರಲ್ಲಿ ಕರ್ಣಾಟಕ ಸಂಘದ ಪ್ರಕಟಣೆಯ ಕಾರ್ಯ ನಿಂತಿತು. ಪುಸ್ತಕ ಪ್ರಕಟಣೆಯ ಪಾಲಿಗೆ ೧೯೫೭ರ ತನಕ ಹದಿಮೂರು ವರ್ಷಗಳ ವನವಾಸ. ಆದರೆ ಕರ್ಣಾಟಕ ಸಂಘದ ವಿವಿಧ ಕಾರ್ಯಕ್ರಮಗಳು ನಡೆಯುತ್ತಿದ್ದವು.

ಸ್ವಾತಂತ್ರ್ಯ ಹೋರಾಟ

ಇನ್ನು ಮುಂದಿನದ್ದು ರತ್ನ ಪರ್ವ. ರಾಜರತ್ನಂ ಕರ್ನಾಟಕ ಸಂಘದ ಸಾರಥ್ಯ ವಹಿಸಿಕೊಂಡ ಸಂದರ್ಭದಲ್ಲಿ ದೇಶವು ಬಿಡುಗಡೆಯ ಹೋರಾಟದ ಅಗ್ನಿಪರೀಕ್ಷೆಯಲ್ಲಿ ಹಾದು ಅದು ಮುಗಿದ ನಂತರ, ಸಾಹಿತ್ಯ ಜಗತ್ತಿನಲ್ಲಿ ಹೊಸ ಅಲೆಯೊಂದು ಎದ್ದಿತ್ತು. ಪ್ರಗತಿಶೀಲ ಸಾಹಿತ್ಯ ಚಳವಳಿ ನಾಡಿನಾದ್ಯಂತ ಕೇಳುತ್ತಿತ್ತು. ಅನಕೃ ಅವರ ನೇತೃತ್ವದಲ್ಲಿ ಹೊಸ ಪೀಳಿಗೆಯೊಂದು ಸೃಷ್ಟಿಯಾಗುತ್ತಿತ್ತು. ಭಾಷಾವಾರು ಪ್ರಾಂತರಚನೆಯ ಕಾವೇರುತ್ತಿತ್ತು. ಸ್ವಾತಂತ್ರ್ಯದ ಕನಸಿನ ಭ್ರಮೆ ಕರಗುತ್ತಿತ್ತು. ವಾಸ್ತವ ನಿರಾಶಾದಾಯಕವಾಗಿತ್ತು.

ಚಿ.ಶ್ರೀನಿವಾಸರಾಜು ಅವರು ಹೇಳುತ್ತಾರೆ, ''ಬೆಂಗಳೂರಿನಲ್ಲೇ ಒಂದು ಕಡೆ ಅನಕೃ ಅವರ ಪ್ರಗತಿಶೀಲ ಚಳವಳಿಯ ಕಾವು ಏರಿದ್ದರೆ, ಇನ್ನೊಂದು ಕಡೆ ರಾಜರತ್ನಂ ಸದ್ದು ಗದ್ದಲವಿಲ್ಲದೆ ಕ್ರಿಯಾತ್ಮಕವಾಗಿ ಗಂಭೀರವಾಗಿ ತಮ್ಮ ಪ್ರತಿಕ್ರಿಯೆಯನ್ನು ಕರ್ನಾಟಕ ಸಂಘದ ಪ್ರಕಟಣೆಗಳಿಂದ ನೀಡಿದರು. ಈ ಸಮುದಾಯದಲ್ಲಿ ರಾಜರತ್ನಂ ಗರಡಿಯಲ್ಲಿ ತಯಾರಾದ ಬರಹಗಾರರು ಹೊಸಗನ್ನಡ ಸಾಹಿತ್ಯಕ್ಕೆ ವೈವಿಧ್ಯವನ್ನು, ಶಕ್ತಿಯನ್ನು ನೀಡಿದರು.''

ರಾಜರತ್ನಂ ಅವರ ಪುಸ್ತಕ ಪ್ರಕಟಣೆಯ ಮೊತ್ತಮೊದಲ ಅನುಭವ ಹೀಗಿದೆ; ೧೯೩೦ರ ಸುಮಾರಿಗೆ ಅವರು ತಮ್ಮ ಕಾಲೇಜು ಯೂನಿಯನ್ ಪತ್ರಿಕೆಗಾಗಿ ಬರೆದ ಫ್ರೆಂಚ್ ಕತೆಗಳ ರೂಪಾಂತರದ ನಾಟಕಗಳಾದ 'ಸೋಲಿಗರ ಸಿದ್ದ' ಮತ್ತು 'ನೆನಪು' ಎಂಬ ಎರಡು ನಾಟಕ ಕೃತಿಗಳನ್ನು ಗೆಳೆಯರು ಸೇರಿ ಕಟ್ಟಿಕೊಂಡಿದ್ದ 'ತರುಣರ ದಂಡು' ಮೂಲಕ ಪುಸ್ತಕವಾಗಿ ಪ್ರಕಟಿಸಿದರು. ಒಂದು ನೂರು ಪ್ರತಿಗಳು ಮುದ್ರಣಗೊಂಡವು. ಒಂದು ಪ್ರತಿಯ ಬೆಲೆ ನಾಲ್ಕಾಣೆ; ಖರ್ಚು ಕಳೆದು ಹತ್ತು ರೂಪಾಯಿ ಬಂತು. ಪ್ರಕಟಣಾ ಕಾರ್ಯದ ಮೊದಲ ಪ್ರತಿಫಲ ಅದು.

ರಾಜರತ್ನಂ ಅವರ ವ್ಯಕ್ತಿಗತ ಜೀವನದ ಒಂದು ಹೊರನೋಟ ಗಮನಿಸಿದಾಗ ಅವರಿಗೆ ಮೂವತ್ತು ತುಂಬಿ ಮೇಷ್ಟ್ರು ಗುಡ್ಡ ಆರಂಭಿಸುವ ತನಕ (ಮೇಷ್ಟ್ರು ಗಿರಿ ಎಂಬ ಪದ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಅದನ್ನೇ ಮೇಷ್ಟ್ರು ಗುಡ್ಡ ಎಂದು ಬಳಸುತ್ತಿದ್ದರಂತೆ) ೧೯೩೩ರಿಂದ ಅವರ ಕೊನೆಯ ತನಕ ಈ ಪರಿಚಾರಿಕೆಯನ್ನು ಬದುಕಿನ ವ್ರತವೆಂಬಂತೆ ಆಚರಿಸಿದರು. ಮೊದಲ ಭಾಗ ತುತ್ತಿಗಾಗಿ ಬದುಕಿಗಾಗಿನ ಹೋರಾಟ. ಬರಹಗಾರನಾಗಿ ಒಂದು ನೆಲೆಗಾಗಿ ನಡೆದ ಹೋರಾಟವಾದರೆ, ಉಳಿದ ಭಾಗ ಪಡೆದದ್ದು ಕೊಡುವ ಪರ್ವ. ಅದಕ್ಕೆ ಅವರು ಹತ್ತು ವರುಷ ಬರೆದರು. ಹತ್ತು ವರುಷದ ತಮ್ಮ ಬದುಕಿನ ಹೋರಾಟ ಸಾಹಿತ್ಯಿಕ ಜಗಳಗಳ ವಿವರಣೆ ಅದು. ಬೇಂದ್ರೆ ಆ ಪುಸ್ತಕದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: ''ರಾಜರತ್ನಂ ಹತ್ತು ವರುಷಗಳಲ್ಲಿ ಅದೆಷ್ಟು ಕುಸ್ತಿಯ ಕಣ ಕಂಡಿದ್ದಾರೆ. ಹಲವರಿಗೆ ಮಣ್ಣು ಮುಕ್ಕಿಸಿದ್ದಾರೆ. ಹಲವರಿಗೆ ನೀರು ಕುಡಿಸಿದ್ದಾರೆ. ಎಷ್ಟೋ ವಾದಗಳಿಗೆ ಬೆಂಕಿ ಕೊಟ್ಟಿದ್ದಾರೆ. ನೂರು ವಿರೋಧಗಳನ್ನು ಗಾಳಿಗೆ ತೂರಿದ್ದಾರೆ. ಸಾವಿರ ಸಂಶಯಗಳನ್ನು ಬಯಲು ಮಾಡಿದ್ದಾರೆ. ಈ ರಣ ಕೋಲಾಹಲದಲ್ಲಿ ಢಕ್ಕಾ ಢಿಕ್ಕಿಯಾಗಿ ಅವರ ತಲೆಗೆ ಭೂಷಣ ಬಂದಿದೆ. ಮನೆಗೆ ರೊಕ್ಕವಿಲ್ಲದೆ ಎದೆಯ ನೆತ್ತರಿನಲ್ಲಿ ಲೆಕ್ಕಣಿಯನ್ನದ್ದಿ ಬರೆಯುವ ದಿವ್ಯವನ್ನು ಅವರು ಮಾಡಿದ್ದರೆಂಬುದನ್ನು ಅವರ ಪದ್ಯಗಳು ಹೇಳುವುವು. ಹಮ್ಮಿನಲ್ಲಿ ಹೂಂಕಾರ ಮಾಡಿ, ದೈನ್ಯ ಬಂದು ದಮ್ಮಯ್ಯ ಅನ್ನುವ ಪ್ರಸಂಗ ಅವರು ತಂದುಕೊಂಡಿಲ್ಲ. ಅವರು ಎದುರಾಳಿಗಳನ್ನು ಬೆನ್ನಟ್ಟಿದ್ದಾರೆ. ಆದರೆ ಇವರ ಬೆನ್ನು ಹಿಂದಿನಿಂದ ಬಂದು ಗಾಯ ಮಾಡುವವರಿಗೆ ಕಂಡಿದ್ದರೆ ಕಂಡಿರುವುದು, ರತ್ನನ ಅದ್ಭುತ ರಮ್ಯವಾದ ಸಾಹಿತ್ಯ ಕ್ರೀಡೆಯು ಅವರ ವೀರಜೀವನಕ್ಕೆ ಅತ್ಯುಚಿತವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.''

ಈ ಜಟ್ಟಿ ಮಟ್ಟಿ ಮಣ್ಣುಗಳ ಮಾತಿಗೆ ಬಂದಾಗ ಮತ್ತೊಂದು ಸಮಾನ ಅಂಶ ಹೊಳೆಯುತ್ತದೆ. ಎ.ಆರ್.ಕೃಷ್ಣಶಾಸ್ತ್ರಿ ಮತ್ತು ರಾಜರತ್ನಂ ಇಬ್ಬರೂ ದೈಹಿಕ ಸದೃಢತೆಯ ಬಗ್ಗೆ ಅತಿಶಯವಾದ ಕಾಳಜಿ ಹೊಂದಿದ್ದರು. ಅಂಥಾ ದೈಹಿಕ ಶ್ರಮವನ್ನೂ ಅವರು ಪಡುತ್ತಿದ್ದರು. ಇವರ ಮುಂದಿನ ತಲೆಮಾರಿನ ಶಿಷ್ಯ ರಾಜು ಮೇಷ್ಟ್ರು ಕೂಡ ಕಸರತ್ತು ಕಡ್ಡಾಯ ಅಂತ ನಂಬಿದವರು. ಈ ಮೂವರು ಪರಿಚಾರಕರ ಸಾಮ್ಯತೆ ಇದು. ಯಾಕೆಂದರೆ ನೂರು ಮಾತಾಡುವ ಲೇಖಕ ವರ್ಗ ಒಂದು ಕ್ರಿಯಾಶೀಲ ಹೆಜ್ಜೆ ಇಡಲು ಹಿಂದೆ ಮುಂದೆ ನೋಡುತ್ತದೆ.

ಅವರ ವಿದ್ಯಾರ್ಥಿಗಳ ಪ್ರೋತ್ಸಾಹಕ ಬರವಣಿಗೆಯ ಪ್ರಕ್ರಿಯೆ ಆರಂಭಗೊಂಡಿದ್ದೂ ಒಂದು ವಿಲಕ್ಷಣ ಪ್ರಸಂಗದಲ್ಲಿ. ಒಂದು ದಿನ ಕಾಲೇಜಿನ ಯೂನಿಯನ್ ಕಾರ್ಯದರ್ಶಿ ಇವರಿಗೆ ಕೆಲವು ಲೇಖನಗಳನ್ನು ಕೊಟ್ಟು, ಇವುಗಳನ್ನು ಪತ್ರಿಕೆಯಲ್ಲಿ ಅಚ್ಚು ಮಾಡಿಕೊಡಬೇಕಿದೆ. ಸ್ವಲ್ಪ ನೋಡಿ ಕೊಡಿ ಅಂತ ಹೇಳಿದರು. ಒಂದು ಪದ್ಯದ ಹೊರತು ಉಳಿದವು ಲಾಯಖ್ಖಾದವಲ್ಲ ಅನ್ನಿಸಿತು ರಾಜರತ್ನಂಗೆ. ನಾಳೆ ಕಾಲೇಜಿನಲ್ಲಿ ಹಾಗೇ ಹೇಳಬೇಕು ಅಂದುಕೊಂಡರೆ ಮರುದಿನ ಶೀತಕ್ಕೆ ಗಂಟಲು ಕಟ್ಟಿತು. ಪಾಠ ಹೇಳಲಾಗದೆ ವಿದ್ಯಾರ್ಥಿಗಳಿಗೆ ನೀವೇ ಯಾವುದಾದರೂ ವಿಷಯದ ಬಗ್ಗೆ ವ್ಯಾಕರಣ ಶುದ್ಧವಾಗಿ ಎರಡು ಪುಟದ ಲೇಖನ ಬರೆಯಿರಿ ಅಂದು ಕೂತರು. ಕೆಲವರು ಗೊಣಗಿದರು. ಮತ್ತೆ ಕೆಲವರು ಉತ್ಸಾಹದಿಂದ ಬರೆದರು. ಬರೆದಿದ್ದರಲ್ಲಿ ನಾವೀನ್ಯತೆ, ಒಗರು ಎಲ್ಲವೂ ಇತ್ತು. ಮನಸೆಳೆಯುವಂತಿತ್ತು. ಇತರ ತರಗತಿಗಳಲ್ಲೂ ಇದರ ಪ್ರಯೋಗ ಆಯಿತು. ಕಾಲೇಜು ಪತ್ರಿಕೆಗೆ ಒಳ್ಳೆ ಸಾಮಾಗ್ರಿ ದೊರಕಿತು. ಕನ್ನಡ ಸಂಘದಲ್ಲಿ, ಸಿಕ್ಕ ಗೆಳೆಯರ ಎದುರಿನಲ್ಲಿ, ಹೈಸ್ಕೂಲು ಹುಡುಗರ ಸಮಕ್ಷಮದಲ್ಲಿ ಓದಿ ತೋರಿಸಿದರು. ಅವು ಬಹಳಷ್ಟು ಜನಗಳಿಗೆ ಇಷ್ಟವಾದವು. ಆ ಲೇಖನಗಳನ್ನು ಒಟ್ಟುಗೂಡಿಸಿ 'ನಮ್ಮ ನಮ್ಮವರು' ಎಂಬ ಪುಸ್ತಕ ಸಿದ್ಧಗೊಳಿಸಿದರು.

ರಾಜರತ್ನಂ ಅವರ ಹಿರಿಯ ಗೆಳೆಯರಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹೀಗೆ ಹೇಳುತ್ತಾರೆ: ''ನಾನು ಅವರನ್ನು, ಪುಸ್ತಕ ಮಾಡುವ ವಿದ್ಯೆ ನಿಮ್ಮಿಂದ ಕಲಿಯಬೇಕು ಕಣ್ರೀ'' ಅಂತ ಹಾಸ್ಯ ಮಾಡುತ್ತಿದ್ದೆ. ಅವರು, ಪುಸ್ತಕ ಮಾಡುವ ವಿದ್ಯೆ ನೀವು ನನ್ನಿಂದ ಕಲಿಯಬಹುದು. ಆದರೆ ನಮ್ಮ ಜನರಿಗೆ ಪುಸ್ತಕ ಮಾರೋ ವಿದ್ಯೆ ಕಲಿಯುವುದು ಯಾರಿಂದಲೂ ಸಾಧ್ಯವಿಲ್ಲ ಅನ್ನುತ್ತಿದ್ದರು.

ವಿಷಯ ಸ್ಪಷ್ಟವಾಗಲು, ನಿಷ್ಕೃಷ್ಟವಾಗಲು, ನಿಖರವೂ ಸಂಕ್ಷೇಪವೂ ಆಗಲು, ಕೆಲವು ಕಾಲವಾದರೂ ಉಳಿದು ಪ್ರಚಾರವಾಗಲು, ಅದು ಗ್ರಂಥಸ್ಥವಾಗುವುದು ಒಂದು ಸಾಧನವೆಂದು ಅವರು ನಂಬಿದ್ದರು. ಪುಸ್ತಕ ಸಣ್ಣದಾಗಿರಬೇಕು. ಶೈಲಿ ಸುಲಭವಾಗಿರಬೇಕು. ಮುದ್ರಣ ಚೆನ್ನಾಗಿರಬೇಕು. ಬೆಲೆ ಕಡಿಮೆ ಇರಬೇಕು. ಇದೇ ಗ್ರಂಥ ಪ್ರಕಾಶನದಲ್ಲಿ ಅವರ ಗುರಿಯಾಗಿತ್ತು. ಅವರು ತಮ್ಮ ಗ್ರಂಥಗಳನ್ನು ಮಾತ್ರವಲ್ಲ, ಯಾರದೇ ಒಳ್ಳೆಯ ಗ್ರಂಥವಿದ್ದರೂ ಅದನ್ನ ಕುರಿತು ಭಾಷಣ ಮಾಡಲು, ಅದನ್ನು ವಾಚಕರ ಕೈಗೆ ತಲುಪಿಸಲು ಪ್ರಯತ್ನಿಸುತ್ತಿದ್ದರು. ಕಾಗದ ಮುದ್ರಣದ ವೆಚ್ಚ ಈಗಿರುವಂತೆ ಅತಿ ದುಬಾರಿಯಾಗಿರುವುದಕ್ಕೆ ಮೊದಲು ಇವರು ಅನೇಕ ವರ್ಷಗಳು ಪುಸ್ತಕಗಳ ಬೆಲೆಯನ್ನು ನಾಲ್ಕು ಆಣೆ, ಆರು ಆಣೆ ಇಟ್ಟಿದ್ದರು. ರಾಜರತ್ನಂ ಪುಸ್ತಕ ಪ್ರಕಟಣೆಯ ಹಿಂದಿದ್ದ ಗುರಿ ಹಾಗೂ ವೈಶಿಷ್ಟ್ಯ ಈ ಮಾತುಗಳಲ್ಲಿ ಕಂಡುಬರುತ್ತದೆ. ರಾಜರತ್ನಂ ಅವರು ತಮ್ಮ ಕಾಲದ ಸಾಹಿತ್ಯಿಕ ಬದಲಾವಣೆಗಳಿಗೆ ಕಾರಣರಾಗಿಯೂ ನವ್ಯ ಲೇಖಕರಲ್ಲಿ ಬರೆಯುವ ಕಾಯಕದ ಬೀಜಾರೋಪಣ ಮಾಡಿ, ಆ ಲೇಖಕರನ್ನು ಪೋಷಿಸಿಯೂ, ಬೆಳೆಸಿಯೂ ತಮ್ಮ ಜೊತೆಗಾರ ಲೇಖಕರ ಪ್ರಗತಿಶೀಲ ಸಾಹಿತ್ಯ

ಹಾಗೂ ತಮಗಿಂತ ಕಿರಿಯರು ಬರೆದ ನವ್ಯ ಸಾಹಿತ್ಯ ಎರಡೂ ಸಾಹಿತ್ಯ ಧಾರೆಗಳಿಂದ ಅವರು ಹೊರಗೇ ಉಳಿದರು. ಚಳವಳಿ ಕೇಂದ್ರಿತ ಆಯಾ ಕಾಲದ political correctnessನ ಅನಿವಾರ್ಯತೆ ರಾಜರತ್ನಂಗೆ ಇರಲಿಲ್ಲ. ಈಗಿನವರ perfectionist ಕೇಂದ್ರಿತ, ಆಳವಾದ ವಿದ್ವತ್ತಿನ ಮಾದರಿಗಳು ರಾಜರತ್ನಂಗೆ ಇರಲಿಲ್ಲ. ಸಾಹಿತ್ಯ ಅವರಿಗೆ ಬದುಕಿನ ಬಹುಮುಖ್ಯವಾದ ಭಾಗವಾಗಿತ್ತು. ಆದರೆ ಸಾಹಿತ್ಯವೇ ಬದುಕಾಗಿರಲಿಲ್ಲ. ಬರವಣಿಗೆ ಏಳಿಗೆಯ ಮೆಟ್ಟಿಲೂ ಆಗಿರಲಿಲ್ಲ.

ರಾಜರತ್ನಂ ಜೊತೆಗೂಡಿ ಬೆಳೆಸಿದ, ಪುಷ್ಟಿಗೊಳಿಸಿದ ಸಂಸ್ಥೆಗಳು ಅನೇಕ. ಗೋಖಲೆ ಸಂಸ್ಥೆ, ಗಾಂಧಿ ಸಾಹಿತ್ಯ ಸಂಘ ಇವುಗಳಲ್ಲಿ ಮುಖ್ಯ. ಗೋಖಲೆಯಲ್ಲಿ ಪುಸ್ತಕ ಭಂಡಾರ ಶಕ್ತಗೊಳಿಸಿದರು, ಬಿ.ಎಂ.ಶ್ರೀ. ನೆನಪಲ್ಲಿ 'ಶ್ರೀಗಂಧ ಕುಟಿ' ಎಂಬ ಗ್ರಂಥ ಭಂಡಾರದ ಪುಸ್ತಕ ವಿಭಾಗ, ಅನಕೃ ಹೆಸರಲ್ಲಿ ದತ್ತಿ ಇಂಥ ಕಾರ್ಯಕ್ರಮ, ಗೋವಿಂದ ಪೈ ಹೆಸರಲ್ಲಿ ಡಿವಿಜಿ ಚಿತ್ರಿಸಿರುವ 'ರಾಮಚಂದ್ರ ಪ್ರಭು ಮತ್ತು ಸ್ವತಂತ್ರ ಭಾರತ ಅಭಿನಂದಸ್ತವ' ಎಂಬ ಪುಸ್ತಕ ಪ್ರಕಟಿಸಿ ಸಂಸ್ಥೆಗೇ ದಾನ ಕೊಟ್ಟಿದ್ದರು. ಡಿವಿಜಿಯವರ 'ಮಂಕುತಿಮ್ಮನ ಕಗ್ಗ', 'ಅಂತಃಪುರಗೀತೆ' ಮುಂತಾದ ಕೃತಿಗಳ ಕ್ಲಿಷ್ಟ ಪದಗಳಿಗೆ ಅರ್ಥಕೋಶ ಒದಗಿಸಿದ್ದರು.

ಜಿ. ಶ್ರೀನಿವಾಸರಾಜು ಹೇಳುವ ಹಾಗೆ ಡಾ.ಜಿ.ಪಿ. ರಾಜರತ್ನಂ ಅವರ ಸಾಧನೆಗೆ ಅವರ ಸಾಹಿತ್ಯಾಭಿರುಚಿ ಮತ್ತು ಸಾಹಿತ್ಯ ಶಕ್ತಿಗಳಿಗಿಂತ ಅವರ ಸ್ವಭಾವದ ಕೆಲವು ಗುಣಗಳು ಕಾರಣ. 'ಸಾಮಾನ್ಯನಿಗೆ ಸಾಹಿತ್ಯ' ಎಂಬ ಘೋಷಣೆಯ ಹೃದಯವನ್ನು ಅವರಂತೆ ಆಚರಣೆಗೆ ತಂದವರು ಹಲವರಿಲ್ಲ. ಅವರ ಕಾರ್ಯವನ್ನು ಮೂರು ನೆಲೆಗಳಲ್ಲಿ ವಿವರಿಸುತ್ತಾರೆ. ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಿ ಆತ್ಮವಿಶ್ವಾಸ ಹುಟ್ಟಿಸಿದ ಕ್ಷೇಮಕಾರಿ. ವಿದ್ಯಾರ್ಥಿಗಳ ಅರಿವನ್ನು ಬೆಳಗಿಸಿಕೊಳ್ಳಲು ಸಹಾಯಕ ಸಾಮಗ್ರಿಗಳನ್ನು ನೀಡಿದ 'ದೀಪಧಾರಿ.' ವಿದ್ಯಾರ್ಥಿಗಳ ಬರವಣಿಗೆಯ ಲೋಪದೋಷಗಳನ್ನು ತಿದ್ದಿ, ಸರಿಪಡಿಸಿದ 'ದಂಡಧಾರಿ.'

ಲಂಕೇಶ್ ತಮ್ಮ ಗುರು ರಾಜರತ್ನಂ ಕುರಿತು ಹೀಗೆ ಹೇಳುತ್ತಾರೆ: ''ಇವರು ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಮೂಲಕ ನನ್ನಂತವರನ್ನು ಪ್ರೋತ್ಸಾಹಿಸಿ, ಹಿಂಸಿಸಿ, ಹೊಗಳಿ ನಾವು ಬರೆದದ್ದರಲ್ಲಿ ಆರಿಸಿ ಪ್ರಕಟಿಸದಿದ್ದರೆ ನಮಗೆ ಶೈಲಿಯಾಗಲೀ, ಭಾಷಾಶುದ್ಧಿಯಾಗಲೀ ಇರುತ್ತಿರಲಿಲ್ಲ. ಸಂಗ್ರಹವಾಗಿ, ಸ್ಪಷ್ಟವಾಗಿ, ಸದಭಿರುಚಿಯಿಂದ ಬರೆಯುವುದನ್ನು ಹೇಳಿಕೊಡುತ್ತಿದ್ದರು.''

''ಇವರು ಯಾರನ್ನೂ ಏನನ್ನೂ ಕೇಳದಿದ್ದುದು, ಯಾರೆದುರೂ ತಲೆಬಾಗದಿದ್ದುದು, ವಿಚಿತ್ರ ರೀತಿಯ ಸಂಕೋಚ, ಮಾಡುವ ಕೆಲಸದಲ್ಲಿ ತೃಪ್ತಿ. ಇವರು ಯಾವುದೇ ಮಿನಿಸ್ಟರನ್ನು ಕಂಡು ಹಲ್ಲು ಗಿಂಜುವ ಸ್ಥಿತಿಯನ್ನು ನೆನೆಸಿಕೊಳ್ಳುವುದು ನನ್ನಿಂದ ಸಾಧ್ಯವಿಲ್ಲ, ಇದು ರಾಜರತ್ನಂ ಕಲಿಸಿದ non verbal ಪಾಠ'' ಎಂದು ಸುಮತೀಂದ್ರ ನಾಡಿಗರು ನೆನಪಿಸಿಕೊಳ್ಳುತ್ತಾರೆ.

ಈಗಾಗಲೇ ಅತ್ಯಂತ ಜನಪ್ರಿಯವೂ, ಬಹುಚರ್ಚಿತವೂ ಆದ ರಾಜರತ್ನಂ ಅವರ ಸಾಹಿತ್ಯ ಪರಿಚಾರಿಕೆಯ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ಜೋಡಿಸುತ್ತಾ ಹೋಗುವುದು ವಜ್ಜೆ ಎನಿಸುತ್ತದೆ. ಅವರ ಕಾರ್ಯಫಲದ ಹಿನ್ನೆಲೆಯಲ್ಲಿ ಇವತ್ತಿಗೆ ರಾಜರತ್ನಂ ಅವರ ಪರಿಚಾರಿಕೆಯ ಕಲ್ಪನೆಯ ಪ್ರಸ್ತುತತೆ ಗುರುತಿಸಲು ಪ್ರಯತ್ನಿಸುವ.

ರಾಜರತ್ನಂ ಅವರ ಸಾಹಿತ್ಯ ಪರಿಚಾರಿಕೆಯ ಹೆಜ್ಜೆಗುರುತುಗಳಲ್ಲಿ ಹೆಜ್ಜೆ ಊರಿ ನಡೆದ ಮತ್ತೊಬ್ಬ ಹಿರಿಯರು ಜಿ.ಶ್ರೀನಿವಾಸರಾಜು. ಕಾಲದ ಹಾಗೂ ಕಾರ್ಯವ್ಯಾಪ್ತಿಯ ಹಿನ್ನೆಲೆಯಲ್ಲಿ ರಾಜು ಅವರು ತಮ್ಮ ಗುರುಗಳಾದ ರಾಜರತ್ನಂ ಹೊಂದಿದ್ದ ಕೆಲವು ಕಾಲಬದ್ಧ ಮಿತಿಗಳನ್ನ ಮೀರುತ್ತಾರೆ.

ರಾಜು ಅವರದ್ದು ಅನಕೃ ಮತ್ತು ರಾಜರತ್ನಂ ಇಬ್ಬರ ಆಲೋಚನಾ ಧಾಟಿ ಹಾಗೂ ಕಾರ್ಯಶೈಲಿಗಳ ಸಮ್ಮಿಲನ. ಒಂದಂಶ ಎಂದರೆ, ಈ ಇಬ್ಬರು ಹಿರಿಯರಿಗಿದ್ದ aggressiveness ರಾಜು ಮೇಷ್ಟ್ರಿಗೆ ಇರಲಿಲ್ಲ. ಅವರ ವ್ಯಕ್ತಿಗತ ಸಂಕೋಚದ ಸೌಜನ್ಯದ ಸ್ವಭಾವ, ಕೆಲಸ ಮಾಡಿಯೂ ಮುನ್ನುಗ್ಗುವ ಗುಣ ಅವರಿಂದ ದೂರವೇ ಉಳಿಯಿತು. ಆದರೆ ಅವರು ಬೆಳೆಸಿದ ಗಿಡಗಳು, ಕನ್ನಡ ಸಾಹಿತ್ಯವೆಂಬ ಎ.ಆರ್.ಕೃ. ಕನಸಿನ ಮಳೆಗೆ ಇನ್ನಷ್ಟು ವಿಸ್ತಾರ, ಕಸುವು ತುಂಬಿವೆ.

ಕಾಲ ನಿಜಕ್ಕೂ ಬದಲಾಗಿದೆ. ಪುಸ್ತಕ ಪರಿಚಾರಿಕೆ ಇವತ್ತು ಪುಸ್ತಕೋದ್ಯಮವಾಗಿ ಔದ್ಯಮಿಕ ಲಕ್ಷಣಗಳನ್ನು ಪಡೆದುಕೊಂಡಿದೆ. ರಾಜರತ್ನಂ ಥರದ ಆದರ್ಶಮಯ ಪರಿಚಾರಿಕೆಗಳು ಅಸಂಗತವಾಗಿ, ಕೆಲವು ಸಲ ಹಾಸ್ಯಾಸ್ಪದವಾಗಿಯೂ ಕಾಣುತ್ತದೆ. ಲೇಖಕರಲ್ಲಿ ಸಾಹಿತ್ಯ ಪರಿಚಾರಿಕೆಯ ಬಗ್ಗೆ ಗುಪ್ತವಾದ ತಿರಸ್ಕಾರ, ಸೃಜನಶೀಲವಾದದ್ದನ್ನು ಸೃಷ್ಟಿಸುವವರು ಮಾತ್ರ ದೊಡ್ಡವರು ಅನ್ನುವ ಅಘೋಷಿತ ನಿಲುವುಗಳು ಪ್ರಮುಖವಾಗಿವೆ. ಹಣ, ಶ್ರಮ ಹಾಕಿ ಭಾಷೆ ಮೇಲಿನ, ಸಾಹಿತ್ಯದ ಮೇಲಿನ ಪ್ರೀತಿಯಿಂದ ಪುಸ್ತಕ ಮಾಡುವುದು, ಮಾರಿ ತಲುಪಿಸುವುದು ಅವ್ಯಾವಹಾರಿಕ ದಡ್ಡತನದ ಹಾಗೆ ಒಳಗೊಳಗೇ ನೋಡಲ್ಪಡುತ್ತದೆ. ಈ ಜಾಗತೀಕರಣದ ಅಬ್ಬರದಲ್ಲಿ ಸಾಹಿತ್ಯ ರಚನೆ ಹಾಗೂ ಅದು ಒಳಗೊಳ್ಳುವ ಪುಸ್ತಕ ಪ್ರಕಟಣೆ, ಮಾಧ್ಯಮಗಳು, ಅದರ ಪ್ರಚಾರ-ಪ್ರಶಸ್ತಿಗಳು ಎಲ್ಲವೂ ಬಹಳಷ್ಟು ಮಟ್ಟಿಗೆ ಲಾಬಿಗಳಿಗೆ ಒಳಗಾಗಿವೆ. ವರ್ಷವೊಂದಕ್ಕೆ ಮೂರು ಸಾವಿರಕ್ಕೂ ಹೆಚ್ಚು ಕೃತಿಗಳು ಬೆಳಕು ಕಾಣುವ ಕನ್ನಡ ಸಾಹಿತ್ಯ ರಾಶಿಗೆ ಸರ್ಕಾರದ ಕೃಪೆ, ಪೋಷಣೆ, ಮಾಧ್ಯಮಗಳ ತೀವ್ರ ಸ್ಪರ್ಧೆ ಮುಂದಾಳತ್ವದಲ್ಲಿ ಸಾಹಿತ್ಯ ಸಾಮಾನ್ಯ ಜನಗಳಿಂದ ದೂರವೇ ಉಳಿದಿದೆ. ಸಾಮಾನ್ಯರನ್ನು ತಲುಪುವ ಕೃತಿಗಳು ಬೆರಳೆಣಿಕೆಯಷ್ಟೇ ಇರುತ್ತವೆ.

ಇದು ನಂಬಿಕೆಗಳು ಮುರಿದುಬಿದ್ದಿರುವ ಕಾಲ. ನಮ್ಮ ಸುತ್ತಲ ಎಲ್ಲಾ ಮಾನವೀಯ ಚಟುವಟಿಕೆಗಳ ಹಿಂದೆಯೂ ಹುನ್ನಾರಗಳು ಅಡಗಿರಬಹುದಾದ ಕಾಲ. ಕಳೆದ ನೂರು ವರ್ಷಗಳ ಕನ್ನಡ ಸಾಹಿತ್ಯ ಯಾವ ಏಕತೆಯನ್ನ, ಒಂದುತನವನ್ನ, ಸಮಾನತೆಯ ಸಮಾಜವನ್ನ ಕನಸಾಗಿ ಬದುಕಿತೋ, ಅದರ ಹೆಸರು ಹೇಳಹೇಳುತ್ತಲೇ ಶುದ್ಧ ಸ್ವಾರ್ಥಿಗಳಾಗಿ ನಡೆಯುತ್ತಿರುವ ಉದಾಹರಣೆಗಳು ಕಣ್ಣೆದುರು ಥಾಳಾಗಿವೆ. ಯಾವ ಘೋಷಣೆಗಳಿಂದ ಜನರು ರೋಮಾಂಚನ ಗೊಂಡರೋ ಅದನ್ನು ಕೂಗಿದವರು ಅಧಿಕಾರದ ಆಯಕಟ್ಟಿನ ಜಾಗಗಳಲ್ಲಿ ನೆಲೆನಿಂತು ಸತ್ತ ಹಾವುಗಳಂತಾಗಿದ್ದಾರೆ.

ಜಾತಿಯನ್ನು ಮೀರುವ ಮಾತಾಡುತ್ತಲೇ ಅದನ್ನು ಭದ್ರವಾಗಿ ಪೋಷಿಸುತ್ತಾ, ಧರ್ಮ ನಿರಪೇಕ್ಷತೆ ಹೇಳುತ್ತಲೇ ಅದು ಅರ್ಥಹೀನವೆನ್ನಿಸುವ ಹಾಗೂ ತದ್ವಿರುದ್ಧದ ಚಟುವಟಿಕೆಗಳು ಕಣ್ಣಿಗೆ ಕಾಣುತ್ತವೆ. ರಾಜರತ್ನಂ ಪರಿಚಾರಿಕೆಯನ್ನು ಒಳಗೊಂಡು ಅನೇಕ ಕ್ಷೇತ್ರಗಳಲ್ಲಿ ತೊಡಗಿಕೊಳ್ಳಲು ಕಾರಣವಾದದ್ದು ಅವರ ಒಂಟಿತನ ಅಂತಲೂ ಗುರುತಿಸಲಾಗುತ್ತದೆ. ಮಹಾನ್ ಸ್ವಾಭಿಮಾನಿ, ಸ್ವಲ್ಪ ಜಾಸ್ತಿ ಅತಿ ಅನ್ನಿಸುವಷ್ಟೇ ತಮ್ಮ ಮೇಲೆ ತಾವು ಅವಲಂಬಿಸಿದ್ದ ರಾಜರತ್ನಂ, ಭಾಷಣ, ಬರಹ ಮಕ್ಕಳೊಡನೆ ಬೆರೆಯುವ ನೆಪದಲ್ಲಿ ತಮ್ಮ ಒಂಟಿತನಕ್ಕೊಂದು ದಾರಿ ಕಂಡುಕೊಂಡರು.

ಗ್ರಂಥಋಣ: 'ರಾಜಮಾರ್ಗ'-ರಾಜರತ್ನಂ ನೆನಪಿನ ಸಂಪುಟ: ೧೯೮೦ ಪ್ರ: ರಾಜರತ್ನಂ ಸ್ಮಾರಕ ಸಮಿತಿ

'ಕನ್ನಡ ಭಿಕ್ಷು' - ರಾಜರತ್ನಂ, ಚಿ. ಶ್ರೀನಿವಾಸರಾಜು ಪ್ರ: ರಾಜರತ್ನಂ ಜನ್ಮ ಶತಮಾನೋತ್ಸವ ಸಮಿತಿ. ೨೦೦೮

ಎಂ.ಇ.ಎಸ್. ಕಾಲೇಜು ಆಯೋಜಿಸಿದ್ದ ರಾಜರತ್ನಂ ಸಾಹಿತ್ಯ ಕುರಿತ ವಿಚಾರ ಸಂಕಿರಣದಲ್ಲಿ ಮಂಡಿಸಿದ ಬರಹ

ಬಿ.ಎನ್. ಸುಮಿತ್ರಾಬಾಯಿ ಅವರ

ಆದಿಪುರಾಣದ ಸಾಮಾಜಿಕಾನುಸಂಧಾನದ ಸ್ವರೂಪ

■ ಜಿ. ಗಂಗರಾಜು

ಕನ್ನಡದಲ್ಲಿ ಇಂದು ಮಹಿಳಾ ಸಾಹಿತ್ಯ ವಿಮರ್ಶೆ ಒಂದು ಮುಖ್ಯವಾದ ಪರಂಪರೆಯಾಗಿ ಆಕಾರ ಪಡೆದಿದೆ. ಈ ದೃಷ್ಟಿಯಿಂದ, ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆ ಮತ್ತು ಸ್ತ್ರೀವಾದಿ ವಿಮರ್ಶೆಗಳು ಬೀರಿದ ಪ್ರಭಾವ ಬಹಳ ಮಹತ್ವವಾದದ್ದು. ಆದರೆ ಬಹು ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೆ, ಪಾಶ್ಚಾತ್ಯ ಸ್ತ್ರೀವಾದ ಮತ್ತು ಸ್ತ್ರೀವಾದಿ ವಿಮರ್ಶೆಗಳು ತೀವ್ರವಾಗಿ ಕನ್ನಡ ಸಾಹಿತ್ಯ ವಿಮರ್ಶೆಯನ್ನು ಪ್ರಭಾವಿಸುವುದಕ್ಕಿಂತ ಮೊದಲೇ ಕನ್ನಡದಲ್ಲಿ ಗಟ್ಟಿಯದ ಮಹಿಳಾ ವಿಮರ್ಶಾ ಕ್ರಮವೊಂದನ್ನು ರೂಪಿಸುವ ಪ್ರಯತ್ನಗಳು ಗಂಭೀರವಾಗಿ ನಡೆದಿದ್ದವು ಎನ್ನುವುದು. ಕನ್ನಡ ಸಾಹಿತ್ಯ, ಸಂಸ್ಕೃತ ಸಾಹಿತ್ಯ, ಭಾರತೀಯ ಸಾಹಿತ್ಯ ಮತ್ತು ಪಾಶ್ಚಾತ್ಯ ಸಾಹಿತ್ಯಗಳ ಆಳವಾದ ಅಧ್ಯಯನದ ಮೂಲಕ ಕನ್ನಡ ಸಾಹಿತ್ಯ ಪರಂಪರೆ ಮತ್ತು ಪಠ್ಯಗಳನ್ನು ವಿಶ್ಲೇಷಿಸುವ, ಅರ್ಥೈಸುವ ಹಾಗೂ ವ್ಯಾಖ್ಯಾನಿಸುವ ಪ್ರಯತ್ನಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿಯಾದರೂ, ಬಹು ಗಂಭೀರ ಸ್ವರೂಪದಲ್ಲಿ ಆರಂಭವಾಗಿದ್ದವು. ಸ್ತ್ರೀವಾಧಿ ಚಿಂತನೆ ಮತ್ತು ಸ್ತ್ರೀವಾದಿ ವಿಮರ್ಶಾ ರೂಪಗಳ ಪ್ರವರ್ಧಮಾನವು ಈ ಪ್ರಯತ್ನಗಳಿಗೆ ಹೊಸ ದಿಕ್ಕು ಹಾಗೂ ನೆಲೆಗಳನ್ನು ಕಲ್ಪಿಸಿದವು.

ಕನ್ನಡ ಮಹಿಳಾ ಸಾಹಿತ್ಯ ವಿಮರ್ಶೆಯ ಈ ಎರಡೂ ವಿದ್ಯಮಾನಗಳಿಗೆ ಒಂದು ಅತ್ಯುತ್ತಮ ನಿದರ್ಶನವೆಂದರೆ ಬಿ.ಎನ್. ಸುಮಿತ್ರಾಬಾಯಿ ಅವರ ಬರಹಗಳು. ಕನ್ನಡದ ಸ್ತ್ರೀವಾದಿ

ಪೂರ್ವ ಮತ್ತು ಸ್ತ್ರೀವಾದಿ ಕಾಲಘಟ್ಟದ ಮಹಿಳಾ ವಿಮರ್ಶೆಯ ಸ್ವರೂಪವನ್ನು ಇವರ ಸಾರ್ವತ್ರಿಕದೆಡೆಗೆ (1987), ವಿಚಯ (1995) ಮತ್ತು ಆಯನ (1995) ವಿಮರ್ಶಾ ಕೃತಿಗಳು ಸ್ಪಷ್ಟವಾಗಿ ನಿರೂಪಿಸುತ್ತವೆ. ಅವರ ವಿಮರ್ಶಾ ಬರವಣಿಗೆಯ ಆಯ್ದ ಲೇಖನಗಳ ಪ್ರಾತಿನಿಧಿಕ ಸಂಕಲನವಾದ ಸರಹದ್ದುಗಳ ಆಚೆ-ಈಚೆ (2009) ಕೃತಿಯು ಕನ್ನಡ ವಿಮರ್ಶಾ ಪರಂಪರೆಯ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾದ ಕೆಲವು ಲೇಖನಗಳನ್ನು ಒಳಗೊಂಡಿದೆ.

ಪಂಪನ ಆದಿಪುರಾಣವು ಅದು ರಚನೆಯಾದ ಕಾಲದಿಂದ ಬಹು ಇತ್ತೀಚಿನವರೆಗೂ, ನಿರ್ದಿಷ್ಟವಾಗಿ ಹೇಳುವುದಾದರೆ ಕನ್ನಡದಲ್ಲಿ ಸ್ತ್ರೀವಾದಿ ಹಾಗೂ ಸಾಂಸ್ಕೃತಿಕ ವಿಮರ್ಶಾ ಪ್ರಾಕಾರಗಳು ಮುನ್ನೆಲೆಗೆ ಬರುವವರೆಗೂ ಧಾರ್ಮಿಕ ಕೃತಿ ಅಥವಾ ಅಲೌಕಿಕ ಕಾವ್ಯವೆಂದೇ ಪ್ರಸಿದ್ಧವಾಗಿತ್ತು. ಕವಿ ಯಾವುದೋ ಒಂದು ನಿರ್ದಿಷ್ಟವಾದ ಚಾರಿತ್ರಿಕವೋ, ಧಾರ್ಮಿಕವೋ ಅಥವಾ ಸಾಹಿತ್ಯಕವೋ ಆದ ಕಾರಣಗಳ ಒತ್ತಡದಿಂದ ಮತ್ತು ತನ್ನ ಸಾಹಿತ್ಯ ರಚನಾನುಕೂಲತೆಯ ದೃಷ್ಟಿಯಿಂದ ಮಾಡಿಕೊಂಡಿರುವ ಒಂದು ತಾಂತ್ರಿಕ ಅವಸ್ಥಾರೂಪವನ್ನು ಸಾವಿರಾರು ವರ್ಷಗಳವರೆಗೂ ಹೀಗೆ ಪ್ರಶ್ನಾತೀತವಾಗಿ ಅಬಾಧಿತ ರೂಪದಲ್ಲಿ ಒಪ್ಪಿಕೊಂಡು ಬಂದದ್ದು ನಿಜಕ್ಕೂ ಸೋಜಿಗದ ವಿಷಯವೇ. ಇದಕ್ಕೆ ಏನೇ ಕಾರಣಗಳಿರಬಹುದಾದರೂ, ಕನ್ನಡ ಸಾಂಸ್ಕೃತಿಕ ವಿಮರ್ಶಾ ರೂಪಗಳ ಸಾಮಾಜಿಕಾನುಸಂಧಾನ ವಿದ್ಯಮಾನ ಮೊಟ್ಟ ಮೊದಲ ಬಾರಿಗೆ ಈ ಕವಿ ಪ್ರತಿಪಾದಿತ ಮತ್ತು ಪರಂಪರೆ ಅನುಪಾಲಿತ ವಿಭಜನಾಕ್ರಮವನ್ನು ತೀವ್ರವಾಗಿ ಪ್ರಶ್ನಿಸಿತು ಎನ್ನುವುದು ಗಮನಾರ್ಹ ವಿಚಾರ.

ಈ ಮೇಲಿನ ಸಂಗತಿಗಳ ಹಿನ್ನೆಲೆಯಲ್ಲಿ, ಸುಮಿತ್ರಾಬಾಯಿ ಅವರ ಆದಿಪುರಾಣದಲ್ಲಿ ಸ್ತ್ರೀ ಪ್ರಪಂಚದ ಬಳಕೆ (ಸರಹದ್ದುಗಳ ಆಚೆ-ಈಚೆ, 2009) ಲೇಖನವು ಒಂದು ಅತ್ಯಂತ ಮಹತ್ವಪೂರ್ಣವಾದ ಬರವಣಿಗೆಯಾಗಿದೆ.

ಮೋಕ್ಷಸಾಧನಾ ಮಾಧ್ಯಮದ ದೇಹ ಪ್ರಧಾನ ನೆಲೆ

ಪಂಪ ಮೂಲತಃ ಸಂಸ್ಕೃತ ಶಿಷ್ಟ ಕಾವ್ಯ ಪರಂಪರೆಯಿಂದ ಆಳವಾದ ಪ್ರಭಾವ ಪಡೆದರೂ ಅರ್ಥಪೂರ್ಣವಾದ ಪ್ರಾದೇಶಿಕ ಸತ್ವವನ್ನು ಸಾಧಿಸಿದ ಕವಿ. ಆದರೆ, ಆತನ ಕಾವ್ಯದಲ್ಲಿನ ಮಹಿಳಾ ದೃಷ್ಟಿಕೋನದಲ್ಲಿ ಈ ಪ್ರಾದೇಶಿಕ ಸಂಸ್ಕೃತಿಯ ಎಂದರೆ ದ್ರಾವಿಡ ಸಂಸ್ಕೃತಿಯ ಮೌಲ್ಯಗಳು ವ್ಯಕ್ತವಾಗಿಲ್ಲ. ಸಂಸ್ಕೃತದ ಶಿಷ್ಟ ಕಾವ್ಯ ಪರಂಪರೆಯ ಸಾಂಪ್ರದಾಯಕ ಸ್ತ್ರೀಧೋರಣೆಯೇ ಪ್ರಧಾನವಾಗಿ ಪಡಿಮೂಡಿದೆ. ಹೀಗಾಗಿ, ಜೆಂಡರ್ ಅಧ್ಯಯನದ ದೃಷ್ಟಿಕೋನದಿಂದ ಪಂಪನ ಕಾವ್ಯದ ಸ್ತ್ರೀಪಾತ್ರ ಚಿತ್ರಣದ ವಿಶ್ಲೇಷಣೆಗೆ ಹೆಚ್ಚು ಉಪಯುಕ್ತತೆ ಇಲ್ಲವೆಂದು ಸುಮಿತ್ರಾಬಾಯಿ ಅವರು ತಮ್ಮ ಪ್ರಬಂಧದ ಪ್ರಾರಂಭದಲ್ಲೇ ಸ್ಪಷ್ಟಪಡಿಸುತ್ತಾರೆ. ಆದರೆ, ಆದಿಪುರಾಣದಲ್ಲಿ ವಿಲಕ್ಷಣವೆನ್ನುವಂತಹ, ಅದ್ಭುತೆಯೊಂದು ಸ್ತ್ರೀ ಪ್ರಪಂಚದ ಸೃಷ್ಟಿಯಲ್ಲೂ ಬಳಕೆಯಲ್ಲೂ ಇದೆ ಎಂದು ಹೇಳುತ್ತಾರೆ. ಇದು ಈ ಕೃತಿಯಲ್ಲಿನ ಸ್ತ್ರೀಪಾತ್ರ ಚಿತ್ರಣ, ಕಾವ್ಯ ಪ್ರಸಂಗಗಳು ಮತ್ತು ಸನ್ನಿವೇಶಗಳ ವರ್ಣನೆಯಲ್ಲಿ ಸ್ತ್ರೀಯರು ಹಾಗೂ ಸ್ತ್ರೀಲೋಕದ ವಿವರಗಳನ್ನು ನಿರೂಪಿಸಿರುವ ಕ್ರಮದ ಸಾಮಾನ್ಯ ಸ್ವರೂಪವೇ ಆಗಿದೆ ಎಂದು ಅಭಿಪ್ರಾಯಪಡುತ್ತಾರೆ.

ವಿಮರ್ಶಕಿ, ಆದಿಪುರಾಣದ ಸ್ತ್ರೀಪಾತ್ರ ಚಿತ್ರಣದ ಈ ಸ್ವರೂಪವನ್ನು ಸ್ತ್ರೀ ಪ್ರಪಂಚದ ಸೃಷ್ಟಿ ಮತ್ತು

ಅದರ ಬಳಕೆ ಎನ್ನುವ ಎರಡು ಮುಖ್ಯ ಪರಿಕಲ್ಪನೆಗಳ ಮೂಲಕ ಗುರುತಿಸುತ್ತಾರೆ. ಮೇಲ್ನೋಟಕ್ಕೆ ಇವು, ವಾಣಿಜ್ಯ ಅಥವಾ ಸರಕು ಸಂಸ್ಕೃತಿಯ ವಸ್ತುವಿನ ಉತ್ಪಾದನೆ ಮತ್ತು ಅದರ ಉಪಯೋಗದ ಭೌತಿಕ ನೆಲೆಯ ಪರಿಕಲ್ಪನೆಗಳಿಗೆ ಸಂವಾದಿಯಾದವುಗಳು. ಕಾವ್ಯದ ವಿಶ್ಲೇಷಣೆಯಲ್ಲಿ ವಿಮರ್ಶಕಿ ಮಾಡುತ್ತಾ ಹೋಗಿರುವ ಚರ್ಚೆಯ ಸ್ವರೂಪವನ್ನು ಗಮನಿಸುತ್ತಾ ಬಂದಂತೆ, ಧರ್ಮ ಕೂಡಾ ಮಹಿಳೆಯ ಭೌತಿಕ ಬಳಕೆಯ ನೆಲೆಯಲ್ಲಿ ಪ್ರಧಾನವಾಗಿ ಸರಕು ಅಥವಾ ವಾಣಿಜ್ಯ ಸಂಸ್ಕೃತಿಯ ಪರಿಭಾಷೆ ಮತ್ತು ದೃಷ್ಟಿಕೋನಗಳನ್ನೇ ಅಚಲವಾಗಿ ಪಾಲಿಸಿಕೊಂಡು ಬಂದಿರುವುದನ್ನು ಅವರು ಸ್ಪಷ್ಟಪಡಿಸುತ್ತಾ ಹೋಗುತ್ತಾರೆ ಎನ್ನುವುದು ಮನದಟ್ಟಾಗುತ್ತದೆ. ಈ ಹಿನ್ನೆಲೆಯಲ್ಲಿ, ಈ ಲೇಖನದ ಈ ಪರಿಕಲ್ಪನೆಗಳ ಬಳಕೆಯ ಔಚಿತ್ಯ ಕುರಿತು ಡಿ.ಎಸ್. ನಾಗಭೂಷಣ (ಅರುಹು-ಕುರುಹು: ಏಪ್ರಿಲ್-ಜೂನ್ 2012) ಅವರು ಎತ್ತುವ ಪ್ರಶ್ನೆಗಳಿಗೆ ಸುಮಿತ್ರಾಬಾಯಿ ಅವರ ವಿಶ್ಲೇಷಣೆಯ ಕ್ರಮದಲ್ಲೇ ಉತ್ತರಗಳಿವೆ.

ಈ ಲೇಖನದಲ್ಲಿ ವಿಮರ್ಶಕಿ, ಸ್ತ್ರೀವಾದಿ ಚಿಂತನೆಯ ಜೆಂಡರ್ ಅಧ್ಯಯನ ವಿಧಾನವೊಂದನ್ನೇ ಪ್ರಧಾನವಾಗಿ ಅವಲಂಬಿಸುವುದಿಲ್ಲ. ಇದರೊಂದಿಗೆ, ಚಾರಿತ್ರಿಕ ಅವಲೋಕನದ ಹೊರನೆಲೆ ವಿಧಾನ ಮತ್ತು ಸಾಹಿತ್ಯ ಪರಂಪರೆಯಾಧಾರಿತ ಆಂತರಿಕ ತೌಲನಿಕ ನೆಲೆ ವಿಧಾನಗಳನ್ನು ಸಹ ಸಂದರ್ಭೋಚಿತವಾಗಿ ಮೇಳೈಸುವ ಅಥವಾ ಪ್ರತ್ಯೇಕವಾಗಿ ಬಳಸುವ ವಿಧಾನವನ್ನು ಅನುಸರಿಸುತ್ತಾರೆ. ಹೀಗಾಗಿಯೇ ಅವರು, ಆದಿಪುರಾಣದ ಸ್ತ್ರೀಪಾತ್ರ ಚಿತ್ರಣ, ಸ್ತ್ರೀಲೋಕದ ವಿವರಗಳ ಬಳಕೆ ಮತ್ತು ನಿರೂಪಣೆಯಲ್ಲಿ ಕಾವ್ಯದ ವಸ್ತು, ಸಂದರ್ಭ ಹಾಗೂ ಸನ್ನಿವೇಶಗಳಿಗೆ ಅಗತ್ಯವಾಗಿರಲಿ ಅಥವಾ ಇಲ್ಲದಿರಲಿ ಪಂಪ ಹೆಣ್ಣನ್ನು ಪ್ರಧಾನವಾಗಿ ದೇಹ ಪ್ರಧಾನ ನೆಲೆಯಲ್ಲಿ ಚಿತ್ರಿಸುತ್ತಾ ಹೋಗುತ್ತಾನೆ. ಇದಕ್ಕೆ ಪಂಪ ಸಂಸ್ಕೃತ ಶಿಷ್ಟ ಕಾವ್ಯದ ಅವನತಶೀಲ ಕಾಲಘಟ್ಟದ ಪ್ರಮುಖ ಕವಿಯಾದ ಮಾಘ ಹೆಣ್ಣನ್ನು ಕುರಿತು ಹೊಂದಿದ್ದ ಸಾಂಪ್ರದಾಯಕ ಭೌತಿಕ ಆಸಕ್ತಿಯ ದೃಷ್ಟಿಕೋನಗಳಿಂದ ಪ್ರಭಾವಿತನಾಗಿರುವುದು ಮತ್ತು ತನ್ನ ಸ್ವವಿವರಗಳಲ್ಲಿ ನಿರೂಪಿಸಿಕೊಂಡಿರುವಂತೆ ಶೃಂಗಾರಾಸಕ್ತ ಮನೋಭಾವದ ವ್ಯಕ್ತಿತ್ವದ ಪ್ರಧಾನ ಧೋರಣೆಯನ್ನು ಈ ಕಾವ್ಯದಲ್ಲಿ ಗಟ್ಟಿಯಾಗಿ ಅನುಸರಿಸಿರುವುದೇ ಮುಖ್ಯ ಕಾರಣವೆಂದು ವಿಶ್ಲೇಷಿಸುತ್ತಾರೆ. ಒಂದೊಮ್ಮೆ ಪಂಪ, ಸಂಸ್ಕೃತ ಶಿಷ್ಟ ಕಾವ್ಯದ ಶ್ರೇಷ್ಠ ಕವಿಯಾದ ಕಾಳಿದಾಸನ ಕಾವ್ಯ ಅಥವಾ ಕರ್ನಾಟಕ ಮೂಲದ ಮುನಿ ಜಿನಸೇನಸೂರಿಯ ಹರಿವಂಶ ಪುರಾಣದಲ್ಲಿ ಚಿತ್ರಿಸಿರುವ ದ್ರಾವಿಡ ಸಂಸ್ಕೃತಿ ವಿಶಿಷ್ಟ ಸ್ತ್ರೀ ಚಿತ್ರಣ ಮಾದರಿಗಳಿಂದ ಪ್ರಭಾವಿತನಾಗಿದ್ದಿದ್ದರೆ ಅಥವಾ ಆಸ್ಥಾನ ಪರಂಪರೆಯಿಂದ ಹೊರಗಿನ ಸ್ವತಂತ್ರ ಕವಿಯಾಗಿದ್ದಿದ್ದರೆ,ಅವರಂತೆ ತಾನೂ ಸಹಪ್ರಾಯಶಃ ಹೆಣ್ಣಿನ ಮನೋಪ್ರಧಾನ ಅಥವಾ ಅಂತರಂಗ ಪ್ರಧಾನ ಸ್ತ್ರೀಚಿತ್ರಣವನ್ನು ಕೊಡಬಹುದಿತ್ತು ಎಂದು ಅಭಿಪ್ರಾಯಪಡುತ್ತಾರೆ.

ಆದಿಪುರಾಣದ ಸ್ತ್ರೀ ಪಾತ್ರ ಚಿತ್ರಣ ಸ್ವರೂಪದ ಸಾಮಾಜಿಕಾನುಸಂಧಾನಕ್ಕಾಗಿ ಸುಮಿತ್ರಾ ಬಾಯಿ ಅವರು ಬಳಸುವ ವಿಧಾನದ ಮೂಲಕ, ಕವಿಯ ವ್ಯಕ್ತಿತ್ವ ಮತ್ತು ಬದುಕಿನ ರೀತಿಗಳು ಆತನ ಕಾವ್ಯ ಮನೋಧರ್ಮವನ್ನು ಮಾತ್ರವಲ್ಲದೆ, ಸಮಕಾಲೀನ ಸಮಾಜ ಹಾಗೂ ಸಂಸ್ಕೃತಿಯ ಸ್ವರೂಪದ ಗ್ರಹಿಕೆಗೂ ಕೂಡಾ ಅತ್ಯಂತ ಮುಖ್ಯವಾದಸಾಧನಗಳಾಗಿವೆ ಎಂದು ಪ್ರತಿಪಾದಿಸುತ್ತಾರೆ. ಹೀಗಾಗಿಯೇ,ಆದಿಪುರಾಣದ ದೇಹಪ್ರಧಾನ ಸ್ತ್ರೀ ಚಿತ್ರಣ ಕುರಿತು ವಿಶ್ಲೇಷಿಸುತ್ತಾ ಅವರು, ಪಂಪನ ಆದಿಪುರಾಣದಲ್ಲಿ ಸ್ತ್ರೀ ಪುರುಷರ ಬದುಕಿನ ಅತ್ಯಂತ ಪರಿಪೂರ್ಣ ಸಂಬಂಧ ವಿವೇಚನೆ

ಇಷ್ಟೇ ಎಂಬುದನ್ನೂ ಗಮನಿಸಬೇಕು. ವಾಸ್ತವದಲ್ಲಿ ಕನ್ನಡ ನಾಡಿನ ದ್ರಾವಿಡ ಸಂಸ್ಕೃತಿಯ ಮೂಲದಿಂದ ಆತನ ಸ್ತ್ರೀ ಪ್ರಪಂಚ ಪ್ರಭಾವಿತವಾಗಿದ್ದಿದ್ದರೆ ಅಲ್ಲಿ ಬರೀ ಹೆಣ್ಣು ಹೆಂಗಸಷ್ಟೆ ಇರುವುದು ಸಾಧ್ಯವಿರುತ್ತಿದ್ದಿಲ್ಲ. ಅಲ್ಲಿ ತಾಯಿಯೂ, ಮಗಳೂ, ಸೋದರಿಯರೂ, ಅಂಥದೇ ಸ್ಥಾನಗಳಲ್ಲಿ ವಾತ್ಸಲ್ಯ, ಭಕ್ತಿ, ಗೌರವಭಾವಗಳಿಂದ ನೋಡಬಲ್ಲ ಸ್ತ್ರೀ ಸೌಜನ್ಯದ ಲಕ್ಷಣವೂ ಇದ್ದೇ ಇರುತ್ತಿತ್ತು'' ಎಂದು ಹೇಳುವ ಮಾತುಗಳು ಪಠ್ಯದ ಸಾಮಾಜಿಕಾನುಸಂಧಾನದ ಪ್ರಮುಖ ಪರಿಕಲ್ಪನೆಯಾದ ಲಿಂಗ ಸಂವೇದನೆಗೂ ಸಂಸ್ಕೃತಿ ಸಂದರ್ಭದ ಸ್ವರೂಪಕ್ಕೂ ಇರುವ ಸಾವಯವ ಸಂಬಂಧ ಕುರಿತು ಬೆಳಕು ಚೆಲ್ಲುತ್ತವೆ.

ಆದಿಪುರಾಣದ ಅಂಗನೆ

ಅನುರಕ್ತಿ ಚಿತ್ರಣದ ಪರಿಕರ, ವಿರಕ್ತಿ ಪ್ರತಿಪಾದನೆಯ ಸಾಧನ ಮತ್ತು ಮೋಕ್ಷ ನಿರೂಪಣೆಯ ಪರಿಭಾಷೆ ಹೆಣ್ಣಿನ ಕುರಿತ ಪಂಪನ ದೇಹಪ್ರಧಾನ ದೃಷ್ಟಿಕೋನವು ಇಡೀ ಆದಿಪುರಾಣದ ತುಂಬಾ ಗಾಳಿಬೆಳಕಿನಂತೆ ಆವರಿಸಿಕೊಂಡಿದೆ. ಇದರ ಹೊರತಾಗಿ ಈ ಕಾವ್ಯಕ್ಕೆ ಹೆಣ್ಣಿನ ಕುರಿತ ಭಿನ್ನವಾದ ಮತ್ತು ಅರ್ಥಪೂರ್ಣವಾದ ಆಯಾಮಗಳಿರುವುದು ಬಹಳ ಕಡಿಮೆ ಎಂದು ಅಭಿಪ್ರಾಯಪಡುತ್ತಾ ಸುಮಿತ್ರಾಬಾಯಿ ಅವರು ಈ ವಿಚಾರವನ್ನು ಹಲವು ನೆಲೆಗಳಿಂದ ವಿವರಿಸುತ್ತಾರೆ. ಇಂಥ ಪ್ರಮುಖ 5 ನೆಲೆಗಳನ್ನು ಇಲ್ಲಿ ಗುರುತಿಸಿಕೊಳ್ಳಲು ಸಾಧ್ಯವಿದೆ. ಅವುಗಳೆಂದರೆ: 1. ಭೂಮಿ ಮತ್ತು ಹೆಣ್ಣಿನ ಸಮೀಕರಣ ನೆಲೆ 2. ವಸ್ತು ಸಂಗತಿಗಳ ಸ್ವರೂಪ ಮತ್ತು ಹೆಣ್ಣಿನ ಸ್ವಭಾವ ಸಂಯೋಜನೆ ನೆಲೆ 3. ಪುರುಷ ಪ್ರತಿಷ್ಠೆಯ ಪ್ರತಿಪಾದನೆ ನೆಲೆ 4. ವರ್ಣನೆಗಳ ಲೈಂಗಿಕೀಕರಣ ನೆಲೆ ಮತ್ತು 5. ಮುಕ್ತಿನಿರೂಪಣೆಯ ಪರಿಭಾಷೆಯ ನೆಲೆ. ಈ ನೆಲೆಗಳು ತಮ್ಮ ಸಹಜ ಸ್ವರೂಪದಲ್ಲೇ ಹೆಚ್ಚು ಸಮರ್ಪಕವಾಗಿ ವಿಮರ್ಶಕಿಯ ಪಠ್ಯದ ಸಾಮಾಜಿಕಾನುಸಂಧಾನ ಸ್ವರೂಪವನ್ನು ಶ್ರುತಪಡಿಸುತ್ತವೆ. ಕಾವ್ಯದ ವಿವಿಧ ಪ್ರಸಂಗ, ಸನ್ನಿವೇಶ ಮತ್ತು ಸಂದರ್ಭಗಳ ವರ್ಣನೆ, ನಿರೂಪಣೆ ಹಾಗೂ ನಿರ್ವಹಣೆಯಲ್ಲಿ ಪಂಪ ಹೆಣ್ಣಿನ ಕುರಿತು ವ್ಯಕ್ತಪಡಿಸಿರುವ ಧೋರಣೆಯನ್ನು ಮತ್ತು ಅದರ ಸಾಮಾನ್ಯ ತಾತ್ವಿಕ ಸ್ವರೂಪವನ್ನು ಕುರಿತ ವಿಮರ್ಶಕಿಯ ಗ್ರಹಿಕೆ ಏನು ಎನ್ನುವುದು ಇಷ್ಟರಿಂದಲೇ ವಿಹಿತವಾಗುತ್ತದೆ. ಆದರೆ, ಮುಕ್ತಿ ನಿರೂಪಣೆಯ ಪರಿಭಾಷೆಯ ನೆಲೆ ಸಂದರ್ಭದಲ್ಲಿ ವಿಮರ್ಶಕಿಯು ಕೆ.ವಿ. ನಾರಾಯಣ ಅವರ ಪಂಪನ ಮುಕ್ತ್ಯಂಗನೆ ಪರಿಕಲ್ಪನೆ ಬಗೆಗೆ ಭಿನ್ನಮತ ವ್ಯಕ್ತಿಪಡಿಸುವುದು ಮತ್ತು ಪರ್ಯಾಯಾಭಿಪ್ರಾಯವನ್ನು ಪ್ರತಿಪಾದಿಸುವುದು ಈ ಲೇಖನದ ಸಾಮಾಜಿಕಾನುಸಂಧಾನಕ್ಕೆ ಹೆಚ್ಚು ಪ್ರಸ್ತುತತೆ ತಂದು ಕೊಟ್ಟಿದೆ.

ಕನ್ನಡ ಸಾಂಸ್ಕೃತಿಕ ವಿಮರ್ಶೆಯ ಸಾಮಾಜಿಕ ಆಯಾಮಗಳು ವಾಗ್ವಾದ ಮೂಲದಿಂದ ಹುಟ್ಟುವ ಮತ್ತು ಬೆಳೆಯುವ ಪರಂಪರೆಗೆ ಇದೊಂದು ಮುಖ್ಯ ನಿದರ್ಶನ ಕೂಡಾ ಆಗಿದೆ. ಹೀಗಾಗಿ,ಇದೊಂದನ್ನು ಕುರಿತು ಇಲ್ಲಿ ಸ್ಥೂಲವಾಗಿ ವಿವೇಚಿಸಲಾಗಿದೆ.

ಆದಿಪುರಾಣದ ಮೋಕ್ಷ ನಿರೂಪಣೆಯ ಸ್ತ್ರೀರೂಪಿ ಪರಿಭಾಷೆಗಳು

ಪಂಪನ ಕಾವ್ಯಗಳಲ್ಲಿ ಚಿತ್ರಿತವಾಗಿರುವ ಹೆಣ್ಣಿನ ಪರಿಕಲ್ಪನೆಯು, ಜನಪದರ ತಿರಸ್ಕಾರ ಯೋಗ್ಯ ವಸ್ತುಗಳು ಅಥವಾ ವಿಚಾರಗಳಾದ ಹೆಣ್ಣು, ಹೊನ್ನು ಮತ್ತು ಮಣ್ಣಿನಲ್ಲಿ ಪ್ರಥಮ ಸ್ಥಾನ ಪಡೆದಿರುವ ಹೆಣ್ಣನ್ನೇ ಪಂಪ ಮುಕ್ತಿ ಸಾಧನಾ ಸ್ಥಿತಿಯ ಶ್ರೇಷ್ಠಾವಸ್ಥೆಯನ್ನು ನಿರೂಪಿಸಲು ಬಳಸಿಕೊಂಡಿರುವುದು

ಅತ್ಯಂತ ಗಮನಾರ್ಹ ಎನ್ನುವ ಕೆ.ವಿ.ಎನ್. ಅವರ ನಿಲುವನ್ನು ಸುಮಿತ್ರಾಬಾಯಿ ಅವರು ಒಪ್ಪುವುದಿಲ್ಲ. ಇದಕ್ಕೆ ತಮ್ಮ ಭಿನ್ನಮತ ವ್ಯಕ್ತಪಡಿಸುತ್ತಾ ಅವರು, ಈ ಟಿಪ್ಪಣಿಯ ಆರಂಭದಲ್ಲಿ ಗುರುತಿಸಿದಂತೆ, ಅಪೇಕ್ಷಣೀಯ ವಸ್ತುಭಾವಗಳೆಲ್ಲ ಕಾಂತಶ್ರೀ, ಕಾಂತೆ, ಅಂಗನೆ, ವನಿತೆ ಮುಂತಾದ ಪದಗಳ ಮೂಲಕ ಸ್ತ್ರೀಭಾವವನ್ನು ಆರೋಪಿಸುವುದು ಪಂಪನ ಕಲ್ಪನೆಯಲ್ಲಿ ಹಾಸು ಹೊಕ್ಕಾಗಿ ಕಾಣಿಸುತ್ತದೆ. ಹಾಗಿರುವಾಗ ಮುಕ್ತ್ಯಂಗನೆ, ಮುಕ್ತಿಶ್ರೀ, ಮುಕ್ತಿವಧೂ ಎಂಬ ಪದಗಳಿಗೆ ಪಂಪನ ಕಾವ್ಯದ ಆಶಯದೊಳಗೇ ಬೇರೆ ಅರ್ಥವಿತ್ತೆಂದು ಹೇಳುವುದು ಸುಲಭವಲ್ಲ[2] ಎಂದು ಅಭಿಪ್ರಾಯಪಡುತ್ತಾರೆ. ಇಷ್ಟಾದರೂ ಪಂಪ, ಕೆ.ವಿ.ಎನ್. ಅವರು ಪ್ರತಿಪಾದಿಸುವ, ಜನಪದರು ನಿರಾಕರಿಸುವ ಮತ್ತು ಜೈನ ದಿಗಂಬರ ಪಂಥ ತಿರಸ್ಕರಿಸುವುದಕ್ಕಿಂತ ಭಿನ್ನವಾದ ಪರಿಕಲ್ಪನೆಯನ್ನು ಹೊಂದಿದ್ದಾನೆ. ಅದು ಅವನು ವೈಯಕ್ತಿಕವಾಗಿ ಸ್ತ್ರೀಯರ ಬಗ್ಗೆ ತಳೆದಂಥ ನಿಲುವು. ಇಹಲೋಕದ ಬದುಕಿಗೆ ಸ್ತ್ರೀಯರೇ ಸಾರ್ಥಕತೆ ತಂದುಕೊಡುವವರು ಎಂಬುದೇ ಆಗಿ ತೋರುತ್ತದೆ. ಅದರಲ್ಲೂ ತಾಯಿ, ಮಗಳು, ಸೋದರಿಯ ಭಾವದ ಸಾಮಾಜಿಕ ಸಂಬಂಧಗಳೊಳಗೆ ಕರಗಿ ಹೋಗಿರದ ಹೆಣ್ತನದ ಮೂಲ ಸಾರದಲ್ಲೇ ಹೆಣ್ಣನ್ನು ಆತ ಕಂಡಿರುವ ರೀತಿ ಕೂಡಾ ಈ ನಾಡಿನ ಜನಪದರ ತಿಳಿವಳಿಕೆಗಿಂತ ಭಿನ್ನವೇ ಆಗಿದೆ.[3] ಆದರೆ ಅವನ ಕಾವ್ಯದ ರೂಪಕಗಳ ಭಾಷೆ ಹೆಣ್ಣಿನ ಕುರಿತ ಧಾರ್ಮಿಕ ಪರಂಪರೆಯ ಸಾಂಪ್ರದಾಯಿಕ ನಿಲುವನ್ನು ಅಲ್ಲಾಡಿಸುವುದೂ ಮಹತ್ವದ ವಿಚಾರವೇ ಆಗಿದೆ ಎಂದು ವಿಶ್ಲೇಷಿಸುತ್ತಾರೆ.

ಸುಮಿತ್ರಾಬಾಯಿ ಅವರು ಪಂಪನ ಹೆಣ್ಣಿನ ಪರಿಕಲ್ಪನೆಯನ್ನು ಹೀಗೆ ವೈಯಕ್ತಿಕ ಮತ್ತು ಕಾವ್ಯಾಶಯಾತ್ಮಕ ಎಂದು ವಿಭಜಿಸುವುದು ಕವಿ ಹಾಗೂ ಪಠ್ಯದ ಅನುಸಂಧಾನಕ್ಕಾಗಿ ಅವರು ಅನುಸರಿಸುವ ವಿಧಾನಗಳು ರೂಪಿಸುವ ತಾತ್ವಿಕತೆಯಿಂದ ಹುಟ್ಟಿದ್ದಾಗಿದೆ. ಅಂದರೆ, ಹೆಣ್ಣಿನ ಕುರಿತಾದ ಕವಿಯ ಗಂಡುನೋಟದ ವಿರುದ್ಧ ರೂಪಿಸಿಕೊಂಡಿರುವ ಹೆಣ್ಣುನೋಟದ ಪ್ರಜ್ಞೆಯಾಗಿದೆ. ಹೀಗಾಗಿ, ಅವರು ಪಂಪನ ಆದಿಪುರಾಣ ಪಠ್ಯದಲ್ಲಿ ಸಮಾಜ ಮತ್ತು ಸಂಸ್ಕೃತಿನಿಷ್ಠ ನೆಲೆಯಲ್ಲಿ ರೂಪುಗೊಂಡಿರುವ ಹೆಣ್ಣಿನ ಚಿತ್ರ ಹಾಗೂ ಚಿತ್ರಣಗಳನ್ನು ಹುಡುಕುವಂತೆ ಮಾಡಿದೆ.

ಇದಕ್ಕೆ ಬದಲಾಗಿ ಕೆ.ವಿ.ಎನ್. ಅವರು, ಪಠ್ಯದ ವಸ್ತುನಿಷ್ಠ ಅಥವಾ ವಿವರ ನಿರೂಪಿತ ವಿಧಾನ ಅವಲಂಬಿಸುವುದರಿಂದ, ಕವಿಯ ಹೆಣ್ಣಿನ ಕುರಿತಾದ ಗಂಡುನೋಟಕ್ಕೆ ಅನುರೂಪವಾದ ಗಂಡುನೋಟದಲ್ಲೇ ಹೆಣ್ಣಿನ ಚಿತ್ರ ಹಾಗೂ ಚಿತ್ರಣವನ್ನು ವಿಶಿಷ್ಟವಾಗಿ ಗುರುತಿಸುತ್ತಾರೆ.

ಆದಿಪುರಾಣದ ಸ್ತ್ರೀ ಪಾತ್ರ ಚಿತ್ರಣ ಕುರಿತ ಈ ಮುಖ್ಯ ವ್ಯತ್ಯಾಸವು, ಪಠ್ಯದ ವಿಶ್ಲೇಷಣೆಯಲ್ಲಿ ಬಳಸುವ ವಿಧಾನ, ಅದು ರೂಪಿಸುವ ದೃಷ್ಟಿಕೋನ ಮತ್ತು ಇವುಗಳ ಸಮಾವಿಷ್ಟತೆಯ ಫಲಿತವಾದ ತಾತ್ವಿಕತೆಯ ಭಿನ್ನತೆಯ ಸ್ವರೂಪಕ್ಕೆ ಅತ್ಯಂತ ಸೂಕ್ತ ನಿದರ್ಶನವಾಗಿದೆ. ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯ ವಿಮರ್ಶಾ ವಿಧಾನ ರೂಪುಗೊಂಡು ವ್ಯಾಪಕವಾಗಿ ಮುನ್ನೆಲೆಗೆ ಬಂದಂತೆಲ್ಲಾ ಸಾಹಿತ್ಯಾತ್ಮಕ ವಸ್ತುನಿಷ್ಠ ವಿಮರ್ಶಾ ವಿಧಾನದ ಮಿತಿಗಳು ಹೆಚ್ಚು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಾ ಬರಲಾರಂಭಿಸಿದವು ಎನ್ನುವುದು ಈಗಾಗಲೇ ರುಜುವಾತಾದ ವಿಚಾರವಾಗಿದೆ. ಹಾಗೆಯೇ ಪ್ರಸ್ತುತ,ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆಯ ಸಾಂಸ್ಕೃತಿಕಾನುಸಂಧಾನ ವಿಧಾನ ವ್ಯಾಪಕವಾಗಿ ಪ್ರವರ್ಧಮಾನಕ್ಕೆ ಬಂದಂತೆಲ್ಲಾ ಸಾಂಪ್ರದಾಯಿಕ ಸ್ತ್ರೀವಾದಿ ವಿಮರ್ಶೆಯ ಸಾಮಾಜಿಕಾನುಸಂಧಾನ ವಿಧಾನದ ಪರಿಮಿತಿಗಳು ಬೆಳಕಿಗೆ ಬರುತ್ತಿರುವುದನ್ನು ಸಹ ಗಮನಿಸಬಹುದು.

ಈ ಮುಖ್ಯ ಸಂಗತಿಗಳಹಿನ್ನೆಲೆಯಲ್ಲಿ, ಜಿ.ಎನ್.ಸುಮಿತ್ರಾಬಾಯಿ ಅವರ ಆದಿಪುರಾಣದಲ್ಲಿ ಸ್ತ್ರೀ ಪ್ರಪಂಚದ ಬಳಕೆ ಬರಹವು ಕನ್ನಡ ಸಾಂಸ್ಕೃತಿಕ ಸ್ತ್ರೀವಾದಿ ವಿಮರ್ಶೆಯ ಒಂದು ಅತ್ಯಂತ ಮಹತ್ವಪೂರ್ಣ ರಚನೆಯಾಗಿದೆ.

ಕೊನೆ ಟಿಪ್ಪಣಿಗಳು :

೧. ಜಿ.ಎನ್. ಸುಮಿತ್ರಾಬಾಯಿ, ಸರಹದ್ದುಗಳ ಆಚೆ-ಈಚೆ, ಇಳಾ ಪ್ರಕಾಶನ, ಬೆಂಗಳೂರು, ೨೦೦೯, ಪುಟ, ೮

೨. ಜಿ.ಎನ್. ಸುಮಿತ್ರಾಬಾಯಿ, ಸರಹದ್ದುಗಳ ಆಚೆ-ಈಚೆ, ಇಳಾ ಪ್ರಕಾಶನ, ಬೆಂಗಳೂರು, ೨೦೦೯, ಪುಟ, ೯


೩. ಜಿ.ಎನ್. ಸುಮಿತ್ರಾಬಾಯಿ, ಸರಹದ್ದುಗಳ ಆಚೆ-ಈಚೆ, ಇಳಾ ಪ್ರಕಾಶನ, ಬೆಂಗಳೂರು, ೨೦೦೯, ಪುಟ, ೯

ಸಹಾಯಕ ನಿರ್ದೇಶಕರು
ಭಾಷಾಂತರ ನಿರ್ದೇಶನಾಲಯ,
ಪೋಡಿಯಂ ಬ್ಲಾಕ್, ನೆಲಮಹಡಿ,
ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀದಿ,
ಬೆಂಗಳೂರು-೫೬೦೦೦೧.
ಮೊಬೈಲ್ : ೯೪೪೯೨೭೦೩೯೦.



ತ.ರಾ.ಸು ಅವರ

ಚಿತ್ರದುರ್ಗ ಸರಣಿ ಕಾದಂಬರಿಗಳು



■ **ಎಸ್.ಎಸ್.ಶ್ರೀಧರ ಮೂರ್ತಿ**

ಚಿತ್ರದುರ್ಗದ ಜನರಿಗೆ ಚಿತ್ರದುರ್ಗ ಎಂದರೆ ಒಂದು ಊರಲ್ಲ, ಕೋಟೆಯಲ್ಲ, ಬೆಟ್ಟವಲ್ಲ, ತಮ್ಮ ಕರುಳಿಗೆ ಹೊಂದಿಕೊಂಡು ಬೆಳೆದ ಜೀವಂತ ವಸ್ತು ಎಂದು ತಮ್ಮ 'ದುರ್ಗಾಸ್ತಮಾನ' ಕಾದಂಬರಿಯ ಮುನ್ನುಡಿಯಲ್ಲಿ ತ.ರಾ.ಸು. ಅವರು ಹೇಳಿಕೊಂಡಿದ್ದಾರೆ. ಈ ಮಾತನ್ನು ನೋಡಿದಾಗ ಅವರು ಭಾವುಕ ಕಾರಣಗಳಿಂದ ಚಿತ್ರದುರ್ಗ ಸರಣಿ ಕಾದಂಬರಿಗಳನ್ನು ಬರೆದರು ಎನ್ನಿಸಬಹುದು. ಇದರಲ್ಲಿ ಕೆಲಮಟ್ಟಿನ ವಾಸ್ತವ ಕೂಡ ಇದೆ. ಆದರೆ ಅದೇ ಸಂಪೂರ್ಣ ನಿಜವೂ ಅಲ್ಲ. ಈ ಕಾದಂಬರಿಗಳು ಇತಿಹಾಸದ ನಿರೂಪಣೆಗೆ ತೊಡಗಿದವುಗಳಲ್ಲ.ಅವುಗಳಲ್ಲಿರುವುದು ಸರ್ವಕಾಲಿಕ ಮಾನವೀಯ ಹುಡುಕಾಟ. ಅದಕ್ಕೆ ಈ ಪ್ರಾದೇಶಿಕ ಕ್ಯಾನ್ವಾಸ್ ಹಿನ್ನಲೆ ಒದಗಿಸಿದೆ ಅಷ್ಟೇ ಅದನ್ನು ತ.ರಾ.ಸು. ಅವರೇ ಹೀಗೆ ಗುರುತಿಸಿಕೊಂಡಿದ್ದಾರೆ.

''ಇತ್ತೀಚೆಗೆ ನಾನು ಐತಿಹಾಸಿಕ ಕಾದಂಬರಿಗಳನ್ನು ಬರೆಯಲಾರಂಭಿಸಿದ ಮೇಲೆ ಸಮಕಾಲೀನ ಜೀವನದ ಜ್ವಲಂತ ಸಮಸ್ಯೆಗಳಿಗೆ ಕುರುಡಾಗಿ ಗತಕಾಲದ ಭವ್ಯತೆಯಲ್ಲಿ ಮೈಮರೆತಿದ್ದಾರೆ ಎಂಬ ಟೀಕೆಯೊಂದು ನನ್ನ ಮಿತ್ರರಿಂದ ನನ್ನ ಮೇಲೆ ಬಂದಿದೆ. ನಾನು ಐತಿಹಾಸಿಕ ಕಾದಂಬರಿಗಳನ್ನು ಬರೆಯಲು ಅದು ಕಾರಣವಲ್ಲವೆಂದು ತಿಳಿಯ ಬಯಸುತ್ತೇನೆ. ನನ್ನ ತಿಳುವಳಿಕೆಯಲ್ಲಿ ಕನ್ನಡಿಗರಿಗೆ ತಮ್ಮ ಇತಿಹಾಸದ ಬಗ್ಗೆ ಸಾಕಷ್ಟು ಜ್ಞಾನವಿಲ್ಲವೆಂದೇ ಅನಿಸಿದೆ.

ಅದಕ್ಕೆ ಕಾರಣ ಉಳಿದ ಭಾಷೆಗಳಂತೆ ನಮ್ಮಲ್ಲಿ ಕಾದಂಬರಿಗಳ ಸಂಪ್ರದಾಯ ಬೆಳೆದು ಬರಲಿಲ್ಲ. ದಿ.ಬಿ.ವೆಂಕಟಾಚಾರ್ಯರ ಐತಿಹಾಸಿಕ ಕಾದಂಬರಿಗಳೆಲ್ಲವೂ ಬಂಗಾಳದ ಇತಿಹಾಸಕ್ಕೆ ಸಂಬಂಧಿಸಿದ ಕಾದಂಬರಿಗಳ ಅನುವಾದಗಳು. ದಿ.ಗಳಗನಾಥರ ಎರಡು ಮೂರು ಕಾದಂಬರಿಗಳನ್ನು ಬಿಟ್ಟರೆ ಉಳಿದವು ಮರಾಠಿ ಇತಿಹಾಸಕ್ಕೆ ಸಂಬಂಧಿಸಿದವು. ಇತಿಹಾಸವನ್ನು ಇತಿಹಾಸವಾಗಿಯೇ ಓದುವ ಅಭ್ಯಾಸ ಬಹುಜನರಿಗೆ ಇರುವುದಿಲ್ಲ. ಅದುದರಿಂದ ಕಾದಂಬರಿ ರೂಪದಲ್ಲಿ ಕನ್ನಡಿಗರ ಭವ್ಯ ಇತಿಹಾಸದ ಪರಿಚಯ ಮಾಡಿಕೊಡ ಬೇಕು''

ಈ ಮಾತುಗಳು ಪೂರ್ತಿ ಸತ್ಯವಲ್ಲವೆನ್ನುವುದು ಮೇಲ್ನೋಟಕ್ಕೇ ಗೋಚರಿಸುವ ಸಂಗತಿ. ಕನ್ನಡಿಗರ ಭವ್ಯ ಇತಿಹಾಸ ಪರಿಚಯ ಮಾಡಿಕೊಡುವ ಉದ್ದೇಶವನ್ನು ಹೊಂದಿ ತ.ರಾ.ಸು. ಹೊಯ್ಸಳರ ಇತಿಹಾಸವನ್ನು ಕುರಿತ ಸಿಡಲ ಮೊಗ್ಗು ಶಾಂತಲಾ, ರಾಷ್ಟ್ರಕೂಟರ ಇತಿಹಾಸವನ್ನು ಕುರಿತ 'ನೃಪತುಂಗ' ಕೃತಿಗಳನ್ನು ರಚಿಸಿದ್ದಾರೆ ನಿಜ, ಆದರೆ ಅವರಿಗೆ ಹೆಸರನ್ನು ತಂದು ಕೊಟ್ಟಿದ್ದು ಚಿತ್ರದುರ್ಗ ಸರಣಿ ಕಾದಂಬರಿಗಳು. ಇದರಲ್ಲಿ ಕನ್ನಡಿಗರ ಭವ್ಯ ಇತಿಹಾಸವನ್ನು ಪರಿಚಯ ಮಾಡಿಕೊಡುವ ಉದ್ದೇಶ ಇರಲು ಸಾಧ್ಯವಿಲ್ಲ. ಚಿತ್ರದುರ್ಗದಲ್ಲಿ ಇದ್ದಿದ್ದು ಪಾಳೆಗಾರರು. ಅವರು ಸೀಮಿತ ಪ್ರಾದೇಶಿಕ ಚೌಕಟ್ಟಿಗೆ ಒಳಪಟ್ಟವರು. ಅವರ ಕುರಿತು ದೊರಕುವ ಚಾರಿತ್ರಿಕ ಮಾಹಿತಿಗಳೂ ತೀರಾ ಕಡಿಮೆ. ತ.ರಾ.ಸು. ಅವರೇ ಹೇಳಿಕೊಂಡಂತೆ ದಿವಂಗತ ಎಂ.ಎಸ್.ಪುಟ್ಟಣ್ಣನವರು ಬರೆದ ಚಿತ್ರದುರ್ಗದ ಪಾಳೆಗಾರರು ಎಂಬ ಗ್ರಂಥದಲ್ಲಿ ದೊರಕುವ ನಾಲ್ಕು ಸಾಲು. ಹಾಗಿದ್ದರೆ ತ.ರಾ.ಸು. ಚಿತ್ರದುರ್ಗದ ಇತಿಹಾಸವನ್ನು ವಸ್ತುವಾಗಿಸಿಕೊಳ್ಳಲು ಕೇವಲ ತಮ್ಮ ನೆಲ ಎಂಬ ಅಭಿಮಾನ ಮಾತ್ರ ಕಾರಣವೇ? ಅದೂ ಪೂರ್ತಿ ಸತ್ಯವಲ್ಲ. ಈ ಕುರಿತು ದೊರೆತ ಸಾಮಗ್ರಿ ಅಲ್ಪವಾಗಿರುವುದನ್ನು ಬಳಸಿಕೊಂಡು ತ.ರಾ.ಸು. ಇತಿಹಾಸ ಮೂಲಕ ಸಮಕಾಲೀನ ಬದುಕನ್ನು ಕಟ್ಟಿಕೊಟ್ಟರು. ಅವರ ಕೃತಿಗಳು ಏಕಕಾಲಕ್ಕೆ ಐತಿಹಾಸಿಕ ಮತ್ತು ಸಾಮಾಜಿಕ ಎರಡೂ ನೆಲೆಯಲ್ಲಿ ನಿಂತು ಗೆದ್ದವು. ಸಮಕಾಲೀನ ಮತ್ತು ಸರ್ವಕಾಲೀನ ನೆಲೆಗಳನ್ನು ಹೀಗೆ ಚಾರಿತ್ರಿಕ ಚೌಕಟ್ಟು ಇಟ್ಟುಕೊಂಡು ತಲುಪಿದ ಕಾದಂಬರಿಕಾರರು ಭಾರತದಲ್ಲಿಯೇ ಇನ್ನೊಬ್ಬರು ದೊರಕುವುದು ಕಷ್ಟ. ತ.ರಾ.ಸು. ಅವರ ಚಿತ್ರದುರ್ಗ ಸರಣಿ ಕಾದಂಬರಿಗಳ ಮಹತ್ವ ಇರುವುದು ಈ ಕಾರಣಕ್ಕಾಗಿಯೇ.

ತ.ರಾ.ಸು. ಅವರು ಚಿತ್ರದುರ್ಗ ಸರಣಿಯಲ್ಲಿ ಮೊದಲು ಬರೆದ ಕೃತಿ 'ಕಂಬನಿಯ ಕೊಯಿಲು' ಅದನ್ನು ಹಿಂಬಾಲಿಸಿ 'ರಕ್ತರಾತ್ರಿ' ಮತ್ತು 'ತಿರುಗುಬಾಣ' ಕಾದಂಬರಿಗಳು ಬಂದವು. ಈ ಮೂರು ಕಾದಂಬರಿಗಳು ಒಂದು ಕಥಾನಕದ ಚೌಕಟ್ಟನ್ನು ಅಳವಡಿಸಿಕೊಂಡು ಸಮಗ್ರ ಚಿತ್ರಣವನ್ನು ನೀಡಿದ್ದವು. ಇವುಗಳು ಜನಪ್ರಿಯವಾದ ನಂತರ ತ.ರಾ.ಸು. ಅವುಗಳ ಮುಂದುವರೆದ ಭಾಗಗಳಾದ 'ಹೊಸ ಹಗಲು' ಮತ್ತು 'ವಿಜಯೋತ್ಸವ'ಗಳನ್ನು ಬರೆವರು. ನಡುವಿನ ಕಥಾನಕವಾದ 'ಕಸ್ತೂರಿ ಕಂಕಣ'ವನ್ನು ಬರೆದರು. ಈ ಮೂರು ಕಾದಂಬರಿಗಳು ವಿಸ್ತರಣದಂತಿದೆ. ಬಹು ಕಾಲದ ನಂತರ ಚಿತ್ರದುರ್ಗದ ಕೊನೆಯ ಪಾಳೇಗಾರನಾದ ವೀರ ಮದಕರಿ ನಾಯಕನ ಕುರಿತ 'ದುರ್ಗಾಸ್ತಮಾನ' ಕಾದಂಬರಿಯನ್ನು ಬರೆದರು. ಅವರ 'ಹಂಸಗೀತೆ' ಕಾದಂಬರಿ ಕೂಡ ಚಿತ್ರದುರ್ಗದ ಇತಿಹಾಸದ ಎಳೆಯನ್ನು ಹೊಂದಿತ್ತು. ಈ ಎಲ್ಲಾ ಕೃತಿಗಳನ್ನು ಈ ಲೇಖನದಲ್ಲಿ ನಾನು ವಿವರಣಾತ್ಮಕವಾಗಿ ನೋಡುವ ಬದಲು ಇವುಗಳ ಸಾರ್ವಕಾಲಿಕ ನೆಲೆಗಳನ್ನು ಪರಿಶೀಲಿಸುವ ಪ್ರಯತ್ನವನ್ನು ಮಾಡಿದ್ದೇನೆ.

ತ.ರಾ.ಸು. ಅವರ ಚಿತ್ರದುರ್ಗ ಸರಣಿ ಕಾದಂಬರಿಗಳ ಚಾರಿತ್ರಿಕ ಹಿನ್ನೆಲೆ ಈ ರೀತಿಯಲ್ಲಿದೆ. ಚಿತ್ರದುರ್ಗದ ಪಾಳೆಗಾರರು ಒಂದು ಕಾಲದಲ್ಲಿ ವಿಜಯನಗರದ ಅರಸರ ಪ್ರತಿನಿಧಿಗಳಾಗಿದ್ದವರು. ಈ ವಂಶದ ಮೂಲ ಪುರುಷನಾದ ಮತ್ತಿ ತಿಮ್ಮಣ್ಣ ನಾಯಕನನ್ನು ವಿಜಯನಗರದ ಅರಸರು ಮೊದಲು ಹೊಳಲ್ಕರೆ ಅನಂತರ ಹಿರಿಯೂರಿಗೆ ನಾಯಕನನ್ನಾಗಿ ನೇಮಿಸಿದರು. ಇವನು ಸಾಹಸ ಮತ್ತು ಪರಾಕ್ರಮಗಳಿಗೆ ಹೆಸರಾಗಿದ್ದ. ಹದಿನಾರನೇ ಶತಮಾನದ ಮಧ್ಯಭಾಗದಲ್ಲಿ ವಿಜಯನಗರದ ಚಕ್ರವರ್ತಿಗಳು ಇವನನ್ನು ಚಿತ್ರದುರ್ಗದ ಅಧಿಪತಿಯಾಗಿ ನೇಮಿಸಿದರು. ಇಲ್ಲಿ ತಿಮ್ಮಣ್ಣನಾಯಕನು ಏಳು ಸುತ್ತಿನ ಕೋಟೆಯನ್ನು ಕಟ್ಟಿಸಿದ. ಸ್ವಾಭಿಮಾನಿಯಾದ ತಿಮ್ಮಣ್ಣನಾಯಕ ತಿರುಗಿ ಬಿದ್ದ, ವಿಜಯನಗರದ ಚಕ್ರವರ್ತಿಗಳ ಬಲದ ಮುಂದೆ ಇವನ ಬಲ ಸಾಕಾಗಲಿಲ್ಲ. ತಿಮ್ಮಣ್ಣ ನಾಯಕನನ್ನು ಬಂಧಿಸಿ ಸೆರೆಯಲ್ಲಿ ಇಡಲಾಯಿತು. ಅವನು ಅಲ್ಲಿಯೇ ಸತ್ತ. ಕ್ರಿ.ಶ ೧೫೬೫ರಲ್ಲಿ ವಿಜಯನಗರ ಪತನವಾದ ನಂತರ ಚಿತ್ರದುರ್ಗ ಪಾಳೆಗಾರರು ಸ್ವಾತಂತ್ರ ಘೋಷಿಸಿಕೊಂಡರು. ತಿಮ್ಮಣ್ಣ ನಾಯಕನ ಮಗ ಓಬಣ್ಣ ನಾಯಕನು ಮದಕರಿ ನಾಯಕ ಎಂಬ ಬಿರುದನ್ನು ಧರಿಸಿ ಸ್ವತಂತ್ರ ಅರಸನಾದನು ಇಲ್ಲಿಂದ ಪಾಳೇಗಾರರ ಆಳ್ವಿಕೆ ಚಿತ್ರದುರ್ಗದಲ್ಲಿ ನಡೆದುಕೊಂಡು ಬಂದಿತು. ತ.ರಾ.ಸು. ಅವರ ಕಂಬನಿ ಕುಯಿಲುಕಾದಂಬರಿ ಆರಂಭವಾಗುವುದು ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ಸಾವಿರದ ಐದುನೂರ ತೊಂಬತ್ತಾರನೆಯ ಆನಂದ ಸಂವತ್ಸರ ಪುಷ್ಯ ಶುದ್ಧ ಪೌರ್ಣಿಮಿಯ ದಿನ. ಇದು ಚಿತ್ರದುರ್ಗದ ಇತಿಹಾಸದ ಪ್ರಸಿದ್ಧನಾದ ದೊರೆ ಇಮ್ಮಡಿ ಮದಕರಿನಾಯಕನು(ಕ್ರಿ.ಶ ೧೬೫೨-೧೬೭೪)ನು ನಿಧನನಾದ ಸಂದರ್ಭ. ಇಮ್ಮಡಿ ಮದಕರಿ ನಾಯಕನು ಗುಡೇಕೋಟೆ, ನನ್ನಿವಾಳ, ಐಮಂಗಲ, ಹಿರಿಯೂರುಗಳನ್ನು ವಶ ಪಡಿಸಿಕೊಂಡು ಸಾಮ್ರಾಜ್ಯವನ್ನು ವಿಸ್ತರಿಸಿದ್ದ ಇವನ ಕಾಲದಲ್ಲಿ ಚಿತ್ರದುರ್ಗದ ವಾರ್ಷಿಕ ಆದಾಯ ಒಂದು ಲಕ್ಷ ವರಹಗಳಿಗೆ ಏರಿತ್ತು. ಜಡೆಕಲ್ಲು ದುರ್ಗದ ಗೌಡತಿ ನಾಗಮ್ಮನನ್ನು ವಿವಾಹವಾಗಿದ್ದ ಅವನಿಗೆ ಮಕ್ಕಳಿರಲಿಲ್ಲ, ಇನ್ನೂ ಪ್ರಾಯದಲ್ಲಿಯೇ ನಿಧನರಾಗಿದ್ದರಿಂದ ರಾಜ್ಯದ ಉತ್ತರಾಧಿಕಾರಿ ಯಾರು ಎನ್ನುವ ಸಮಸ್ಯೆ ಬಂದಿತು. ಕಂಬನಿ ಕುಯಿಲು ಈ ತಲ್ಲಣದ ಕಾಲಘಟ್ಟವನ್ನು ಚಾರಿತ್ರಿಕವಾಗಿ ಹಿಡಿಯುವುದಿಲ್ಲ. ಬದಲಾಗಿ ಕಸ್ತೂರಿ ನಾಯಕ ಮತ್ತು ವೀರಣ್ಣ ನಾಯಕ ಎನ್ನುವ ಇಬ್ಬರು ಯೋಧರ ಕೌಟಂಬಿಕ ಚಿತ್ರಣದ ಮೂಲಕ ಕಾದಂಬರಿಯನ್ನು ಕಟ್ಟುತ್ತಾರೆ. ಯುದ್ಧದ ಅನಿವಾರ್ಯತೆ ಇರುವುದು ಸಾಮ್ರಾಜ್ಯಶಾಹಿಗಳಿಗೆ ಆದರೆ ಅದಕ್ಕೆ ಬಲಿಯಾಗುವುದು ದಾಳವಾಗಿ ಬಳಕೆಯಾಗುವುದು ಸೈನಿಕರು. ಇದು ಇತಿಹಾಸದ ಸಾರ್ವಕಾಲಿಕ ಸತ್ಯ. ಮೊದಲ ಕಾದಂಬರಿಯಲ್ಲಿಯೇ ಈ ತಂತ್ರವನ್ನು ಬಳಸುವ ಮೂಲಕ ತ.ರಾ.ಸು ಅದಕ್ಕೆ ಸರ್ವಕಾಲಿಕ ನೆಲೆಯನ್ನು ತಂದು ಬಿಡುತ್ತಾರೆ. ಇದು ದುರ್ಗದ ಕಥೆಯಾಗುವ ಬದಲು ಸಮರ ತರುವ ಕಂಬನಿಯ ಕಥಾನಕವಾಗುತ್ತದೆ. ಇಮ್ಮಡಿ ಮದಕರಿ ನಾಯಕನ ನಂತರ ಪಟ್ಟಕ್ಕೆ ಬಂದವನು ಎರಡನೇ ಓಬಣ್ಣ ನಾಯಕ. ಇವನ ಕಾಲದಲ್ಲಿ ಅತಿಯಾದ ಗೊಂದಲಗಳು ಉಂಟಾದವು. ದಳವಾಯಿ ಮುದ್ದಣ್ಣ ದಂಗೆ ಎದ್ದು ಇವನನ್ನು ಕೊಂದು ಹಾಕಿದರು. ನಂತರ ಬಲವಂತವಾಗಿ ಹರಪನಹಳ್ಳಿಗೆ ಓಡಿ ಹೋಗಿದ್ದ ಚಿಕ್ಕಣ್ಣ ನಾಯಕನನ್ನು ಕ್ರಿ.ಶ ೧೬೭೬ರಲ್ಲಿ ಪಟ್ಟಕ್ಕೆ ತರಲಾಯಿತು. ಚಾರಿತ್ರಿಕವಾಗಿ ಇವನ ಕಾಲ ಘರ್ಷಣೆಯ ಕಾಲ, ಚಿತ್ರದುರ್ಗ ದುರ್ಬಲವಾಗಿದ್ದನ್ನು ಅರಿತು ಹಲವು ಶತ್ರುಗಳು ದಾಳಿ ಮಾಡಿದರು. ಷಂಷೇರ್ ಖಾನನ ದಾಳಿ ಅವುಗಳಲ್ಲಿ ಬಹಳ ಮುಖ್ಯವಾದದ್ದು ಅವನು ದೊಡ್ಡ ದಂಡಿನೊಂದಿಗೆ ಹರಿಹರವನ್ನು ವಶಪಡಿಸಿಕೊಂಡಿದ್ದನ್ನು. ತ.ರಾ.ಸು. ಅವರಿಗೆ ಈ

ಚಾರಿತ್ರಿಕ ವಿವರಗಳು ಯುದ್ಧಗಳ ಅನುಕ್ರಮಣಿಕೆ ಮುಖ್ಯವಾಗುವುದಿಲ್ಲ. ಅವರು ದಳವಾಯಿ ಮುದ್ದಣ್ಣನು ದುರ್ಗದ ಅರಸನನ್ನು ತನ್ನ ಅಂಕೆಯಲ್ಲಿ ಇಟ್ಟುಕೊಳ್ಳಲು ಮಾಡಿದ ತಂತ್ರಗಳಿಗೆ ಹೆಚ್ಚು ಮಹತ್ವ ನೀಡುತ್ತಾರೆ. ನಾಗತಿಯವರಿಗೆ ಆಗುವ ಅವಮಾನದ ಮೂಲಕ ಭಾವುಕ ಸನ್ನಿವೇಶವನ್ನು ತಂದಿದ್ದಾರೆ. ದಳವಾಯಿ ದೇಸಣ್ಣ ಭುವನಪ್ಪ ಹೀಗೆ ಹಲವು ಕಾಲ್ಪನಿಕ ಪಾತ್ರಗಳನ್ನು ತಂದಿದ್ದಾರೆ. ಅವರು ರೂಪಿಸಿದ ಇಂತಹ ಪಾತ್ರಗಳಲ್ಲಿ ಬಹಳ ಮುಖ್ಯವಾದದ್ದು ರಣಹುಚ್ಚಿ ಗಿರಜೆಯದು ಈ ಪಾತ್ರವನ್ನು ತ.ರಾ.ಸು. ತಮ್ಮ ಕಾದಂಬರಿ ತ್ರಿವಳಿಗಳಲ್ಲಿ ಜನ ಸಾಮಾನ್ಯರ ಪ್ರತಿನಿಧಿಯಾಗಿ ರೂಪಿಸಿದ್ದಾರೆ. ತ.ರಾ.ಸು. ಅವರ ಕಾದಂಬರಿಗಳನ್ನು ಈ ಹಿನ್ನೆಲೆಯಲ್ಲಿ ಜನಸಾಮಾನ್ಯರ ಇತಿಹಾಸ ಎಂದು ಕರೆಯ ಬಹುದು. ಅವರ ಕಾದಂಬರಿಗಳಲ್ಲಿ ಓಜಸ್ಸು ಇದೆ, ವೀರತ್ವದ ಸಂಭಾಷಣೆ ಇದೆ, ರಾಜಕೀಯ ತಂತ್ರಗಾರಿಕೆ ಇದೆ. ಆದರೆ ಎಲ್ಲಕ್ಕಿಂತ ಮುಖ್ಯವಾಗುವುದು ಜನ ಸಾಮಾನ್ಯರು ರಾಜಕೀಯ ಚದುರಂಗದಿಂದ ಅನುಭವಿಸುವ ಬವಣೆಗಳು. ಇದು ಇಂದಿನ ಕಥೆಯೂ ಹೌದು, ಎಂದೆಂದಿನ ಕಥೆಯೂ ಹೌದು. ಈ ನೆಲೆಯಲ್ಲಿ ಚಿತ್ರದುರ್ಗದ ಸೀಮಿತ ಚೌಕಟ್ಟನ್ನು ದಾಟಿ ಅವರ ಕಾದಂಬರಿಗಳು ವಿಶ್ವದ ವಿಶಾಲ ಆಯಾಮವನ್ನು ತಲುಪಿಬಿಡುತ್ತವೆ.

ತ.ರಾ.ಸು. ಅವರ ಚಿತ್ರದುರ್ಗದ ಸರಣಿಯ ಎರಡನೇ ಕಾದಂಬರಿ 'ರಕ್ತರಾತ್ರಿ'. ಚಿಕ್ಕಣ್ಣ ನಾಯಕನು ನಿಗೂಢವಾಗಿ ಕ್ರಿ.ಶ ೧೬೮೬ರಲ್ಲಿ ಮೃತನಾದನು. ಇವನಿಗೂ ಸಂತಾನವಿರದಿದ್ದರಿಂದ ಸಹೋದರ ಲಿಂಗಣ್ಣ ನಾಯಕನು ಅರಸನಾದನು. ಇವನು ಮೂರನೇ ಮದಕರಿ ನಾಯಕ ಎಂದು ತನ್ನನು ಕರೆದುಕೊಂಡನು. ಇವನನ್ನು ಕೈಗೊಂಬೆಯಾಗಿಸಿಕೊಂಡು ರಾಜ್ಯವನ್ನು ಆಳಬೇಕು ಎನ್ನುವುದು ದಳವಾಯಿ ಮುದ್ದಣ್ಣನ ಹಂಚಿಕೆಯಾಗಿತ್ತು. ಆದರೆ ಸ್ವತಂತ್ರ ಪ್ರೇಮಿಯಾದ ಲಿಂಗಣ್ಣ ನಾಯಕನು ತನ್ನ ಸ್ವಂತಿಕೆ ತೋರಿಸಲು ಪ್ರಯತ್ನಿಸಿದನು. ಆದರೆ ಇವನು ರಾಜಕೀಯ ತಂತ್ರಗಾರಿಕೆಯಲ್ಲಿ ದುರ್ಬಲನಾಗಿದ್ದನು. ಜನಬೆಂಬಲವನ್ನೂ ಪಡೆದಿರಲಿಲ್ಲ. ದಳವಾಯಿ ಮುದ್ದಣ್ಣನು ತನ್ನ ತಂತ್ರಗಾರಿಕೆಯನ್ನು ಬಳಸಿ ಲಿಂಗಣ್ಣ ನಾಯಕನ ಕಗ್ಗೊಲೆಯನ್ನು ಮಾಡಿದನು. ಇದಿಷ್ಟೇ ಈ ಕಾಲಘಟ್ಟದ ಕುರಿತು ಸಿಕ್ಕುವ ಚಾರಿತ್ರಿಕ ಮಾಹಿತಿ. ಇದನ್ನು ತ.ರಾ.ಸು. ತಮ್ಮ ಕಲ್ಪನೆಯಿಂದ ವಿಪುಲವಾಗಿ ಬೆಳೆಸಿದ್ದಾರೆ. ಇದು ಮುದ್ದಣ್ಣನ ಚರಿತ್ರೆಯಾಗಿ ಉಳಿಯದೆ ಸರ್ವಾಧಿಕಾರಿಗಳ ಚಿತ್ರಣ ಕೂಡ ಆಗಿದೆ. ರಕ್ತರಾತ್ರಿ ಕಾದಂಬರಿಯಲ್ಲಿ ತ.ರಾ.ಸು. ಬಳಸಿರುವ ನಾಟಕೀಯತೆ ಅದರ ಪರಿಣಾಮವನ್ನು ಹೆಚ್ಚಿಸಿದೆ(ಇದು ಯಶಸ್ವಿ ನಾಟಕ ಕೂಡ ಆಗಿತ್ತು ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು). ಚರಿತ್ರೆಯಲ್ಲಿ ದುರ್ಬಲ ರಾಜ ಎಂದು ಕರೆಸಿಕೊಂಡಿರುವ ಲಿಂಗಣ್ಣ ನಾಯಕ ತ.ರಾ.ಸು. ಅವರ ಕಾದಂಬರಿಯಲ್ಲಿ ಸ್ವಾತಂತ್ರ್ಯದ ಸಂಕೇತವಾಗಿದ್ದಾನೆ. ಇವರ ಜೊತೆಗೆ ಪ್ರಜೆಗಳಲ್ಲಿನ ಸ್ವಾತಂತ್ರ್ಯದ ಹಂಬಲವನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಇಡೀ ಕಾದಂಬರಿಯ ಸ್ವರೂಪಕ್ಕೆ ಗ್ರೀಕ್ ರುದ್ರನಾಟಕಗಳ ಮಾದರಿಯ ದುರಂತದ ಗಾಂಭೀರ್ಯತೆ ಇದೆ. ಕನ್ನಡದ ಮಟ್ಟಿಗೆ ಬಹು ಅಪರೂಪ ಎಂದು ಕರೆಯ ಬಹುದಾದ ಕಾದಂಬರಿ ಇದು. ಇದನ್ನು ವಿಸ್ತರಿಸಿ ರಾಜ್ಯದಾಹ ಎನ್ನುವ ಕಾದಂಬರಿಯನ್ನು ನಂತರದ ದಿನಗಳಲ್ಲಿ ತ.ರಾ.ಸು. ಅವರ ಬರೆದರು. ಇದು ಸರ್ವಾಧಿಕಾರಿಗಳ ಅಟ್ಟಹಾಸದಂತೆ ರೂಪಿಸಿಲ್ಪಟ್ಟಿದ್ದು ಚರಿತ್ರೆಗಿಂತ ಹೆಚ್ಚಾಗಿ ಸಾರ್ವಕಾಲಿಕ ಸತ್ಯವೊಂದರ ಜನಪ್ರಿಯ ಚಿತ್ರಣವಾಗಿದೆ.

'ತಿರುಗು ಬಾಣ' ಸತ್ಯಕ್ಕೆ ಎಂದಿಗೂ ಜಯ ಎನ್ನುವ ಭಾರತೀಯ ನಂಬಿಕೆಗೆ ಅನುಗುಣವಾಗಿ

ರೂಪುಗೊಂಡಂತಹ ಕಾದಂಬರಿ. ಮೊದಲೆರಡು ಕಾದಂಬರಿಗಳಲ್ಲಿನ ದುರಂತಗಳನ್ನು ಕಂಡು ನಡುಗಿಹೋಗಿದ್ದ ಓದುಗರ ಸಂತಸಕ್ಕೆ ಎಂದು ಬರೆದಂತಿರುವ ಈ ಕಾದಂಬರಿಯಲ್ಲಿ ರಂಜನೀಯವಾಗಿ ಸರ್ವಾಧಿಕಾರಿಯ ಪತನವನ್ನು ಚಿತ್ರಿಸಲಾಗಿದೆ. ಗಮನಿಸ ಬೇಕಾದ ಸಂಗತಿ ಎಂದರೆ ಸಾಮಾನ್ಯವಾಗಿ ಐತಿಹಾಸಿಕ ಕಾದಂಬರಿಗಳಲ್ಲಿ ಆಗುವಂತೆ ಇಲ್ಲಿ ಎರಡು ಪಕ್ಷಗಳ ನಡುವಿನ ಹೋರಾಟ ಚಿತ್ರಿತವಾಗಿಲ್ಲ, ಜನಸಾಮಾನ್ಯರ ಆಕ್ರೋಶವನ್ನು ವ್ಯವಸ್ಥಿತವಾಗಿ ಸಾಂದ್ರೀಕರಿಸುವ ಕೆಲಸ ಇಲ್ಲಿ ನಡೆದಿದೆ. ಈ ಮೂಲಕ ತ.ರಾ.ಸು. ಚಾರಿತ್ರಿಕ ಚೌಕಟ್ಟಿನಲ್ಲಿಯೇ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬಿಂಬಿಸಿದ್ದಾರೆ. ತ.ರಾ.ಸು. ಊಳಿಗಮಾನ್ಯ ವ್ಯವಸ್ಥೆಯನ್ನು ವೈಭವೀಕರಿಸುತ್ತಾರೆ ಎಂದು ಆಕ್ಷೇಪವನ್ನು ವ್ಯಕ್ತಪಡಿಸುವವರು ಅಗತ್ಯವಾಗಿ ಈ ಕಾದಂಬರಿಯನ್ನು ಓದಬೇಕು. ಸರ್ವಾಧಿಕಾರಿ ದಳವಾಯಿ ಮುದ್ದಣ್ಣನನ್ನು ಕೊಲ್ಲುವುದು ಅವನ ಎದುರಾಳಿಯಾದ ಭರಮಣ್ಣ ನಾಯಕನಲ್ಲ ಬದಲಾಗಿ ಜನಸಾಮಾನ್ಯರ ಪ್ರತಿನಿಧಿಯಾದ ಗಿರಿಜೆ. ಈ ಅಂಶದಲ್ಲಿಯೇ ತ.ರಾ.ಸು. ಅವರ ಉದ್ದೇಶ ಸ್ಪಷ್ಟವಾಗಿದೆ. ರಕ್ತಪಾತ ಹರಿಸಿದ ಮುದ್ದಣ್ಣನ ಅವಸಾನವನ್ನು ರಕ್ತ ಹರಿಸದೆ ಸಾಧಿಸುವ ರಾಜಕೀಯ ಜಾಣ್ಮೆಯನ್ನು ತ.ರಾ.ಸು. ಈ ಕೃತಿಯಲ್ಲಿ ಪರಿಣಾಮಕಾರಿಯಾಗಿ ತಂದಿದ್ದಾರೆ. ಚಾರಿತ್ರಕವಾಗಿ ದಳವಾಯಿ ಮುದ್ದಣ್ಣನ ಅಟ್ಟಹಾಸದ ಕಾಲ ಕ್ರಿ.ಶ ೧೬೮೬ರಿಂದ ಕ್ರಿ.ಶ ೧೬೮೯ರವರೆಗಿನ ಮೂರು ವರ್ಷಗಳು. ಅಲ್ಲಿ ಕೂಡ ಅವನು ದೊಣ್ಣೆ ರಂಗಪ್ಪ ನಾಯಕ, ನರಗನಹಳ್ಳಿ ರಘುವಪ್ಪ ಚಕ್ರವರ್ತಿ, ಸೂರಕಾಂತಿ ರಂಗಪ್ಪ ನಾಯಕ ಹೀಗೆ ಒಬ್ಬರ ನಂತರ ಇನ್ನೊಬ್ಬರು ಪಾಳೆಗಾರರನ್ನು ಪಟ್ಟಕ್ಕೆ ತಂದು ಕೊಂದು ಹಾಕಿದ ಇಲ್ಲವೆ ಪದಚ್ಯುತನಾಗಿಸಿದ ಎನ್ನುತ್ತದೆ ಇತಿಹಾಸ. ಈ ಅಂಶ ತ.ರಾ.ಸು. ಅವರಿಗೆ ಮುಖ್ಯವಾದದ್ದಲ್ಲ, ಅವರ ಕಾದಂಬರಿಯ ಉದ್ದೇಶ ಸರ್ವಾಧಿಕಾರಿಯ ಹುಟ್ಟು ಅಟ್ಟಹಾಸ ಮತ್ತು ಪತನ. ಇದು ಹಿಟ್ಲರ್, ಮುಸಲೋನಿಯವರಿಂದ ಸದ್ದಾಂ ಹುಸೇನ್‌ವರೆಗೆ ಜಗತ್ತಿನ ಎಲ್ಲಾ ಸರ್ವಾಧಿಕಾರಿಗಳ ಕಥೆ ಕೂಡ ಆಗುತ್ತದೆ. ಈ ಸಂರಚನೆಯ ಕಾರಣಕ್ಕೆ 'ಕಂಬನಿಯ ಕೊಯಿಲು', 'ರಕ್ತರಾತ್ರಿ', 'ತಿರುಗುಬಾಣ' ಕಾದಂಬರಿ ತ್ರಿವಳಿಗಳು ಚಿತ್ರದುರ್ಗದ ಸೀಮಿತ ಪ್ರಾದೇಶಿಕತೆಯನ್ನು ಮೀರಿ ಕನ್ನಡಿಗರಿಗೆಲ್ಲವೂ ಪ್ರಿಯವಾದ ಕೃತಿಗಳಾಗಿವೆ.

ಚಿತ್ರದುರ್ಗದ ರಾಜಕೀಯ ತಲ್ಲಣದ ಕಥೆಗಳನ್ನು ಬರೆದ ಹಾಗೇ ಅದರ ವೈಭವವನ್ನೂ ಬರೆಯ ಬೇಕು ಎನ್ನುವುದು ಹಲವು ಓದುಗರ ಅಪೇಕ್ಷೆಯಾಗಿತ್ತು. ಈ ಹಿನ್ನೆಲೆಯಲ್ಲಿ ದಳವಾಯಿ ಮುದ್ದಣ್ಣನ ಪತನದ ನಂತರ ಪಟ್ಟಕ್ಕೆ ಬಂದ ಭರಮಣ್ಣ ನಾಯಕನ ಚಿತ್ರಣವನ್ನು ಹೊಸ ಹಗಲು ಮತ್ತು ವಿಜಯೋತ್ಸವ ಎನ್ನುವ ಎರಡು ಕೃತಿಗಳಲ್ಲಿ ತ.ರಾ.ಸು. ಅವರ ಚಿತ್ರಿಸಿದ್ದಾರೆ. ಇದರ ಭಿನ್ನತೆ ಕುರಿತು ತ.ರಾ.ಸು. ಅವರೇ ಹೀಗೆ ಹೇಳಿಕೊಂಡಿದ್ದಾರೆ ''ಈ ಕಾದಂಬರಿಗಳ ನಾಯಕನಾದ ಭರಮಣ್ಣ ನಾಯಕ ಚಿತ್ರದುರ್ಗದ ಇತಿಹಾಸಲ್ಲಿಯೇ ಅತ್ಯಂತ ಭವ್ಯವಾದ ವ್ಯಕ್ತಿ. ಚಿತ್ರದುರ್ಗದ ಕೀರ್ತಿಯನ್ನು ಹಿರಿಮೆಯ ಶಿಖರಕ್ಕೆ ಏರಿಸಿದಾತ. ಅದು ಕೀರ್ತಿಯ ಕಾಲವೂ ಅಹುದು; ಸಾಲು ಕಾಳಗಗಳ ಕಾಲವೂ ಹೌದು. ಆದರೆ ಆತನ ಬಾಳು ಬರೀ ಕಾಳಗಕ್ಕೆ ಮೀಸಲಾಗದೆ ಚಿತ್ರದುರ್ಗ ಜಿಲ್ಲೆಯ ಹತ್ತಾರು ದೊಡ್ಡ ಕೆರೆಗಳು, ಇಪ್ಪತ್ತು ಮುವತ್ತು ಸಣ್ಣ ಪುಟ್ಟ ಕೆರೆಗಳು, ಚಿತ್ರದುರ್ಗದ ಹಲವಾರು ಭವ್ಯ ಮಂದಿರಗಳು ಆತನ ಕೀರ್ತಿಗೆ ಸ್ಮಾರಕಗಳಾಗಿವೆ. ಆ ಧೀರ ಜೀವನದ ಮೊದಲ ಘಟ್ಟ ಹೊಸ ಹಗಲಿನಲ್ಲಿಯೂ ಎರಡನೇ ಘಟ್ಟವನ್ನು ವಿಜಯೋತ್ಸವದಲ್ಲಿಯೂ ಚಿತ್ರಿಸಿದ್ದೇನೆ'' ಎಂದಿದ್ದಾರೆ. ಇದರ ಜೊತೆಗೆ ಅವರೇ ಗುರುತಿಸಿಕೊಂಡಿರುವ ಇನ್ನೊಂದು ಮುಖ್ಯವಾದ

ಸಂಗತಿ ಎಂದರೆ 'ಕುಂಬನಿಯ ಕೊಯಿಲು', 'ರಕ್ತರಾತ್ರಿ', 'ತಿರುಗು ಬಾಣ' ಕಾದಂಬರಿಗಳಿಗೂ ಇದಕ್ಕೂ ಒಂದು ದೊಡ್ಡ ವ್ಯತ್ಯಾಸವನ್ನು ಓದುಗರು ಕಾಣಬಹುದು. ಅಲ್ಲಿ ಕಾಣುವುದು ವಿನಾಶೋನ್ಮುಖವಾದ ಉಲ್ಕೆಯ ಕಣ್ಣು ಕೋರೈಸುವ ಬೆಳಕು; ಇಲ್ಲಿನದು ದೇಶಕ್ಕೆ ಬೆಳಕು ನೀಡ ಹೊರಟ ದೀಪದ ಪ್ರಶಾಂತ ಕಾಂತಿ. ಮುದ್ದಣ್ಣನಂತೆ ಭರಮಣ್ಣ ರಕ್ತಕ್ಕೆ ಹಸಿದ ಹೆಬ್ಬುಲಿಯಲ್ಲ ಇದು ಟಿಪ್ಪಣಿಗಳೇ ಬೇಕಿಲ್ಲದ ನಿಖರವಾದ ಮತ್ತು ಸಮರ್ಪಕವಾದ ತಾತ್ವಿಕ ಚೌಕಟ್ಟಾಗಿದೆ. ತ.ರಾ.ಸು. ಅವರ ಕೃತಿಗಳ ಮಾಪಕವನ್ನೂ ಇಲ್ಲಿ ನೋಡಬಹುದು.

ಚಿತ್ರದುರ್ಗದಲ್ಲಿ ಬಿಚ್ಚುಗತ್ತಿ ಭರಮಣ್ಣ ನಾಯಕನ ಆಳ್ವಿಕೆ ನಡೆಯುತ್ತಿರುವಾಗ ಮೊಘಲರು ದಕ್ಷಿಣ ಭಾರತದ ಕಡೆ ನುಗ್ಗುತ್ತಿದ್ದರು. ಈ ಅಂಶ ತ.ರಾ.ಸು. ಅವರ ಎರಡೂ ಕಾದಂಬರಿಗಳಲ್ಲಿ ಮಹತ್ವನ್ನು ಪಡೆಯುವುದಿಲ್ಲ. ಅವರಿಗೆ ಮುಖ್ಯವಾಗುವುದು ಕುಸಿದು ಹೋಗಿದ್ದ ರಾಜ್ಯವನ್ನು ಹೊಸ ನಾಯಕನೊಬ್ಬ ಹೇಗೆ ಮರಳಿ ಕಟ್ಟಿದ ಎನ್ನುವುದು. ಈ ಮೂಲಕ ಅವರು ನಾಯಕತ್ವದ ಹೊಣೆಗಾರಿಕೆಯನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ. ಭರಮಣ್ಣ ನಾಯಕನು ಅಧಿಕಾರಕ್ಕೆ ಬಂದ ಹೊಸತರಲ್ಲಿಯೇ ಹರಪನಹಳ್ಳಿ ಪಾಳೆಗಾರನು ಬಿದನೂರಿನ ಅರಸನ ಸಹಾಯದಿಂದ ಅಣಜಿ ಕೋಟೆಯನ್ನು ಆಕ್ರಮಿಸಿದ್ದ. ನಾಯಕನು ಅದನ್ನು ಮರಳಿ ಹೇಗೆ ವಶ ಪಡಿಸಿಕೊಂಡನು ಎನ್ನುವುದು ಹೊಸ ಹಗಲುಕಾದಂಬರಿಯ ವಸ್ತು. ರಂಗಪ್ಪ ನಾಯಕ, ಕೆಂಚಪ್ಪ ಮೊದಲಾದವರ ಒಳತಂತ್ರಗಳೇ ದುರ್ಗದ ವಿರುದ್ದ ದಂಡೆತ್ತಿ ಬರಲು ಶತ್ರುಗಳಿಗೆ ನೆರವಾಗಿದ್ದ ಎನ್ನುವುದನ್ನು ಸೂಕ್ಷ್ಮವಾಗಿ ತ.ರಾ.ಸು. ಅವರು ಚಿತ್ರಿಸುತ್ತಾರೆ. ಕಥೆ ಇಲ್ಲಿ ವಿಸ್ತಾರವಾಗಿ ಇಲ್ಲದಿದ್ದರೂ ವರ್ಣನೆಗಳು ಕಾದಂಬರಿಯನ್ನು ರೋಚಕಗೊಳಿಸಿವೆ. ಅಣಜಿಯ ಕೋಟೆ ಹರಪನ ಹಳ್ಳಿಯ ಸೀಮೆಗೆ ಬಹಳ ಹತ್ತಿರವಾದದ್ದು. ಹರಪನ ಹಳ್ಳಿಯ ಗಡಿಯ ಕೋಟೆಗಳಲ್ಲಿ ಅತ್ಯಂತ ಪ್ರಬಲವಾದ ಉಚ್ಚಂಗಿ ದುರ್ಗದಿಂದ ಕೇವಲ ಒಂದೂವರೆ ಹರದಾರಿ ದೂರದ್ದು. ಎಂತಲೇ ದುರ್ಗದ ಪಾಳಯಗಾರರು ತಮ್ಮ ವಿಷಯದಲ್ಲಿ ಅಜನ್ಮ ದ್ವೇಷ ಸಾಧಿಸುತ್ತಿದ್ದ ಹರಪನಹಳ್ಳಿಯವರ ಮೇಲೆ ದಾಳಿಯ ಬಯಕೆಯನ್ನು ಹಿಮ್ಮೆಟ್ಟಿಸಲು ಅಣಜಿಯ ಕೋಟೆಯನ್ನು ಅದಷ್ಟು ಬಲವಾಗಿ ಕಟ್ಟಿದ್ದರು. ಹೀಗಿದ್ದರೂ ಅಣಜಿಯ ಮೇಲೆ ದಾಳಿ ನಡೆಯುತ್ತದೆ ರಕ್ತದ ಹೊಳೆ ಹರಿಯುತ್ತದೆ. ಸ್ವತಃ ದಳವಾಯಿ ಭರಮಣ್ಣನೇ ರಣ ಪಯಣಕ್ಕೆ ಮುಂದಾಗುತ್ತಾನೆ. ತನ್ನ ಸೇನೆಯನ್ನು ವಿಭಜಿಸಿ ಬಿಳಿಚೋಡಿನ ಕಡೆಯಿಂದ ಇನ್ನೊಂದು ತುಕಡಿ ಬರುವಂತೆ ಮಾಡುತ್ತಾನೆ. ಹೀಗಿದ್ದರೂ ಅಣಜಿ ಯುದ್ಧದಲ್ಲಿ ದುರ್ಗದ ಸೇನೆಗೆ ಸೋಲಾಗುತ್ತದೆ. ಮೊದಲ ಯುದ್ಧದಲ್ಲಿಯೇ ಎದುರಾದ ಸೋಲು ಭರಮಣ್ಣ ನಾಯಕನನ್ನು ಕಂಗೆಡಿಸುತ್ತದೆ. ಆಗ ಮುರುಘರಾಜೇಂದ್ರ ಸ್ವಾಮಿಗಳ ಹಿತವಚನ ಅವನಲ್ಲಿ ಚೇತನವನ್ನು ತುಂಬುತ್ತದೆ. ಹರಪನ ಹಳ್ಳಿಯವರ ವಿಜಯಕ್ಕೆ ಕೆಳದಿಯವರ ನೆರವೇ ಕಾರಣ ಎನ್ನುವುದನ್ನು ಮಂತ್ರಿ ಪರುಶುರಾಮಪ್ಪನವರು ಪತ್ತೆ ಹಚ್ಚಿ ಹಾವನೂರು, ಗುಡ್ಡೇಕೋಟೆ,' ಅನಂತಪುರ, ತರೀಕರೆ ಮೊದಲಾದ ಪಾಳೇಗಾರರ ನೆರವನ್ನು ಪಡೆದುಕೊಂಡು ಯುದ್ಧಕ್ಕೆ ಸಿದ್ದನಾಗುತ್ತಾನೆ, ಇತ್ತ ಔರಂಗಜೇಬನ ದಾಳಿಯಿಂದಾಗಿ ಕೆಳದಿಯವರ ನೆರವು ಹರಪನ ಹಳ್ಳಿಯ ಪಾಳೇಗಾರನಿಗೆ ಸಿಕ್ಕುವುದಿಲ್ಲ. ಇಲ್ಲಿ ಗೆಲುವಾದರೂ ಈ ಮೆರವಣಿಗೆಯನ್ನು ಹಿಂಬಾಲಿಸಿ ದುರ್ಗದೊಳಗೆ ಬರುತ್ತಿರುವ ಕಂಕಾಳಗಳ ಕರಾಳ ಛಾಯೆ ಎನ್ನುವ ಸ್ವಾಮಿಗಳ ಮಾತಿನಲ್ಲಿ ಹೊಸ ಹಗಲಿನ ಹಿಂದೆ ಕರಾಳ ರಾತ್ರಿ ಕಾಯುತ್ತಿದೆ ಎನ್ನುವ ಕುತೂಹಲಕರ ಅಂಶದೊಂದಿಗೆ ಕಾದಂಬರಿ

ಮುಕ್ತಾಯವಾಗುತ್ತದೆ. ಇದು ಮುಂದಿನ ಭಾಗವನ್ನು ಓದುವಂತೆ ಮಾಡಲು ಪ್ರಯೋಗಿಸಿರುವ ತಂತ್ರ ಎನ್ನುವುದು ಸರಳ ಸಂಗತಿ ಅದರೊಡನೆ ಗೆಲುವಿನ ಹಿಂದೆ ಎಂದಿಗೂ ಸೋಲಿನ ಕರಾಳತೆ ಇದೆ ಎನ್ನುವ ಸಾರ್ವಕಾಲಿಕ ಸತ್ಯ ಕೂಡ ಇದೆ.

'ವಿಜಯೋತ್ಸವ' ಕಾದಂಬರಿಯಲ್ಲಿ ತ.ರಾ.ಸು. ಅಳವಡಿಸಿಕೊಂಡಿರುವ ವಸ್ತುವಿಗೆ ಇತಿಹಾಸ ದಿಂದ ಸಾಕಷ್ಟು ಸಾಮಗ್ರಿಗಳೇನು ಇಲ್ಲ. ಇದರಲ್ಲಿ ಕಲ್ಪನೆಯೇ ಬಹುಭಾಗ ಸೇರಿರುವುದರ ಜೊತೆಗೆ ಇದುವರೆಗಿನ ತ.ರಾ.ಸು. ಅವರ ಕಾದಂಬರಿಗಳಿಗಿಂತ ಭಿನ್ನವಾದ ತಾತ್ವಿಕತೆ ಇಲ್ಲಿದೆ. ಇದುವರೆಗೆ ಚಿತ್ರದುರ್ಗಕ್ಕೆ ಸಂಬಂಧಿಸಿದ ಅವರ ಕೃತಿಗಳಲ್ಲಿ ಮಣ್ಣಿನ ಕುರಿತ ಭಾವುಕತೆ ಪ್ರಧಾನವಾಗುತ್ತಿತ್ತು. ಇಲ್ಲಿ ಗಂಭೀರವಾದ ತಾತ್ವಿಕ ಪ್ರಶ್ನೆಯೊಂದನ್ನು ಅವರು ಎತ್ತಿಕೊಂಡಿದ್ದಾರೆ. ಹಿಂದೂ ಧರ್ಮವನ್ನು ತುಳಿದು ಮೆಟ್ಟಬೇಕೆಂಬ ಔರಂಗಜೇಬನ ಅತಿಯಾಸೆ ಬೆಳೆದಂತೆ ಮುಸ್ಲಿಂ ಮತವನ್ನು ಹಿಂದೂಸ್ಥಾನದಿಂದಾಚೆ ಅಟ್ಟಬೇಕೆಂಬ ಬಯಕೆಯೂ ಬೆಳೆಯಿತು. ಒಂದು ಕಡೆ ಮರಾಠರು ಮತ್ತೊಂದು ಕಡೆ ರಜಪೂತರು ಮುಸ್ಲಿಂ ಮರ್ಧನ ಕಾರ್ಯಕ್ಕಾಗಿ ಖಡ್ಗ ಹಿಡಿದು ನಿಂತರು. ಒಂದು ಕಡೆ 'ದೀನ್ ದೀನ್ ಅಲ್ಲಾ ಹೂ ಅಕ್ಬರ್' ಎಂಬ ಜೆಹಾದ್‌ನ ಘೋಷಣೆ ಇನ್ನೊಂದೆಡೆ 'ಜೈ ಭವಾನಿ ಜೈ ಮಹಾಕಾಳಿ' ಎಂಬ ಧರ್ಮಯುದ್ಧದ ಸಮರಾಕ್ರಂಧನದಿಂದ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ನೆಲವೆಲ್ಲಾ ರಕ್ತಗೆಸರಾಯಿತು ಎನ್ನುವುದು ಅವರು ನಿರೂಪಿಸ ಬಯಸಿರುವ ಚಾರಿತ್ರಿಕ ಕಾಲಘಟ್ಟ. ಇದು ವಾಸ್ತವವೇನೋ ಹೌದು ಆದರೆ ಅಂತಹ ಧರ್ಮ ಸಂಗ್ರಾಮ ಈ ಘಟ್ಟದಲ್ಲಿ ಚಿತ್ರದುರ್ಗದಲ್ಲಿ ನಡೆದಿರಲಿಲ್ಲ. ಇತಿಹಾಸ ಪ್ರಕಾರ ಬಿಜಾಪುರದ ದಿಲಾವರ್ ಖಾನನು ಹಿರಿಯೂರನ್ನು ಆಕ್ರಮಿಸಿದ್ದ ಭರಮಣ್ಣ ನಾಯಕನು ಅವನನ್ನು ಸೋಲಿಸಿದ. ಇದರಿಂದ ಅವನ ಖ್ಯಾತಿ ಎಲ್ಲೆಡೆ ಹರಿಡಿತು. ಆದರೆ ತ.ರಾ.ಸು. ಈ ಎಳೆಯನ್ನು ಬಳಸಿ ಸೀರ್ಯಾದ ಪಾಳೆಗಾರರ ಪ್ರಸ್ತಾಪ ತರುತ್ತಾರೆ. ಅವರಿಗೆ ನೆರವಾಗಲು ಭರಮಣ್ಣನಾಯಕನು ಮರಾಠರನ್ನು ಎದುರಿಸಿ ಸೋಲಿಸಿದ ಪ್ರಸಂಗವನ್ನು ತರುತ್ತಾರೆ. ಈ ರಾಜಕೀಯ ಚದುರಂಗದಾಟದಲ್ಲಿ ಮೆಹರ್ ಬಾನ್ ಎನ್ನುವ ಚೆಲುವೆ ಮತ್ತು ಜಾನ್ ಎಂಬ ವಿದೇಶಿಯನನ್ನೂ ತರುತ್ತಾರೆ. ಪ್ರಗತಿಶೀಲ ಬರಹಗಾರರು ಅದರಲ್ಲಿಯೂ ತ.ರಾ. ಸು. ಅವರ ಗುರುಗಳಾದ ಅ.ನ.ಕೃ. ಪ್ರಬಲ ಹಿಂದೂವಾದವನ್ನು ಪ್ರತಿಪಾದಿಸುತ್ತಿದ್ದರು. ಆದರೆ ತ.ರಾ.ಸು. ಅವರೆಲ್ಲರಿಗಿಂತ ಭಿನ್ನರಾಗಿ ಮಾನವತಾವಾದವೇ ಧರ್ಮಕ್ಕಿಂತಲೂ ದೊಡ್ಡದು ಎನ್ನುವುದನ್ನು ಈ ಕೃತಿಯಲ್ಲಿ ಪ್ರತಿಪಾದಿಸಿದರು. ಹಿಂದೂ ಮುಸ್ಲಿಂ ಮತ್ತು ಕ್ರಿಶ್ಚಯನ್ ಧರ್ಮಗಳ ನಡುವಿನ ಸಾಮರಸ್ಯ ಹೇಗಿರಬೇಕು ಎನ್ನುವುದನ್ನು ಈ ಕೃತಿಯಲ್ಲಿ ತೋರಿಸಿಕೊಟ್ಟರು. ಈ ಅರ್ಥದಲ್ಲಿ ವಿಜಯೋತ್ಸವ ಕನ್ನಡದ ನಿಜವಾದ ಅರ್ಥದ ಸೆಕ್ಯೂಲರ್ ಕೃತಿಯಾಗಿದೆ. ಇದನ್ನು ಚಿತ್ರದುರ್ಗದ ಕುರಿತ ಕೃತಿ ಎಂದು ಸೀಮಿತಗೊಳಿಸಿದ್ದರಿಂದ ಇಂತಹ ಚರ್ಚೆಗಳು ನಡೆಯಲಿಲ್ಲ. ವಿಮರ್ಶಕರೂ ಕೂಡ ಇಂತಹ ಸೂಕ್ಷ್ಮ ಓದನ್ನು ಈ ಕೃತಿಗೆ ನೀಡಲಿಲ್ಲ. ಇದು ಕನ್ನಡ ಸಾಹಿತ್ಯದ ದುರಂತ ಕೂಡ ಹೌದು. ತ.ರಾ.ಸು. ಅವರ ಈ ಕೃತಿಯ ಇನ್ನೊಂದು ವಿಶೇಷವೆಂದರೆ ಇದು ಹೆಣ್ಣಿನ ಸ್ವಾಭಿಮಾನವನ್ನು ಎತ್ತಿ ಹಿಡಿಯುತ್ತದೆ. ತಮ್ಮ ಎಲ್ಲಾ ಕೃತಿಗಳಲ್ಲಿಯೂ ಹೆಣ್ಣನ್ನು ತ.ರಾ.ಸು. ಗೌರವದಿಂದ ಚಿತ್ರಿಸಿದ್ದಾರೆ. ಅ.ನ.ಕೃ., ಬಸವರಾಜ ಕಟ್ಟೀಮನಿ ಮೊದಲಾದ ಪ್ರಗತಿಶೀಲ ಲೇಖಕರಲ್ಲಿ ಕಂಡು ಬರುವ ಲಂಪಟತನ ಅವರ ಯಾವ ಕೃತಿಗಳಲ್ಲಿಯೂ ಕಾಣ ಸಿಕ್ಕುವುದಿಲ್ಲ. ಅದರಲ್ಲಿಯೂ 'ವಿಜಯೋತ್ಸವ' ಕೃತಿಯಲ್ಲಿ ಅವರು ಚಿತ್ರಿಸಿರುವ ಮೆಹರ್ ಬಾನಳ ವ್ಯಕ್ತಿತ್ವ ಅವರೇ

ಹಿಂದೆ ಚಿತ್ರಿಸಿದ ಗಿರಿಜೆ ಪಾತ್ರದಷ್ಟೇ ಉಜ್ವಲವಾದದ್ದು. ''ಪುರುಷರಿಂದಲೇ ಆಳಲ್ಪಡುತ್ತಿರುವ ಈ ಜಗತ್ತಿನಲ್ಲಿ ಪುರುಷರು ಹೆಣ್ಣು ಮಾಯೆ, ಮುಕ್ತಿಗೆ ಮಾರಕ ಎಂಬ ಭಾವನೆಯನ್ನು ಪ್ರಚಾರ ಮಾಡಿದ್ದಾರೆ. ತಾನೊಬ್ಬನೇ ತಪಸ್ಸಿನಿಂದ ಕಲಾರಾಧನೆಯ ಮೂಲಕ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು ಎನ್ನುವಂತೆ. ಆದರೆ ತೊರೆ ನದಿಯಲ್ಲಿ ಬೆರೆಯುವಂತೆ ನದಿ ಕಡಲಲ್ಲಿ ಬೆರೆಯುವಂತೆ ನದಿಯನ್ನುಂಡ ಕಡಲು ವೃಷ್ಟಿರೂಪವಾಗಿ ಗಿರಿಶಿಖರವನ್ನು ಆಲಂಗಿಸುವಂತೆ ಸ್ತ್ರೀ ಪುರುಷರ ಸಖ್ಯ ಕೂಡ ನಿಸರ್ಗ ನಿಯಮವೇ'' ಎನ್ನುವ ಮಾತು ಈ ಕೃತಿಯಲ್ಲಿದೆ. ಅದು ತ.ರಾ.ಸು. ಅವರ ಒಟ್ಟು ಸಾಹಿತ್ಯದ ಆಶಯ ಕೂಡ ಆಗಿದೆ ಎನ್ನಬಹುದು.

'ಹಂಸಗೀತೆ' ಸಂಗೀತಗಾರರಾದ ಭೈರವಿ ವೆಂಕಟ ಸುಬ್ಬಯ್ಯನವರ ಜೀವನದ ಏರಿಳಿತಗಳನ್ನು ಹೇಳುವ ಕೃತಿ. ಇದನ್ನು ಚಿತ್ರದುರ್ಗದ ಕ್ಯಾನ್ವಾಸಿನಲ್ಲಿ ಇಡುವ ಮೂಲಕ ಆಗಲೇ ತಮ್ಮ ಕೃತಿಗಳು ಸಾಧಿಸಿದ್ದ ಚೌಕಟ್ಟಿನ ಜೊತೆಗೆ ಸಾವಯವ ಬಂಧವನ್ನು ತಂದು ನಿರೀಕ್ಷಿತ ಫಲಿತಾಂಶವನ್ನು ಪಡೆಯುವಲ್ಲಿ ಯಶಸ್ವಿಯಾದರು. ಇದನ್ನು 'ಸಂಧ್ಯಾರಾಗ'ದೊಡನೆ ಹೋಲಿಸಿದಾಗ ತ.ರಾ.ಸು. ಅವರ ವೈಶಿಷ್ಟ್ಯ ಅರಿವಾಗುತ್ತದೆ. ಇಲ್ಲಿ ಭಾವುಕತೆ ಇಲ್ಲ ಬದಲಾಗಿ ಜೀವನ ದರ್ಶನವಿದೆ. ತ.ರಾ.ಸು. ಅವರ ಚಿತ್ರದುರ್ಗದ ಸರಣಿ ಕಾದಂಬರಿಗಳ ಸಾಲಿಗೆ ಸೇರಬೇಕಾಗಿ ಉದ್ದೇಶಿಸಿದ್ದರೂ ರೂಪುಗೊಳ್ಳದೆ ಹೋದ ಕೃತಿ ಹಿರೇ ಮದಕರಿ ನಾಯಕನ ಕುರಿತಾಗಿದ್ದು. ಇವನ ಕಾಲದಲ್ಲಿ ಚಿತ್ರದುರ್ಗ ಸಂಸ್ಥಾನವು ಬಳ್ಳಾರಿ, ರಾಯದುರ್ಗ, ಶಿವಮೊಗ್ಗಗಳನ್ನು ಒಳಗೊಂಡು ಅರವತ್ತು ಸೀಮೆಗಳ ಒಡೆತನವನ್ನು ಹೊಂದಿತ್ತು ಎನ್ನುವ ಚಾರಿತ್ರಿಕ ಆಧಾರವಿದೆ. ಈ ಹಿರಿಮೆಯ ಕಾಲದ ಕೃತಿ ಮೂಡಿ ಬರದೇ ಹೋಗಿದ್ದು ಕೊರತೆಯಾಗಿ ಕಾಣುತ್ತದೆ. ತ.ರಾ.ಸು. ಅವರ ಚಿತ್ರದುರ್ಗದ ಸರಣಿ ಕಾದಂಬರಿಗಳು ಕೊನೆಗೊಳ್ಳುವುದು ದುರ್ಗಾಸ್ತಮಾನದಲ್ಲಿ ಈ ಕೃತಿ ವಿಜಯೋತ್ಸವ ರಚಿತವಾಗಿ ಇಪ್ಪತ್ತೈದು ವರ್ಷಗಳ ನಂತರ ರಚಿತವಾಗಿದ್ದು. ಈ ಕುರಿತು ಅವರು ಬಹಳ ವರ್ಷಗಳ ಅಧ್ಯಯನ ನಡೆಸಿದ್ದರೂ ಅನಾರೋಗ್ಯದ ಕಾರಣ ಬರವಣಿಗೆ ನಡೆದಿರಲಿಲ್ಲ. ಇದರ ಜೊತೆಗೆ ಮದಕರಿ ನಾಯಕನು ರಾಜ್ಯದಾಹಿ, ರಕ್ತ ಪಿಪಾಸು, ಅತಿಕಾಮಿ ಎನ್ನುವಂತಹ ಚಾರಿತ್ರಿಕ ಆಧಾರಗಳೂ ಅವರು ಕೃತಿಯನ್ನು ರಚಿಸುವಲ್ಲಿ ವಿಳಂಬವನ್ನು ಮಾಡುವಂತೆ ಮಾಡಿತ್ತು. ಇವೆಲ್ಲವೂ ನಿರಾಧಾರ ಎಂದು ಮನವರಿಕೆಯಾದ ನಂತರವೇ ಅವರು ಬರವಣಿಗೆಗೆ ತೊಡಗಿದರು. ಇತಿಹಾಸ ರಚನೆಯಲ್ಲಿ ಅದನ್ನು ಆಧರಿಸಿ ಕಾದಂಬರಿಗಳಲ್ಲಿ ಇದೇ ಕೊನೆಯ ಮಾತು ಎಂದು ಹೇಳಲಾಗದು ಎಂದೂ ಕೂಡ ಅವರು ಹೇಳಿಕೊಂಡಿದ್ದಾರೆ. ದುರ್ಗಾಸ್ತಮಾನರಚನೆಯ ಹಿಂದೆ ಒಂದು ಅಭಿಮಾನದ ಒತ್ತಡ ಕೂಡ ರೂಪುಗೊಂಡಿತ್ತು. ೧೯೮೧ರ ಮಾರ್ಚಿ ಎಂಟರಂದು ಚಿತ್ರದುರ್ಗದಲ್ಲಿ ತ.ರಾ.ಸು. ಅವರಿಗೆ ಸನ್ಮಾನ ಸಮಾರಂಭವು ಏರ್ಪಾಟಾಗಿತ್ತು. ಬೃಹತ್ ಜನಸ್ತೋಮದ ಎದುರು ನಡೆದ ಈ ಸನ್ಮಾನದಲ್ಲಿ ತ.ರಾ.ಸು. ಅವರು ಮದಕರಿ ನಾಯಕನ ಕಂಚಿನ ಪ್ರತಿಮೆಯನ್ನು ಸ್ಥಾಪಿಸುವ ತಮ್ಮ ಬಹು ದಿನದ ಬಯಕೆಯನ್ನು ವ್ಯಕ್ತ ಪಡಿಸಿದರು. ಅದನ್ನು ಈಡೇರಿಸುವ ಭರವಸೆ ಆ ಸಭೆಯಲ್ಲಿ ವ್ಯಕ್ತವಾಗಿದ್ದರ ಜೊತೆಗೆ ಮದಕರಿ ನಾಯಕನ ಕುರಿತ ಕಾದಂಬರಿಯನ್ನು ಬರೆಯುವಂತೆ ತ.ರಾ.ಸು. ಅವರನ್ನು ವಿನಂತಿಸಲಾಯಿತು. ಅದನ್ನು ಮನ್ನಿಸಿದ ತ.ರಾ.ಸು. ಅವರು 'ದುರ್ಗಾಸ್ತಮಾನ'ದ ರಚನೆಯಲ್ಲಿ ತೊಡಗಿಕೊಂಡರು. ಸರಿಸುಮಾರು ನಾಲ್ಕು ತಿಂಗಳ ಅವಧಿಯಲ್ಲಿ ಏಳುನೂರು ಪುಟಗಳ ಬೃಹತ್ ಕಾದಂಬರಿಯನ್ನು ಬರೆದು ಮುಗಿಸಿದರು. ಕಾಲದ ಅಂತರದ ಜೊತೆಗೆ ವಿಷಯ ವ್ಯಾಪ್ತಿಯ

ವ್ಯತ್ಯಾಸವೂ ಸೇರಿ ಚಿತ್ರದುರ್ಗ ಸರಣಿಯ ಉಳಿದ ಕಾದಂಬರಿಗಳಿಗೂ 'ದುರ್ಗಾಸ್ತಮಾನ'ಕ್ಕೂ ಅಪಾರ ವ್ಯತ್ಯಾಸಗಳಿವೆ. ಇದರಲ್ಲಿ ರಾಜನೀತಿಯ ವಿಹಂಗಮ ನೋಟದಂತೆ ಮಣ್ಣಿನ ಕುರಿತ ಅಭಿಮಾನದ ಗಾಢತೆ ಕೂಡ ಸೇರಿಕೊಂಡಿದೆ. ಗ್ರೀಕ್ ರುದ್ರ ನಾಟಕಗಳಂತೆ ದುರಂತದ ಗಾಢಛಾಯೆ ಕೂಡ ಸೇರಿಕೊಂಡಿದೆ. ಮದಕರಿ ನಾಯಕನ ಸಾಹಸವಾಗದೆ ಇಡೀ ಕಾದಂಬರಿ ವಿನಾಶದ ವಿರುದ್ಧ ಮನುಕುಲದ ಹೋರಾಟದ ರೂಪಕದಂತೆ ಮೂಡಿ ಬಂದಿದೆ. ಕತ್ತಲಾಯಿತು, ಮತ್ತೆ ಹಗಲಾಗಲಿಲ್ಲ ಎನ್ನುವ ಈ ಕೃತಿಯ ಭರತ ವಾಕ್ಯದಂತೆ ತ.ರಾ.ಸು. ಅವರ ಚಿತ್ರದುರ್ಗದ ಸರಣಿ ಕಾದಂಬರಿಗಳು ಮುಕ್ತಾಯವಾದವು. ಈ ಕಾದಂಬರಿ ಬಂದ ನಂತರ ತ.ರಾ.ಸು. ಅವರು ಕೂಡ ಬಹಳ ಕಾಲ ನಮ್ಮೊಡನೆ ಇರಲಿಲ್ಲ.

ಚಿತ್ರದುರ್ಗ ಸರಣಿಯ ಕಾದಂಬರಿಗಳ ಕುರಿತು ವರ್ಣನೆ, ವಾತಾವರಣ ಸೃಷ್ಟಿಯಲ್ಲಿ ವೀರ ಜೀವನದ ರಕ್ತವನ್ನು ಹರಿಸಿದ್ದಾರೆ ('ಯುಗಧರ್ಮ ಮತ್ತು ಸಾಹಿತ್ಯ'-ಕೀರ್ತಿನಾಥ ಕುರ್ತಕೋಟಿ ಪುಟ ೨೪೩) ಎನ್ನುವ ಅಭಿಪ್ರಾಯವಿದ್ದಂತೆ ಪಾಳೆಗಾರಿಕೆಯಂಥ ರಾಜಕೀಯ ಸಂಸ್ಥೆಗಳನ್ನು, ಮಠದಂಥ ಧಾರ್ಮಿಕ ಸಂಸ್ಥೆಗಳನ್ನು ವೈಭವೀಕರಿಸಿ ಅವುಗಳ ಧನಾತ್ಮಕ ಅಂಶಗಳನ್ನು ಹಾಡಿ ಹೊಗಳುವ ಈ ಕೃತಿಗಳು ಸಮಕಾಲೀನ ಬದುಕಿನ ಅರಿವಿಗೆ ಯಾವುದೇ ಅಯಾಮವನ್ನು ಸೇರಿಸುವುದಿಲ್ಲ (ಡಾ.ಎಚ್.ಎಸ್.ರಾಘವೇಂದ್ರ ರಾವ್-'ಪ್ರಗತಿಶೀಲತೆ' ಪುಟ ೭೬) ಎನ್ನುವ ಅಭಿಪ್ರಾಯವೂ ಇದೆ. ಆದರೆ ಈ ಕೃತಿಗಳು ಚಾರಿತ್ರಿಕ ಕಾದಂಬರಿಗಳ ಪರಂಪರೆಗೆ ನೀಡಿದ ಅನನ್ಯವಾದ ಕೊಡುಗೆಯ ಬಗ್ಗೆ ವಿಮರ್ಶಾಲೋಕದಲ್ಲಿ ಚರ್ಚೆಯಾಗಿಲ್ಲ. ಇದಕ್ಕೆ ಅ.ನ.ಕೃ. ಅವರ ಕಾದಂಬರಿಗಳಿಗೆ ಅನ್ವಯಿಸುವ ವಾಕ್ಯಗಳನ್ನೇ ತ.ರಾ.ಸು. ಅವರ ಕೃತಿಗಳಿಗೂ ಜೋಡಿಸಿದ ವಿಮರ್ಶಾಲೋಕದ ಅಂಧತ್ವವೇ ಕಾರಣ. ಅ.ನ.ಕೃ. ಅವರ ಕೃತಿಗಳಲ್ಲಿ ಕಾಣುವ ವಿಷಯ ಲೋಲುಪತೆ, ಕಪ್ಪು ಬಿಳುಪಿನ ಚಿತ್ರಣ ತ.ರಾ.ಸು. ಅವರಲ್ಲಿಲ್ಲ. ಚಿತ್ರದುರ್ಗ ಸರಣಿಯ ಕಾದಂಬರಿಗಳಿಗೆ ಅನ್ವಯಿಸಿ ಹೇಳುವುದಾದರೆ ಇಲ್ಲಿ ಕೇವಲ ಪಾಳೆಗಾರರೋ, ಮಠದ ಗುರುಗಳೋ ಮಾತ್ರ ಬಂದಿಲ್ಲ ಸಮಾಜದ ಎಲ್ಲಾ ವರ್ಗದ ಜನರೂ ಬಂದಿದ್ದಾರೆ. ಎಲ್ಲಾ ವೃತ್ತಿಯವರೂ ಬಂದಿದ್ದಾರೆ. ಇಂತಹ ರೇಂಜ್ ಕನ್ನಡದ ಬಹಳ ಕೃತಿಗಳಲ್ಲಿ ಸಿಕ್ಕುವುದಿಲ್ಲ. ಇಲ್ಲಿ ಸ್ಪಷ್ಟ ವೈಚಾರಿಕತೆ ಇದೆ, ಜೀವನ ದರ್ಶನವಿದೆ. ಬಹಳ ಮುಖ್ಯವಾಗಿ ಚಾರಿತ್ರಿಕ ಘಟನೆಯನ್ನು ಸರ್ವಕಾಲೀನವಾಗಿಸುವ ಚಾಕಚಕ್ಯತೆ ಇದೆ. ತ.ರಾ.ಸು. ಅವರಿಗಿರುವ ತೊಡಕು ಎಂದರೆ ಭಾವುಕತೆ ಈ ಅಂಶ ಅವರ ಪಾತ್ರಚಿತ್ರಣವನ್ನು ಅಲ್ಲಲ್ಲಿ ಜಗ್ಗುತ್ತದೆ. ಈ ಕೊರತೆಯ ಪರಿಣಾಮ ಚಿಕ್ಕದು. ತ.ರಾ.ಸು. ಅವರ ನಿರ್ಮಿಸಿರುವ ಚಿತ್ರಣ ಬಹು ದೊಡ್ಡದು. ಈ ಹಿನ್ನೆಲೆಯಲ್ಲಿ ಅವರ ಚಿತ್ರದುರ್ಗ ಸರಣಿ ಕೃತಿಗಳ ಕುರಿತು ಹೊಸ ಓದು ಅಗತ್ಯವಾಗಿ ಬೇಕಾಗಿದೆ.


ತ.ರಾ.ಸು. ಅವರ ಕೃತಿಗಳ ಭಾವುಕತೆಯ ಬಗ್ಗೆ ಬರೆದ ನಂತರ ಚಿತ್ರದುರ್ಗ ಸರಣಿ ಕಾದಂಬರಿಗಳ ಕುರಿತು ಭಾವುಕ ಟಿಪ್ಪಣಿ ಸೇರಿಸುವುದು ನನ್ನ ವೈಯಕ್ತಿಕ ಅಗತ್ಯ. ನನ್ನ ತಂದೆ ಮತ್ತು ತಾಯಿ ಇಬ್ಬರ ಊರು ಚಿತ್ರದುರ್ಗ ಜಿಲ್ಲೆಗೆ ಸೇರಿದ್ದು ಮತ್ತು ನನ್ನ ಹಿರಿಯರು ಚಿತ್ರದುರ್ಗ ಜಿಲ್ಲೆಯವರು ಎನ್ನುವ ಕಾರಣ ಬಿಟ್ಟರೆ ನಾನು ಚಿತ್ರದುರ್ಗದವನು ಎಂದುಕೊಳ್ಳಲು ಬಾಲ್ಯದ ಕಾರಣಗಳೇನು ಇಲ್ಲ. ನಾನು ಓದಿದ್ದು ಬೆಳೆದಿದ್ದೂ ಎಲ್ಲವೂ ಚಿಕ್ಕಮಗಳೂರು ಜಿಲ್ಲೆಯಲ್ಲಿ. ಚಿತ್ರದುರ್ಗದ ಸಂಪರ್ಕ ಏನಿದ್ದರೂ ಬೇಸಿಗೆ ರಜೆಯಲ್ಲಿ ಕೆಲವು ದಿನಗಳ ಕಾಲ ಹಿರಿಯರ

ಮನೆಗಳಿಗೆ ಹೋಗಿ ಬರುತ್ತಿದ್ದುದೂ ಮಾತ್ರ. ಹೀಗಿದ್ದರೂ ನೀವು ಎಲ್ಲಿಯವರು ಎಂದ ಕೂಡಲೇ ಚಿತ್ರದುರ್ಗದವರು ಎನ್ನುವಂತೆ ಮಾಡಿದ್ದು ತ.ರಾ.ಸು. ಅವರ ಚಿತ್ರದುರ್ಗ ಸರಣಿ ಕೃತಿಗಳೇ. ಬಾಲ್ಯದಿಂದಲೂ ಅವುಗಳನ್ನು ಮತ್ತೆ ಮತ್ತೆ ಓದುತ್ತಾ ಬಂದಿದ್ದರಿಂದ ಚಿತ್ರದುರ್ಗದ ಕುರಿತು ವ್ಯಾಮೋಹ ತಂತಾನೆ ಬೆಳೆದು ಬಿಟ್ಟಿತ್ತು. ನನ್ನ ಇಬ್ಬರು ದೊಡ್ಡಪ್ಪಂದಿರ ಮನೆಗಳು ಚಿತ್ರದುರ್ಗದಲ್ಲೇ ಇದ್ದಿದ್ದರಿಂದ ಆಗಾಗ ಬೆಟ್ಟಕ್ಕೆ ಹೋಗಿ ತ.ರಾ.ಸು. ಅವರ ಕೃತಿಗಳ ಕುರುಹುಗಳನ್ನು ಹುಡುಕುತ್ತಾ ಅಲೆಯುವುದು ನನ್ನ ಬಾಲ್ಯದಿನಗಳ ಸಮೃದ್ಧ ನೆನಪು. ಅಲ್ಲಲ್ಲಾ ಅವರ ಕೃತಿಗಳ ಪಾತ್ರಗಳನ್ನು ಜೀವಂತವಾಗಿ ಕಂಡು ಸಂಭಾಷಿಸಿದ್ದೇನೆ. ಇಂತಹ ರೋಮಾಂಚನ ನೀಡಿದ್ದಕ್ಕಾಗಿ ತ.ರಾ.ಸು. ಅವರಿಗೆ ನಾನು ಋಣಿಯಾಗಿರಲೇಬೇಕು. 'ದುರ್ಗಾಸ್ತಮಾನ'ವನ್ನು ಕುಳಿತು ಓದಿದ್ದೂ ಕೂಡ ದುರ್ಗದ ಬೆಟ್ಟದ ಮೇಲೆಯೇ. ಇದೆಲ್ಲದರ ಜೊತೆಗೆ ತ.ರಾ.ಸು. ಅವರ ಕುರಿತು ಇನ್ನೊಂದು ನೆನಪಿದೆ. ಅವರನ್ನು ಬಾಲ್ಯದಲ್ಲಿ ನಾನು ಕಂಡಿದ್ದೆ. ಮಲ್ಲಾಡಿಹಳ್ಳಿಗೆ ಅವರು ಚಿಕಿತ್ಸೆಗಾಗಿ ಬಂದಿದ್ದರು. ನನ್ನ ದೊಡ್ಡಪ್ಪ ಎನ್.ಎಸ್.ಚಿದಂಬರ ರಾವ್ ಅವರಿಗೆ ತ.ರಾ.ಸು. ಸ್ನೇಹಿತರು. ಅವರಿಬ್ಬರ ಸಂಭಾಷಣೆ ಅರ್ಥವಾಗದಿದ್ದರೂ ತ.ರಾ.ಸು. ಅವರ ಭವ್ಯ ನಿಲುವನ್ನು ಕಣ್ತುಂಬಿಕೊಂಡ ನೆನಪುಗಳ ಸದಾ ನನ್ನ ಮನದಲ್ಲಿದೆ. ನನ್ನ ಮುಸ್ಸಂಜೆಯಲ್ಲಿ ಬಂದ ಮಹನೀಯರು ಕವಿತೆಯಲ್ಲಿ ಈ ನೆನಪುಗಳ ಕಣಜ ಸಿಕ್ಕಿಹಾಕಿಕೊಂಡಿದೆ. ಮಲ್ಲಾಡಿ ಹಳ್ಳಿ ಆಶ್ರಮದಲ್ಲಿ ಸಿಗರೇಟ್ ಸೇವನೆ ನಿಷಿದ್ಧವಾಗಿತ್ತು. ತ.ರಾ.ಸು. ಆಗಿನ್ನೂ ಚಿಕ್ಕ ಮಕ್ಕಳಾಗಿದ್ದ ನಮ್ಮ ಬಳಿ ಗುಟ್ಟಾಗಿ ಸಿಗರೇಟ್ ತರಿಸುತ್ತಿದ್ದರು. ಮುಂದೆ ನನ್ನ ಅರಿವು ವಿಸ್ತರಿಸುತ್ತಾ ಹೋದಂತೆ ನಾನು ತಂದು ಕೊಟ್ಟ ಸಿಗರೇಟ್‌ಗಳೇ ತ.ರಾ.ಸು. ಅವರ ಆಯಸ್ಸನ್ನು ಕಡಿತಗೊಳಿಸಿರಬಹುದೆ ಎನ್ನುವ ಅಪರಾಧೀಭಾವದಿಂದ ನರಳಿದ್ದೂ ಕೂಡ ಇದೆ.

ಈ ಎಲ್ಲಾ ಸಂಗತಿಗಳೂ ನನ್ನ ವಿಮರ್ಶೆಯ ಮೇಲೆ ಪರಿಣಾಮ ಬೀರಿಲ್ಲ ಎಂದುಕೊಂಡರೂ ಇವುಗಳನ್ನು ಸಾರ್ವಜನಿಕವಾಗಿ ಬಿಚ್ಚಿಡುವುದು ನನ್ನ ಕರ್ತವ್ಯವಾದ್ದರಿಂದ ಈ ಟಿಪ್ಪಣಿ.

೬೫, ೨ನೇ ಕ್ರಾಸ್ (ದತ್ತಾತ್ರೇಯ ದೇವಸ್ಥಾನದ ಬಳಿ)
ತ್ಯಾಗರಾಜ ನಗರ, ಬೆಂಗಳೂರು-೫೬೦ ೦೨೮
ಮೊಬೈಲ್-೯೫೩೮೧೮೧೧೪೦, ೯೪೪೯೨೭೦೩೯೦.

ಓದಿನಂಗಳ



ಕಾಡು ಮತ್ತು ಕ್ರೌರ್ಯ

ಪೂರ್ಣಚಂದ್ರ ತೇಜಸ್ವಿ

ಪ್ರಕಾಶಕರು: **ಪುಸ್ತಕ ಪ್ರಕಾಶನ**

ಪ್ರಕಟಣಾ ವರ್ಷ: ೨೦೧೫,

ಬೆಲೆ: ರೂ. ೧೩೬/-

ಕಾಡು ಮತ್ತು ಕ್ರೌರ್ಯ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಮೊದಲ ಕಾದಂಬರಿ. ಇದನ್ನು ಅವರು ಬರೆದದ್ದು ೧೯೬೨ರಲ್ಲಿ. ತೇಜಸ್ವಿ ಹೇಳುವಂತೆ ಅವರು ಇದನ್ನು ಎಂ.ಎ ಮುಗಿಸಿದ ಬಳಿಕ ಬರೆದು ನಾಲ್ಕು ವರ್ಷಗಳ ಕಾಲ ಇದನ್ನು ತಿದ್ದಿ ಇದರ ಬಗ್ಗೆ ಆರೋಗ್ಯಕರವಲ್ಲದ ಆಸಕ್ತಿಯನ್ನೂ ವ್ಯಾಮೋಹವನ್ನು ಕಳೆದುಕೊಂಡುಬಿಟ್ಟರು. ಪ್ರಾಯಶಃ ಆದ್ದರಿಂದಲೇ ಅವರು ಇದನ್ನು ಪ್ರಕಟಿಸುವ ಗೋಜಿಗೆ ಹೋಗಿರಲಿಲ್ಲ. ಅವರ ಮರಣೋತ್ತರ ಪುಸ್ತಕ ಪ್ರಕಾಶನವು ಈ ಕೃತಿಯನ್ನು ಪ್ರಕಟಿಸಿದೆ.

ಕಾದಂಬರಿಯಲ್ಲಿ ಸೋಮನ, ಲಿಂಗನ, ವೆಂಕನ, ನಳಿನಿಯ, ಹಿನ್ನೀರಿನ, ಹಂದಿಯ, ಮದುವೆಗೆ ಮೊದಲೇ ಮೈನೆರೆದ ತಪ್ಪಿಗೆ ಕಾಡಿಗೆ ದೂಡಿಸಿಕೊಂಡ ಬ್ರಾಹ್ಮಣರ ಹುಡುಗಿಯ, ಹಾಗೆಯೇ ಯಾರ ಕಥೆಯೂ ಅಲ್ಲದ ಹಲವು ಕಥೆಗಳಿವೆ. ಪ್ರತಿಯೊಂದು ಎಳೆಯೂ ಸ್ವತಂತ್ರ ಕೃತಿಯಾಗಿ ಬರೆಸಿಕೊಳ್ಳುವಷ್ಟು ಸಾಧ್ಯತೆಗಳನ್ನು ಇಟ್ಟುಕೊಂಡಿದ್ದ ಕೃತಿಯನ್ನು ಪ್ರಾಯಶಃ ವಿಸ್ತಾರವಾಗಿ ಬರೆದಿದ್ದರೆ ಮಲೆಗಳಲ್ಲಿ ಮದುಮಗಳು ವಿನಂತೆ ವಿಸ್ತಾರವಾದ ಕೃತಿಯಾಗಬಹುದಿತ್ತು. ಇಲ್ಲಿಯೂ ಯಾವುದೂ ಅಮುಖ್ಯವಲ್ಲವಾದರೂ ಅದು ಮುಖ್ಯವಾಗಿ ಸೋಮು ಮತ್ತು ನಳಿನಿಯನ್ನು ಪ್ರಧಾನ ನೆಲೆಯಲ್ಲಿ ಇಟ್ಟುಕೊಂಡಿದೆ.

ಸ್ಥೂಲವಾಗಿ ತಂದೆ ರಂಗಪ್ಪನವರ ತೀವ್ರ ಅನಾರೋಗ್ಯದಿಂದಾಗಿ ನಳಿನಿ ಸೋಮುವನ್ನು ತಮ್ಮಲ್ಲಿಗೆ ಕರೆಸಿಕೊಳ್ಳುವದರಿಂದ ಪ್ರಾರಂಭವಾಗುವ ಕಥೆ ಸೋಮು ತನ್ನದೇ ಛಿದ್ರ ವ್ಯಕ್ತಿತ್ವವನ್ನು ಕುರಿತಂತೆ, ನಳಿನಿ ತನ್ನ ಸೋಮುವಿನ ಸಂಬಂಧ ಕುರಿತಂತೆ ಅನುಭವಿಸುವ ತಾಕಲಾಟವನ್ನು ಒಳಗೊಳ್ಳುತ್ತ ಅವರು ಒಂದಾಗುವುದರ ಮೂಲಕ ಅದನ್ನ ನಿವಾರಿಸಿಕೊಳ್ಳುವಲ್ಲಿ ಕೊನೆಯಾಗುತ್ತದೆ. ಅದರೊಟ್ಟಿಗೆ ದುಷ್ಟ ವೆಂಕ ಪ್ರದೇಶ ಬಿಟ್ಟೋಡುತ್ತಾನೆ. ಆ ದಯ್ಯದ ಹಂದಿ ಸಿಡಿಮದ್ದು ಕಚ್ಚಿ ಸಾಯುತ್ತದೆ. ವಿದ್ಯೆಯ ವಿವೇಕದ ಧಾರೆ ಹರಿಸಿ ನಿದ್ರಿತ ಮೌಢ್ಯಗಳನ್ನೆಲ್ಲ ಎಚ್ಚರಿಸಿ ಓಡಿಸಿಬಿಡಬೇಕೆನ್ನುವ ಸೋಮುವಿನ ವಿಚಾರದ ಅಗತ್ಯವೇ ಬೀಳದೆ ತಂತಾನೆ ಎಂಬಂತೆ ಸ್ವಾಭಾವಿಕ ವಿವೇಕದೆದುರು ಕ್ರೌರ್ಯ ಸೋತುಹೋಗುತ್ತದೆ.

ಇದರಲ್ಲಿ ಅಂತರ್ಗಾಮಿಯಾಗಿ ಹೆಣೆದುಕೊಂಡಿರುವ ಒಂದು ವಿಷಯ ವ್ಯಕ್ತಿತ್ವದಲ್ಲಿ ಉಂಟಾಗುವ ಛಿದ್ರತೆಗಳು ಹಾಗೂ ಅದರ ವಿರುದ್ಧದ ಘರ್ಷಣೆ ಎಂದು ಕೃತಿಯನ್ನು ಕುರಿತು ಬರೆದ ಟಿಪ್ಪಣಿಯಲ್ಲಿ ತೇಜಸ್ವಿ ಹೇಳುತ್ತಾರೆ. ಕಾದಂಬರಿಯ ಪಾತ್ರಗಳಲ್ಲಿಯೇ ತಮ್ಮೊಳಗೆ ಒಂದು ಆಲೋಚನೆ ಸಾಧ್ಯವಾಗುವ ಸೋಮು ಮತ್ತು ನಳಿನಿಯನ್ನು ಉದ್ದೇಶಿಸಿದಂತೆ ಈ ಮಾತು ನಿಜ. ಸೋಮು ಸಾವಿನ ಮನೆಯಲ್ಲಿ ದುಃಖದ ಆವೇಗದಲ್ಲಿ ತನ್ನನ್ನು ತಬ್ಬಿಕೊಂಡ ನಳಿನಿಯನ್ನು ಸಂತೈಸುತ್ತ

ಅವಳ ಮೈತಡವಿ ಕೂಡಲೇ ತನ್ನ ದೇಹಾಕರ್ಷಣೆಯ ಸೋಗಿನ ಸ್ಪರ್ಶವನ್ನು ವಿಮರ್ಶಿಸಿಕೊಳ್ಳುವ ಎಡಬಿಡಂಗಿತನವನ್ನು ಎದುರಾಗುತ್ತಾನೆ. ಅವನಿಗೆ ತನ್ನೊಳಗಿನ ಕ್ರೌರ್ಯವನ್ನು ನಿವಾರಿಸಿಕೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ ಅಲ್ಲಿಂದ ಹೋಗಿಬಿಡುವ ಮನಸ್ಸು ಮಾಡುತ್ತಾನೆ. ಕಳೆದದ್ದೆಲ್ಲ ಪಾಪ. ಈಗ ಕಳೆದ ಕತ್ತಲಿನಂಥ ಪಾಪ. ಈಗ ಮುಂಬರುವುದೆಲ್ಲ ಬೆಳ್ಳಿ ಬಿಸಿಲಿನಂಥ ಜ್ಞಾನ ಎಂದುಕೊಳ್ಳುವ ಅವನ ಯೋಚನೆಯನ್ನು ಹುಚ್ಚು ಹುಚ್ಚಾಗಿ ತಿಕ್ಕಲನಂತೆ ಮಾಡಿದ ಯೋಚನೆ ಎಂದು ತೇಜಸ್ವಿ ವಿವರಿಸುತ್ತಾರೆ. ಈ ಬಗೆಯ ಪ್ರವಾದಿತನದ ಮೂರ್ಖತನವನ್ನು ಮುಂದೆಯೂ ತೇಜಸ್ವಿ ಗೇಲಿ ಮಾಡುತ್ತಲೇ ಬಂದರೆನ್ನುವುದು ಮುಖ್ಯ.

ತೇಜಸ್ವಿಯವರ ಕೃತಿಗಳಲ್ಲಿ ಬದುಕುವುದು ಎನ್ನುವುದು ಘನವಾಗಿ ಮತ್ತು ಸಹಜವಾಗಿ ಬದುಕುವುದು ಮಾತ್ರ. ಅರ್ಥ ಮಾಡಿಕೊಳ್ಳುವುದಲ್ಲ, ಅರ್ಥಮಾಡಿಕೊಳ್ಳಲು ಏನೂ ಇರುವುದೇ ಇಲ್ಲ. ಈ ಮಾತಿಗೆ ಉದಾಹರಣೆಯಾಗಿ ಸೋಮು ಪ್ರೇಮವನ್ನು ತನಗೆ ತಾನೇ ವಿವರಿಸಿಕೊಳ್ಳುತ್ತಾನೆ. ಯೋಚಿಸಿ, ವಿವೇಚಿಸಿ, ಒರೆಹಚ್ಚಿಕೊಳುತ್ತಾನೆ. ಒಂದನ್ನು ಅರ್ಥಮಾಡಿಕೊಂಡೇ ಅನುಭವಿಸಬೇಕೇ? ಎಂಬ ನಳಿನಿಯ ಅನಿಸಿಕೆಯ ಸಾಚಾತನವನ್ನು ಗಮನಿಸಬಹುದು. ಹಾಗೆಯೇ ತುಟ್ಟ ತುದಿಯ ಪರೀಕ್ಷೆಗಳಲ್ಲಿ ತನ್ನ ಮೆತುಕಲು ಪ್ರೇಮ ಸೋತು ನಾಚುತ್ತದೆ ಎಂಬ ಅರಿವಿರುವ, ಅದನ್ನು ಮೀರಲಾರದ ಸೋಮು ಪ್ರೇಮ ಸೃಷ್ಟಿಯಾಗಲಿಕ್ಕೆ ಬೇಕಾದ ಕ್ರೌರ್ಯ ತನ್ನಲ್ಲಿಲ್ಲ ಎಂದುಕೊಳ್ಳುವುದು ಈ ಕ್ರೈಸಿಸ್‌ಗಳ ಭಾಗವಾಗಿರುವ ತನ್ನ ವ್ಯಕ್ತಿತ್ವದ ಅನ್ವೇಷಣೆಯಲ್ಲಿ.

ಮದುವೆಗೆ ಮೊದಲೇ ಮೈನೆರೆದ ತಪ್ಪಿಗೆ ತಂದೆ ಅನಂತ ಭಟ್ಟನಿಂದಲು ಅವನ ಮಗನಿಂದಲೂ ಕಾಡಿಗೆ ದೂಡಿಸಿಕೊಂಡ ಬ್ರಾಹ್ಮಣರ ಹುಡುಗಿಯನ್ನ ಕೊಪ್ಪದ ಶೀನಪ್ಪ ತಂದು ಇಟ್ಟುಕೊಳ್ಳುವುದು, ಅಂತ ಅನಂತ ಭಟ್ಟ ದೈಯದ ಹಂದಿಯ ಕುರಿತ ವೆಂಕನ ಮಾತು ನಂಬಿ ಶೃಂಗೇರಿಗೆ ಶಾಂತಿ ಮಾಡಿಸಲು ಹೋಗುವುದು ತನ್ನ ಒಡಲಲ್ಲಿ ಸ್ವತಂತ್ರ ಕಾದಂಬರಿಯೊಂದರ ಬೀಜವನ್ನು ಇರಿಸಿಕೊಂಡಿದೆ. ಇಂತಹ ಆಶಯದ ಬೀಜಗಳನ್ನು ಕಾಡು ಮತ್ತು ಕ್ರೌರ್ಯದಲ್ಲಿ ಬರುವ ಹಲವು ಕಥಾಧಾರೆಗಳಲ್ಲಿ ಗಮನಿಸಬಹುದು.

ಮುಂದೆ ಕರ್ವಾಲೋ, ಜುಗಾರಿ ಕ್ರಾಸ್, ಚಿದಂಬರ ರಹಸ್ಯ ಕೃತಿಗಳನ್ನು ಬರೆದ ತೇಜಸ್ವಿ ತಾನು ಕುರುಹೆಂಬಂತೆ ಕಾಡು ಮತ್ತು ಕ್ರೌರ್ಯದಲ್ಲಿ ತೋರಿದ್ದ ಟ್ರೈಲರ್‌ಗಳನ್ನು ವಿಸ್ತರಿಸಿ ಬರೆದೆನೆಂಬ ಭಾವದಲ್ಲಿ ಇದ್ದುಬಿಟ್ಟೇ ಸದರಿ ಕೃತಿಯ ಪ್ರಕಟನೆಗೆ ಮುಂದಾಗಲಿಲ್ಲವೇನೋ. ಅನುಭವದ ಗ್ರಹಣ ಕ್ರಿಯೆ ಗ್ರಹಿಸಿದ್ದು ಪೂರ್ಣ ಪ್ರಮಾಣದಲ್ಲಿ ಇತರ ಕಥಾನಕಗಳಿಗೆ ಒದಗಿ ಬಂದಮೇಲೆ ಮತ್ತೆ ಪ್ರಕಟಿಸಿದರೆ, ಹೇಳಿದ್ದೇ ಹೇಳಿದಂತೆ ಆದೀತು ಎಂಬ ಕಾರಣವಿದ್ದರೂ ಇದ್ದೀತು. ಆದರೆ ಲೇಖಕನಲ್ಲಿ ತನ್ನ ಅಭಿವ್ಯಕ್ತಿಯ ಸಾತತ್ಯ ಉಳಿದ ಹಾಗೆ ಸಾಮಾನ್ಯವಾಗಿ ಎಲ್ಲ ಓದುಗರಲ್ಲಿಯೂ ಒಬ್ಬ ಲೇಖಕನ ಕುರಿತು ಆ ಭಾವ ಉಳಿಯಲು ಸಾಧ್ಯವಿಲ್ಲ. ಆದ್ದರಿಂದಲೇ ಲೇಖಕನ ಅಭಿವ್ಯಕ್ತಿ ವ್ಯವಸ್ಥೆಯ ಎಲ್ಲ ಘಟಕಗಳ ಪರಿಶೀಲನೆಗೆ ಓದುಗ ಹಕ್ಕುಳ್ಳವನಾಗಿರುತ್ತಾನೆ. ಹಾಗೆಯೇ ಚಿತ್ರಿತ ಸಂದರ್ಭವೊಂದು ತನ್ನ ಆವರಣದ ಪರಿಣಾಮವಾಗಿ ಬೇರೆ ಅರ್ಥಗ್ರಹಿಕೆಗೆ ಅವಕಾಶ ಕಲ್ಪಿಸಬಲ್ಲದು. ಉದಾಹರಣೆಗೆ ಇದೇ ಕಾನು ಕರ್ವಾಲೋ ಮತ್ತು ಉಳಿದ ಕೃತಿಗಳಲ್ಲಿ ಪಡೆದುಕೊಳ್ಳುವ ಸ್ವರೂಪಗಳನ್ನು ಗಮನಿಸಬಹುದು.

ಭಾಗ ಒಂದರ ಬಳಿಕ ಕಾದಂಬರಿಯ ಕಥನ ಶೈಲಿಯಲ್ಲಿ ಒಂದು ಬಗೆಯ ವೈನೋದಿಕ ಮನೋಭಾವ ಪ್ರಕಟವಾಗುತ್ತಾ ಹೋಗುತ್ತದೆ. ಈ ಗದ್ಯ ಬರವಣಿಗೆಯ ಕ್ರಮ

ಚೇತೋಹಾರಿಯಾದದ್ದು. ಕಾಡಿನೆಲ್ಲ ಸಂಚಲನೆಯನ್ನು ಮಾತುಗಳಲ್ಲಿ ಓಡಿದಿಡಲು ಮಾಡಿದ ತಂತ್ರವಿದು. ಧೈಯದ ಹಂದಿಯ ಮೇಲೆ ಹಿಂದು ಮುಂದಾಗಿ ಕೂತುಬಿಟ್ಟ ಮಾರ್ಯನನ್ನು ಹೊತ್ತ ಹಂದಿ ಇರಾತ್‌ಸೀಗೆ ಮೆಳೆಗೆ ನುಗ್ಗಿ ಅದರಿಂದಾಗಿ ಬಚಾವಾಗುವುದು, ಕುಡುಕರ ಹಕ್ಕಿ ಓಡಿಯುವ ಜಾಣತನದ ವೇಷಗಳು ಇಂಥವೆಲ್ಲ ಯಾವಯಾವುದೋ ರೂಪಗಳಲ್ಲಿ ತೇಜಸ್ವಿಯವರ ಮುಂದಿನ ಕೃತಿಗಳಲ್ಲಿ ಬಳಕೆಗೆ ಬಂದಿವೆ. ಅಂದರೆ ಈ ಬಗೆಯ ಬರವಣಿಗೆ ಈ ಕೃತಿಯ ರಚನೆಯ ಕಾಲಕ್ಕೇ ತೇಜಸ್ವಿಯವರಿಗೆ ಸಿದ್ಧಿಸಿತ್ತು. ಮುಂದಿನ ಕ್ರಮಣಗಳು ಅನುಭವ ಪಾಕದ ರಸಗ್ರಹಣವನ್ನು ತಮ್ಮೆಲ್ಲ ಸಾಧ್ಯತೆಗಳೊಂದಿಗೆ ನಿರೂಪಿಸುವುದಾಗಿವೆ. ಮದುಮಗಳು ಕಥಾನಕವನ್ನು ಬಹಳವಾಗಿ ಹೋಲುವ ಸಂದರ್ಭಗಳೂ ಇಲ್ಲಿವೆ. ಇದು ಕಾಡಿನ ಆವರಿಸುವ ಗುಣ ಮತ್ತು ಶಕ್ತಿ ಎಂದು ಅನಿಸುತ್ತದೆಯೆ ಹೊರತು ಕುವೆಂಪು ಅವರ ಪ್ರಭಾವವೆಂದೆನಿಸುವುದಿಲ್ಲ.


ತೇಜಸ್ವಿ ವಿಮರ್ಶೆಗಾಗಿ ತವಕಪಟ್ಟು ಏನನ್ನೂ ಬರೆಯಲಿಲ್ಲ. ನಾನಿಲ್ಲಿ ನಿಲ್ಲದೆ ನಿಮ್ಮೊಂದಿಗೆ ಇದ್ರೆ ಇನ್ನೂ ಚೆನ್ನಾಗಿ ಮಾತಾಡಬಹುದು ಎಂಬಂತಿರುವುದು ಅವರಿಗೆ ಪ್ರಿಯವಾಗಿತ್ತು. ಅವರಿಗೆ ವಿಮರ್ಶಾಕಾರ್ಯದ ಬಗ್ಗೆ ಇದ್ದ ಮನೋಭಾವವನ್ನು ಅವರು ಮಾಡಿದ ಭಾಷಣವೊಂದರಲ್ಲಿ ಗಮನಿಸಬಹುದು ಚೆನ್ನಾಗಿ ವಿವೇಚನಾ ಶಕ್ತಿಯಿಂದ ಮಾತನಾಡುವವರು ಬಂದಿದ್ದಾರೆಂದು ಅನಂತಮೂರ್ತಿಯವರು ಹೇಳಿದರು. ಆದರೆ ಆ ಮೂವತ್ತು ವರ್ಷಗಳ ಹಿಂದೆ ನಾವು ಹೇಗಿದ್ದೆವೋ ಹಂಗಿರೋರೇ ಬಂದಿದ್ದಾರ್ರೀ, ಇವರ ನುಡಿಗಟ್ಟು, ಲಾಜಿಕ್, ಒಂದೇ ಥರ ಕಾಣ್ತದೆ.

ಆಲೋಚನೆ ನಿಂತ ನೀರಾಗುವುದರ ಕುರಿತು ಅವರಿಗೆ ಇದ್ದ ಕಾಳಜಿ ಅಪೂರ್ವವಾದದ್ದು. ಕಟುವಾದ, ನಿರ್ದಿಷ್ಟ ನಿಲುವುಗಳ ತೇಜಸ್ವಿ ಮೊತ್ತಮೊದಲ ಕೃತಿಯಲ್ಲಿಯೇ ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವುದನ್ನು, ಆದರ ಕೊಳಕು ವಿನ್ಯಾಸಗಳನ್ನು ತೀವ್ರವಾಗಿ ಪರಿಶೀಲಿಸುವುದನ್ನು ಕಾಣಬಹುದು. ವೆಂಕನ ಪಾತ್ರದ ಹಿಂದೆ ಅವನ ವ್ಯಕ್ತಿತ್ವ ರೂಪುಗೊಂಡ ಬಗೆಯನ್ನು ಮನೋವೈಜ್ಞಾನಿಕ ದೃಷ್ಟಿಯಿಂದ ಪರಿಶೀಲಿಸುವ ತೇಜಸ್ವಿ ಲಿಂಗನ ಮುಗ್ಧತೆಯ ಬಗ್ಗೆ ಅಂತಹ ಅನ್ವೇಷಣೆಯಲ್ಲಿ ತೊಡಗುವುದಿಲ್ಲ.

ಅನಂತಮೂರ್ತಿಯವರ ಕಳೆದುಹೋಗಿದ್ದು ದೊರೆತ ಮೊದಲ ಕಾದಂಬರಿಯು ಅವರ ಜೀವಿತ ಕಾಲದಲ್ಲೇ ಪ್ರಕಟವಾಯಿತು. ಅದಕ್ಕೆ ಬಲು ದೊಡ್ಡ ಪ್ರಚಾರವೂ ದೊರೆಯಿತು. ಆದರೆ ಕಾಡು ಮತ್ತು ಕ್ರೌರ್ಯ ಯಾವ ಸದ್ದನ್ನೂ ಮಾಡಲೇಯಿಲ್ಲವಾದರೂ ಇದೊಂದು ಹೊಸ ಪರಿಭಾಷೆಯ ಅನ್ವೇಷಣೆಯ ಪ್ರಯತ್ನವಾಗಿ ತೇಜಸ್ವಿಯವರಲ್ಲಿ ಆಗಲೇ ಹರಳುಗಟ್ಟುತ್ತಿದ್ದ ವೈಚಾರಿಕತೆಯ ರೂಪವಾಗಿ ಸೃಷ್ಟಿಯಾಗಿತ್ತು. ಆ ಕಾರಣದಿಂದಾಗಿ ಅದು ಮುಖ್ಯವೂ ಆಗಿತ್ತು.

ಕೊನೆಯದಾಗಿ ಈ ಕೃತಿಯ ಕೆಲವು ಪಾತ್ರಗಳು ನಿಜವಾದವೆಂದೂ, ನಳಿನಿ ದೇಶಪಾಂಡೆಯೆಂಬ ತೇಜಸ್ವಿಯವರ ಕಾವ್ಯನಾಮಕ್ಕೂ ಈ ಕೃತಿಯ ನಳಿನಳಿಗೂ ಅಗೋಚರ ಸಂಬಂಧವುಂಟೆಂದೂ, ಕೃತಿಯ ಬಗ್ಗೆ ಬರೆಯುವಾಗ ಹತ್ತು ಹದಿನೈದು ವರ್ಷಗಳ ಮಾನಸಿಕ ಘರ್ಷಣೆ ಮತ್ತು ಕ್ಲೇಶವೆಂದು ಹೇಳುವುದು ಮತ್ತು ಕೃತಿಯ ಆಟೋಬಯಾಗ್ರಾಫಿಕಲ್ ವಿಚಾರಗಳ ಬಗ್ಗೆ ದೀರ್ಘವಾಗಿ ಚಿಂತಿಸಿರುವುದೂ ಈ ಕಾರಣದಿಂದಾಗಿಯೇ ಎನ್ನುವವರುಂಟು. ಅದಕ್ಕೆ ಬೇರೆ ಅರ್ಥಗಳೂ ತೇಜಸ್ವಿ ಈ ಕೃತಿಯ ಬಗ್ಗೆ ಬರೆದದ್ದರಲ್ಲಿ ನಮಗೆ ದೊರೆಯುತ್ತವೆ.

■ **ಆರ್ ವಿಜಯರಾಘವನ್**



ಓ ದಿ ನಂ ಗ ಳ

ಮತ್ತೆ ಬಂತು ಶ್ರಾವಣ



ಮತ್ತೆ ಬಂತು ಶ್ರಾವಣ
ದ.ರಾ.ಬೇಂದ್ರ ಸ್ಮೃತಿ ಅಂತರ ಕಾಲೇಜು ಕವನ ಸ್ಪರ್ಧೆಯ ಆಯ್ದ ಕವಿತೆಗಳ ಸಂಕಲನ

ಸಂಪಾದಕ: **ವಿಕ್ರಮ ವಿಸಾಜಿ**

ಪ್ರಕಾಶಕರು:
ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ

ಪ್ರಕಟಣಾ ವರ್ಷ: ೨೦೧೪,
ಬೆಲೆ: ರೂ. ೨೦೦

'**ಮ**ತ್ತೆ ಬಂತು ಶ್ರಾವಣ' ಕಳೆದ ಮೂರು ದಶಕಗಳ ಹೊಸಬರ ಕಾವ್ಯದ ಆಯ್ದ ಆಂಥಾಲಜಿಯಾಗಿದೆ. ಎಂಬತ್ತರ ದಶಕದಿಂದ ಆರಂಭಿಸಿ, ಈಚಿನವರೆಗಿನ ಮೂವತ್ತು ವರ್ಷಗಳಲ್ಲಿ ಕ್ರೈಸ್ಟ್ ಕಾಲೇಜು ಕನ್ನಡ ಸಂಘವು ನಿರಂತರವಾಗಿ ನಡೆಸಿದ ದ.ರಾ. ಬೇಂದ್ರೆ ಸ್ಮೃತಿಯ ಕಾವ್ಯ ಸ್ಪರ್ಧೆಯ ಆಯ್ದ ಬಹುಮಾನಿತ ಕವಿತೆಗಳ ಸಂಕಲನ. ಇವು ಡಬಲ್ ಫಿಲ್ಟರ್‌ಗೆ ಒಳಗಾದ ಆಯ್ಕೆಗಳು. ಕಾವ್ಯದ ದಾಖಲಾತಿಯ ದೃಷ್ಟಿಯಿಂದ ಇದೊಂದು ಸ್ವಾಗತಾರ್ಹ ಪ್ರಯತ್ನ. ಇದಕ್ಕೆ ತಳಹದಿಯಾಗಿ ಕನ್ನಡ ಸಂಘ ರೂಪಿಸಿಕೊಂಡಿದ್ದ ಅಭಿರುಚಿ, ಕಾವ್ಯ ಪ್ರೀತಿ ಮುಖ್ಯವಾಗಿವೆ. ಸ್ಪರ್ಧೆಗೆ ಬಂದ ಸರಿಸುಮಾರು ಹತ್ತು ಸಾವಿರ ಕವಿತೆಗಳಲ್ಲಿ ಬಹುಮಾನಿತವಾದವು ಸುಮಾರು ಏಳುನೂರು. ಅದರಲ್ಲೂ ಈ ಸಂಕಲನಕ್ಕೆ ಆಯ್ಕೆಯಾದವು ಕೇವಲ ನೂರಾ ಮೂವತ್ತು. ಇದೊಂದು ಪ್ರಾತಿನಿಧಿಕ ಸಂಕಲನ.

ಈ ಸಂಕಲನದ ಬಹುಮಾನಿತ ಕವಿಗಳಲ್ಲಿ ಅನೇಕರು ಈಗ ಕಾವ್ಯಕೃಷಿಯಿಂದ ದೂರ ಸರಿದಿದ್ದಾರೆ. ಉಳಿದವರು ಒಂದು ನಿರಂತರತೆ ಕಾಪಾಡಿಕೊಂಡಿದ್ದಾರೆ. ಆದರೂ ಅದರ ಮೊದಲಿನ ಮಿಸುಕಾಟಗಳ ದಾಖಲೆ. ಕಾಲ ಯಾನದಲ್ಲಿ ಹಿಂದಕ್ಕೋಡಿ ನೋಡಿಕೊಳ್ಳುವುದು ಒಂದು ಅಪೂರ್ವ ಅನುಭವ. ಈ ಸಂಕಲನದ ಎಲ್ಲ ಪ್ರತಿಭಾವಂತರೂ ತಂತಮ್ಮ ಕ್ಷೇತ್ರಗಳಲ್ಲಿ ಕಾವ್ಯದಾಚೆಗೂ ಉಳಿಸಿಕೊಂಡು, ಬೆಳೆಸಿಕೊಂಡು ಬರುತ್ತಿರುವ ಗುಣಮಟ್ಟ ಹಾಗೂ ಅಭಿರುಚಿಗಳು ಗಮನಾರ್ಹ. ಮತ್ತು ಅವುಗಳ ಕೊಡುಗೆ ಕೂಡ ಕನ್ನಡ ಸಂಸ್ಕೃತಿಗೆ ಸಲ್ಲುತ್ತಿದೆ. ಅದು ಅಧ್ಯಾಪನ, ಪತ್ರಿಕೋದ್ಯಮ, ಚಿತ್ರಕಲೆ ಯಾವುದೇ ಆಗಿರಲಿ ಅವುಗಳ ಆಳದಲ್ಲಿ ಬೇಂದ್ರೆ ಕಾವ್ಯ ಸ್ಪರ್ಧೆಯಿಂದ ರೂಪುಗೊಂಡ ಅಭಿರುಚಿ ಇದೆ; ಗುಣಮಟ್ಟವಿದೆ. ಆಗಿದ್ದ ಚಿಗುರುಗಳು ಈಗ ಫಲಬಿಟ್ಟ ಮರಗಳಾಗಿವೆ.

ಇದನ್ನು ಸಂಪಾದನೆ ಮಾಡಿರುವ ವಿಕ್ರಮ ವಿಸಾಜಿ ತಮ್ಮ ಮುನ್ನುಡಿಯಲ್ಲಿ ಇವತ್ತಿನ ಕಾವ್ಯದ ಸ್ವರೂಪ ಕುರಿತು ಅನೇಕ ಪ್ರಶ್ನೆಗಳನ್ನು ಎತ್ತಿದ್ದಾರಾದರೂ ಒಟ್ಟು ಕಾವ್ಯದ ಹಿನ್ನೆಡೆಗೆ ಕಾರಣವಾದ ಅಂಶಗಳ ಬಗ್ಗೆ ಹೆಚ್ಚು ಚರ್ಚಿಸಿಲ್ಲ. ದಲಿತ ಬಂಡಾಯೋತ್ತರ ಕಾವ್ಯದ ನೈಜ ಚಲನೆಯ ಹಲವು ಎಳೆಗಳು ಇಲ್ಲಿವೆ ಅನ್ನುವ ಅವರು ದೇಹದ ಹಂಬಲ ಮತ್ತು ಆತ್ಮದ ಹಂಬಲ ಹೊಸರಾಗ ಹಾಡತೊಡಗಿವೆ ಅಂತಲೂ ಹೇಳುತ್ತಾರೆ.

ಒಳ್ಳೆಯ ಕಾವ್ಯದ ಓದಿಗೆ ದಕ್ಕುವ ಸಾರ್ಥಕ ಸಂಕಲನ ಇದು.

■

ಹೂ ಬುಟ್ಟಿ




ಹೂ ಬುಟ್ಟಿ
ನರಸಿಂಹಸ್ವಾಮಿ ಪದ್ಯಗಳ ಹೊಸ ಓದು

ಸಂಪಾದಕ: **ರಾಜೇಂದ್ರ ಪ್ರಸಾದ್**
ಪ್ರಕಾಶಕರು:
ಅನೇಕ, ನಂ. ೭೨,
'ಭೂಮಿಗೀತ', ೬ನೇ ತಿರುವು,
ಉದಯಗಿರಿ,
ಮಂಡ್ಯ – ೫೭೧೪೦೧
ಪ್ರಕಟಣಾ ವರ್ಷ: ೨೦೧೫,
ಬೆಲೆ: ರೂ. ೧೩೬/-

ಇದೊಂದು ಈ ಕಾಲಕ್ಕೆ ಅಪರೂಪವಾದ ಲೇಖನಗಳ ಗುಚ್ಛ. ಕೆ.ಎಸ್. ನರಸಿಂಹಸ್ವಾಮಿ ಅವರ ಶತಮಾನೋತ್ಸವದ ನಿಮಿತ್ತ ಹೊಸ ತಲೆಮಾರಿನ ಬರಹಗಾರರು ಸೂಕ್ಷ್ಮ ಮನಸ್ಸುಳ್ಳುವರು ಕೆ.ಎಸ್.ನ. ಕವಿತೆಗಳ ಜೊತೆಗೆ ನಡೆಸಿರುವ ಅನುಸಂಧಾನ ಅಥವಾ ಕಾವ್ಯಧ್ಯಾನ ಈ ಗುಚ್ಛದ ಹೆಗ್ಗಳಿಕೆ. ಹೂವು ಮತ್ತು ದಳ ಎಂಬ ಎರಡು ಭಾಗಗಳಲ್ಲಿ ಮೊದಲ ಹೂವಿನ ಭಾಗದಲ್ಲಿ ಮೂವತ್ತೊಂದು ಕವಿತೆಗಳ ಕುರಿತು ಬರಹಗಳಿವೆ. ಹಿರಿಯರು, ಕಿರಿಯರಿಬ್ಬರೂ ಜೊತೆಗೂಡಿ ಕೆಎಸ್‌ನ ಅವರ ಬಿಡಿ ಕವಿತೆಗಳಿಗೆ ಸ್ಪಂದಿಸಿದ್ದಾರೆ. ಪರಿಭಾಷೆಗಳು, ವಿಮರ್ಶೆಯ ಹತಾರುಗಳು ಯಾವುದೂ ಇಲ್ಲದೆ ನಿರುಮ್ಮಳವಾಗಿ ಒಂದು ಕವಿತೆಯೊಂದಿಗೆ ಸಹೃದಯರು ನಡೆಸುವ ಸಂವಾದ. ಜೊತೆಗೆ ತಮಗೆ ಆ ಕವಿತೆಯಿಂದ ದಕ್ಕಿದ್ದನ್ನು ಪ್ರಾಮಾಣಿಕವಾಗಿ ಮೊಗೆದು ಕೊಟ್ಟಿದ್ದಾರೆ. ಇನ್ನು ದಳದ ಎರಡನೇ ಭಾಗದಲ್ಲಿ ಐದು ಲೇಖನಗಳು ಕೆಎಸ್‌ನ ಕಾವ್ಯದ ಬಗ್ಗೆ ಹೆಸರಾಂತ ಬರಹಗಾರರು ಬರೆದವು. ಇವು ಕೂಡ ವಿಮರ್ಶೆಯ ಹಿಂಸೆಗಿಳಿಯದೆ ಒಂದು ಭಾವುಕ ನೆಲೆಯೊಳಗೇ ನರಸಿಂಹಸ್ವಾಮಿಯವರ ಕಾವ್ಯದ ಒಟ್ಟು ಸ್ವರೂಪದ ಬಗ್ಗೆ ತಮ್ಮ ಪಲುಕುಗಳನ್ನು ನುಡಿದಿವೆ. ಹೊಸ ತಲೆಮಾರಿನ ಯುವ ಮನಸ್ಸುಗಳು ಈ ಪ್ರಯತ್ನ ಅಭಿನಂದನಾರ್ಹ. ಯಾವ ಇಸಂ, ಕಣ್ಣಪಟ್ಟಿಗಳ ಊರುಗೋಲುಗಳ ಹಂಗಿಲ್ಲದೆ ಕವಿತೆಯ ಜೊತೆಗೆ ನಡೆಸುವ ಇಂಥ ಅನುಸಂಧಾನಗಳು ಆಪ್ತವಾಗುತ್ತವೆ. ಓದಲು ಪ್ರಿಯವೆನಿಸುತ್ತವೆ.

ನನ್ನ ಬದುಕು ನನ್ನ ಫೋಟೋಗ್ರಫಿ



ಕೆ ಜಿ ಸೋಮಶೇಖರ್
ನನ್ನ ಬದುಕು ನನ್ನ ಫೋಟೋಗ್ರಫಿ
ನಿರೂಪಣೆ:
ಬಿ.ಎಸ್. ಜಯಪ್ರಕಾಶ ನಾರಾಯಣ
ಪ್ರಕಾಶಕರು:
ಆಕೃತಿ, ೩೧/೧, ೧೨ನೇ ಮುಖ್ಯರಸ್ತೆ, ೩ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-೫೬೦ ೦೧೦
ಪ್ರಕಟಣಾ ವರ್ಷ: ೨೦೧೪,
ಬೆಲೆ: ರೂ. ೩೯೫/-

ಖ್ಯಾತ ಛಾಯಾಚಿತ್ರಗ್ರಾಹಕ ಕೆ.ಜಿ. ಸೋಮಶೇಖರ ಅವರ ಬದುಕು ಹಾಗೂ ಛಾಯಾಚಿತ್ರ ಕಲೆ ಕುರಿತಾದ ಅಪರೂಪದ ಪುಸ್ತಕ. ಸೋಮಶೇಖರ ಅವರು ತೆಗೆದಿರುವ ಕನ್ನಡದ ಹಾಗೂ ಇತರ ಭಾಷೆಯ ಲೇಖಕರು, ಕಲಾವಿದರ ಫೋಟೋಗಳು ಅಪರೂಪದ ಸಾಂಸ್ಕೃತಿಕ ಆಸ್ತಿ. ಆ ಕಾಲದ ಕಪ್ಪು-ಬಿಳುಪು ಛಾಯಾಚಿತ್ರಗಳು ಅಮೂಲ್ಯ. ಸೋಮಶೇಖರ ಅವರ ಬದುಕಿನ ಏರಿಳಿತಗಳು ಚಿತ್ರಕಲೆ ಹಾಗೂ ಫೋಟೋಗ್ರಫಿಯ ಪ್ರಯೋಗಗಳು. ತಾವು ಫೋಟೋ ತೆಗೆಯಲು ಹೋದ ಲೇಖಕ, ಕಲಾವಿದರು ಹಾಗೂ ದೊಡ್ಡ ಜನಗಳ ಜೊತೆಗಿನ ಅಪರೂಪದ ಅನುಭವ ಗಳನ್ನು ಸೋಮಶೇಖರರ ಮಾತುಗಳಲ್ಲಿ ಜಯಪ್ರಕಾಶ ನಾರಾಯಣ ದಾಖಲಿಸಿದ್ದಾರೆ. ನಮ್ಮಲ್ಲಿ ಲೇಖಕರನ್ನು ದೊಡ್ಡವರಾಗಿ ಕಾಣುವ ಪರಿಪಾಠ. ಅದು ನಮ್ಮ ಸಂಸ್ಕೃತಿಯ ವಿಶೇಷತೆಯೂ ಹೌದು. ಅವರ ಬಗ್ಗೆ ಇರುವ ಕುತೂಹಲ ಅವರ ಭಾವಭಂಗಿಗಳ, ಅದರಲ್ಲೂ ಮುಖಚಹರೆಗಳ ಸಮರ್ಥ ದಾಖಲೆಗಳನ್ನು ಸೋಮಶೇಖರ ತಮ್ಮ ಯಾನದ ಉದ್ದಕ್ಕೂ ಸಾರ್ಥಕವಾಗಿ ಮಾಡಿದ್ದಾರೆ. ಆದರೆ, ಅದಕ್ಕೆ ಸಿಕ್ಕ ಮನ್ನಣೆ ಮಾತ್ರ ಅತಿ ಕಡಿಮೆ. ಕತೆ, ಕಾವ್ಯ, ಇತ್ಯಾದಿ ಬರೆದವರು ಮಾತ್ರ ಸೃಜನಶೀಲರು ಅನ್ನುವ ಮೂಢನಂಬಿಕೆ ನಮ್ಮಲ್ಲಿ ಇರುವ ತನಕ ಸೋಮಶೇಖರ ಅಂಥವರ ಸಾರ್ಥಕ ಕೆಲಸಗಳು ಮಿಂಚುವುದು ಕಷ್ಟ.

ಸೋಮಶೇಖರ ಅವರು ತೆಗೆದ ಭಾವಚಿತ್ರಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಫೋಟೋಗ್ರಫಿಯ ಅನುಭವಗಳೊಂದಿಗೆ ಈ ಕೃತಿಯಲ್ಲಿ ದಾಖಲಾಗಿದೆ. ಆದರೆ, ಅವುಗಳ ಹಿನ್ನೆಲೆಗಳನ್ನು ಹಾಗೂ ಆಯಾ ಫೋಟೋಗಳನ್ನು ಕಂಪ್ಯೂಟರ್‌ನಲ್ಲಿ ಚಂದಗೊಳಿಸಲು ನಡೆಸಿರುವ ಪ್ರಯತ್ನಗಳಲ್ಲಿ ಅವುಗಳ ಸಹಜತೆಗೆ ಧಕ್ಕೆಯಾಗಿದೆ.

■ **ಡಿ.ವಿ. ಪ್ರಹ್ಲಾದ್**



ಸಂಚಯ
ಗ್ಯಾಲರಿ

SANCHAYA

Edited, Printed & Published by: D.V. PRAHLAD, No. 100, 2nd Main, 6th Block, 3rd Stage, 3rd Phase, Banashankari, Bangalore - 560 085, Ph: 080-2679 1925